Mr. SPEAKER.—Without Notice no matter can be brought up here. ತಾವು ನಿಯಮಾವಳಿಯನ್ನು ಅನುಸರಿಸಬೇಕು. ತಾವು ಎದ್ದುನಿಂತು ಪ್ರಾರಂಭ ಮಾಡಿದಿರೆಂದರೆ ತಮ್ಮಂತೆಯೇ ಮಿಕ್ಕವರೂ ಕೂಡ ಪ್ರಾರಂಭ ಮಾಡುತ್ತಾರೆ. ತಾವು ತಿಳಿದವರಾಗಿ ವಕೀಲರಾಗಿ ಅನುಭವ ಇರುವವರಾಗಿ ಹೀಗೆ ಮಾಡಿದರೆ ಹೇಗೆ ? ತಾವು ಈಗ ಏನು ವಿಚಾರವನ್ನು ಹೇಳಬೇಕೆಂದಿದ್ದೀರೋ ಅದನ್ನು ನನ್ನ ಛೇಂಬರಿಗೆ ಬಂದು ತಿಳಿಸಿ.

SRI BHEEMANNA KHANDRE.—Why are you prejudiced towards me.

ಅಧ್ಯಕ್ಷರು.—ಈ ತರಹ ಘಾತಕ ವರ್ತನೆ ಮಾಡುವವರ ಮಾತನ್ನು ಏಕೆ ಕೇಳಬೇಕು ? ಹೇಗೆ ಕೇಳಬೇಕು ? No, no, I request the Hon'ble Member to come to my Chamber. This type of thing I will not allow.

Budget Estimate for 1978-79 (General Discussion)
(Debate contd)

† ಶ್ರೀ ಬಿ. ರಾಮಯ್ಯ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಈಗ ತಾನೇ 1978-79ನೇ ಸಾಲಿನ ಆಯವ್ಯಯ ಪತ್ರವನ್ನು ನಮ್ಮ ಮಾನ್ಯ ಆರ್ಥಿಕ ಮಂತ್ರಿಗಳು ಮಂಡಿಸಿದ್ದಾರೆ. ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಬೆಂಬಲಿಸುತ್ತಾ ಈ ಸಂಬಂಧವಾಗಿ ಕೆಲವಾರು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟ ಮೊದಲನೆಯದಾಗಿ ಹೇಳುವುದಾದರೆ, ಆಗಿನ ಈ ಕರ್ನಾಟಕದ ಜನತೆ ಏನು ಸ್ವಾತಂತ್ರ್ಯ ನಂತರ 30 ವರ್ಷಗಳಲ್ಲಿ ಸರ್ಕಾರ ಏನನ್ನು ಮಾಡಬಹುದೆಂದು ಕಾದು ಬೇಸತ್ತ ಹಂತದಲ್ಲಿ ಕಳೆದ 5—6 ವರ್ಷಗಳಲ್ಲಿ ತಮ್ಮದಿಟ್ಟ ಹೆಜ್ಜೆಯನ್ನಿಟ್ಟಂತಹ ಶ್ರೀಮಾನ್ ದೇವರಾಜ ಅರಸು ರವರ ಸರ್ಕಾರ ಬಡಜನತೆಗಾಗಿ ಹಾಕಿಕೊಂಡಿರುವ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಈ ಕರ್ನಾಟಕದ ಜನತೆ ಮೆಚ್ಚಿ ಈಗತಾನೇ ನಮ್ಮನ್ನು ಆಯ್ಕೆ ಮಾಡಿ ಈ ಸದನದಲ್ಲಿ ಕುಳಿತಿರುವಂತೆ ವ್ಯವಸ್ಥೆ ಮಾಡಿಕೊಟ್ಟಿದೆ. ಈ ಸಂಬಂಧದಲ್ಲಿ, ಹಿಂದುಳಿದವರ ದೀನದಲಿತರ, ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಈ ಸಮಯದಲ್ಲಿ ಅನೇಕ ಕಾರ್ಯಕ್ರಮಗಳನ್ನು ತಾವು ಹಾಕಿಕೊಂಡಿದ್ದೀರಿ. ನಾನು ಈ ಸಂಬಂಧದಲ್ಲಿ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

SRI A. LAKSHMISAGAR.—Hon, Minister for Finance is absent from the House when discussion is on it. It is his duty to be present in the House.

ಶ್ರೀ ಮಳ್ಳೂರು ಆನಂದರಾವ್.—ಸರ್ಕಾರಕ್ಕೆ ಏನೋ ಆದಂತೆ ಕಾಣುತ್ತದೆ. ಮಂತ್ರಿಗಳೇ ಇರುವುದಿಲ್ಲ. ಮಾನ್ಯ ಪ್ರಭಾಕರ್‌ರವರೊಬ್ಬರು ಕುಳಿತಿದ್ದರೂ ಕೂಡ ಅವರು ಹೇಳಿದ್ದನ್ನೆಲ್ಲ ಮರೆಯುತ್ತಿರುತ್ತಾರೆ. If the Government is not interested we are not going to be here. ನಡೆಯಿರಿ ಹೋಗೋಣ.

(ಈ ಸಂದರ್ಭದಲ್ಲಿ ಎಲ್ಲ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸಭಾತ್ಯಾಗ ಮಾಡಲು ಸಿದ್ಧರಾಗಲು ಎದ್ದು ನಿಲ್ಲಲು ಮಾನ್ಯ ಅಧ್ಯಕ್ಷರವರು ಮಂತ್ರಿಗಳನ್ನು ಕರೆಸುತ್ತೇನೆಂದು ಸಮಾಧಾನ ಪಡಿಸಿ ಕೂರಿಸಿದರು).

ಶ್ರೀ ಮಳ್ಳೂರು ಆನಂದರಾವ್.—ಯಾವ ಮಂತ್ರಿಗಳೂ ಇಲ್ಲ, ಮಾನ್ಯ ಮುಖ್ಯ ಮಂತ್ರಿಗಳು ಇಲ್ಲ, ಮಾನ್ಯ ರಂಗನಾಥ್‌ರವರು ಇಲ್ಲ, ಮಾನ್ಯ ಹಣಕಾಸಿನ ಸಚಿವರೂ ಇಲ್ಲ. ಆದ್ದರಿಂದ, ನಾವು ಕೂಡ ಹೊರಗಡೆ ಹೋಗುತ್ತೇವೆ ಬಿಡಿ, ಬೇರೆ ಕೆಲಸ ಇದೆ. ಮಾನ್ಯ ಮಂತ್ರಿಗಳಿಗೆ ಮಾತ್ರವೇ ಕೆಲಸವಿರುವುದು, ನಮಗೆ ಯಾರಿಗೇನು ಇಲ್ಲವೇ ?

ಅಧ್ಯಕ್ಷರು.—ಅವರ ಕಡೆಯ ನಾಲ್ಕು ಜನ ಮಂತ್ರಿಗಳಿದ್ದಾರೆ, ಅವರು ನೋಟ್ ಮಾಡಿಕೊಳ್ಳುತ್ತಾರೆ.

ಶ್ರೀ ಮಳ್ಳೂರು ಆನಂದ ರಾವ್.—ನೋಟ್ ಮಾಡಿಕೊಳ್ಳುವರು ಯಾರು ? ಸರ್ಕಾರದ ಪರ ವಾಗಿ ಉತ್ತರ ಕೊಡುವವರು ಯಾರು ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಾಲ್ಕು ಮಂದಿ ಮಾನ್ಯ ಮಂತ್ರಿಗಳಿದ್ದಾರೆ, ಅವರು ಎಲ್ಲ ವಿಚಾರ ಗಳನ್ನು ನೋಟ್ ಮಾಡಿಕೊಳ್ಳುತ್ತಿದ್ದಾರೆ. ಇನ್ನೂ ಹೆಚ್ಚಿಗ ಮಂದಿ ಮಂತ್ರಿಗಳು ಬೇಕಾದರೆ ಕರೆ ಸೋಣ. ಊಟಕ್ಕೆ ಹೋಗಿದ್ದಾರೆ, ಬರುತ್ತಾರೆ, ತಾವು ಹೆಚ್ಚಾಗಿ ಕಾರ್ಯಕಲಾಪದ ಸಮಯವನ್ನು ಹಾಳುಮಾಡದೆ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮಿಸಾಗರ್.—ಮಾನ್ಯ ಆನಂದರಾವ್‌ರವರು ಮಂತ್ರಿಗಳ ಗೈರು ಹಾಜರಿ ಬಗ್ಗೆ ಹೇಳಿದರು. ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ ನಡೆಯುತ್ತಿರುವಾಗ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿ ಇರುವುದು ಬೇಡವೆ ? ಸಂಬಂಧಪಡದೆ ಇರುವ ಮಂತ್ರಿಗಳು ಸುಮ್ಮನೆ ಹೆಸರಿಗೆ ಕುಳಿತಿದ್ದಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅದಕ್ಕೆ ಸಂಬಂಧಪಟ್ಟ ಮಂತ್ರಿಗಳೇ ಇರಬೇಕೆಂದು ಇಲ್ಲ. ಮಂತ್ರಿ ಮಂಡಲ ಎಂದರೆ ಎಲ್ಲರಿಗೂ ಜವಾಬ್ದಾರಿ ಇರುತ್ತದೆ.

2-30 P. M.

SRI A. LAKSHMISAGAR.—Sir, it is very relevant and reasonable and it is the duty of the Hon'ble Minister to be present in the House when general discussion on the Budget takes place so as to enable him to reply to the points raised. If he cannot understand what the Members are going to speak about the budget, how can he reply ? If he is not present in the House, he can engage *** to note down the points and thereafter reply. Sir, they do not seem to be serious. My friend Sri Baskara Shetty does not seem to understand the seriousness. I am sorry.

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ಅವರು ಕ್ಲರ್ಕ್ ಅನ್ನುವ ಒಂದು ಪದವನ್ನು ಉಪಯೋಗ ಮಾಡಿದ್ದಾರೆ. ಮಾನ್ಯ ಮಂತ್ರಿಗಳನ್ನು ಒಬ್ಬ *** ಎಂದು ಹೇಳಿ ಕೊಳ್ಳುವಷ್ಟರ ಮಟ್ಟಿಗೆ ಹೋಗಿ ದ್ದಾರೆ. ನಮ್ಮ ವಿರೋಧಪಕ್ಷದವರು ಆ ಮಟ್ಟಕ್ಕೆ ಹೋಗಬಾರದು. ಮಾನ್ಯ ಮಂತ್ರಿಗಳು ಒಬ್ಬ ಜವಾಬ್ದಾರಿ ಮಂತ್ರಿಗಳಾಗಿದ್ದಾರೆ. ಒಬ್ಬರಿಗೊಬ್ಬರಿಗೆ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇರುತ್ತದೆ. ಅದರಂತೆ ಇಲ್ಲಿರುವ ಮಂತ್ರಿಗಳು ನೋಟ್ ಮಾಡಿಕೊಳ್ಳುತ್ತಿದ್ದಾರೆ.

ಅಧ್ಯಕ್ಷರು.—*** ಅಂತ ಪದಗಳನ್ನು ಇಲ್ಲಿ ಉಪಯೋಗಿಸುವುದು ಬೇಡ. ಆ ಪದವನ್ನು ತೆಗೆಸಿಹಾಕುತ್ತೇನೆ.

SRI A. LAKSHMISAGAR.—Sir you must pull them up. I have perfectly used the parliamentary words. It is within your jurisdiction to pull up any Minister.

SRI M. C. BASAPPA.—Sir, let the Ministers act with some responsibility. ತಾವು ಆ ಪದವನ್ನು ತೆಗೆಸಿಹಾಕುತ್ತೇನೆಂದು ಹೇಳಿದಿರಲ್ಲಾ ಅದು ಅನ್‌ಪಾರ್ಲಿಮೆಂಟರಿ ಏನೂ ಅಲ್ಲ. ಅವರು ಈ ರೀತಿ ಮಾಡುತ್ತಾ ಇದ್ದಾರಲ್ಲಾ ಎಂದು ಹೇಳಿದರೆ ಅದು ತಪ್ಪೆ ? I would like to submit one thing. Is the Chair satisfied with the behaviour of the Ministers since this morning ? Should they behave like that ? Are they not responsible people ? Have they no responsibility to this House ?

*** word/words expunged as ordered by the Chair.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸ್ವಾಮಿ, ಎಲ್ಲಾ ಮಂತ್ರಿಗಳು ಎಲ್ಲಾ ಸಂದರ್ಭಗಳಲ್ಲೂ ಇರಬೇಕು ಎಂತ ಏನೂ ಇಲ್ಲ. ಈಗ ಈ ಸಭೆಯಲ್ಲಿ ೪ ಜನ ಮಂತ್ರಿಗಳು ಇದ್ದಾರೆ, ಒಬ್ಬೊಬ್ಬರಿಗೊಬ್ಬರಿಗೆ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ. ಅವರು ಮಾನ್ಯ ಸದಸ್ಯರುಗಳು ಹೇಳುವುದನ್ನು ನೋಟ ಮಾಡಿಕೊಳ್ಳುತ್ತಾರೆ.

SRI A. LAKSHMISAGAR. Sir, please hear the tenor of the argument of Sri Bhaskara Shetty.

MR. SPEAKER.—Now that the concerned Minister has come, the hon. Member Sri B. Ramaiah may continue his speech.

[THE CHAIRMAN.—(SMT. SUMATI B. MADIMAN) in the Chair]

† ಶ್ರೀ ಬಿ. ರಾಮಯ್ಯ (ಶೃಂಗೇರಿ).—ಸ್ವಾಮಿ, ಈ ಕರ್ನಾಟಕದಲ್ಲಿ ಜನಸಾಮಾನ್ಯರಿಗೆ **ಅತ್ಯಂತ ಮೂಲಭೂತವಾದಂಥಾ** ಜೀವನಾವಶ್ಯಕವಾದಂಥಾ ವಸ್ತುಗಳು ಯಾವುವು ಎಂದರೆ ಇರುವುದಕ್ಕೆ ಒಂದು ಮನೆ, ಹೊಟ್ಟೆ ತುಂಬಾ ಊಟ ಮತ್ತು ತೊಡಲು ಒಂದು ಬಟ್ಟೆ ಇವು ಮುಖ್ಯವಾದವುಗಳು. ಇದಕ್ಕೆ ಜನ ಬಹಳ ಕಷ್ಟಪಡುತ್ತಾ ಇದ್ದಾರೆ, ಇದನ್ನು ಬಗೆಹರಿಸುವ ದಿಶೆಯಲ್ಲಿ ಈವೊತ್ತಿನ ದಿವಸ ನಮ್ಮ ಸರ್ಕಾರದವರು ನಮ್ಮ ಕಣ್ಣು ಮುಂದೆ ಎತ್ತಿ ತೋರಿಸುತ್ತಾ ಇದ್ದಾರೆ. ತಮ್ಮ ಕರ್ತವ್ಯಗಳನ್ನು ಈ ಬಗ್ಗೆ ಯಾವರೀತಿ ಮಾಡುತ್ತಾ ಇದ್ದಾರೆ ಅನ್ನುವುದನ್ನು ಸರ್ಕಾರದವರು ನಮ್ಮ ಮುಂದೆ ಇಟ್ಟಿದ್ದಾರೆ. ಈ ಸಂದರ್ಭದಲ್ಲಿ ತಮಗೆ ಸರ್ವಜ್ಞ ಪದದ ಒಂದು ಶ್ಲೋಕವನ್ನು ತಮ್ಮ ಗಮನಕ್ಕೆ ತರುತ್ತೇನೆ, ಸರ್ವಜ್ಞ ಈ ರೀತಿ ಹೇಳಿದ್ದಾನೆ. ಬೆಚ್ಚನೆಯ ಮನೆಯಿದ್ದು, ನೆಚ್ಚನೆಯ ಸತಿ ಇರಲು ಸ್ವರ್ಗಕ್ಕೆ ಕಿಚ್ಚು ಹಚ್ಚಿಂದ ಸರ್ವಜ್ಞ ಎಂದು. ಇದನ್ನು ಈ ಸರ್ಕಾರ ಮಾಡಿ ತೋರಿಸಿ ಕೊಟ್ಟಿದೆ ಎಂದು ಹೇಳಿದರೆ ಮಾನ್ಯ ವಿರೋಧಪಕ್ಷದವರೂ ಕೂಡ ಇದನ್ನು ಒಪ್ಪುತ್ತಾರೆ. ಮೊದಲನೆಯದಾಗಿ ಜನತಾ ಗೃಹ ನಿರ್ಮಾಣದ ಬಗ್ಗೆ ಹೇಳುತ್ತೇನೆ. ಜನಸಾಮಾನ್ಯರಿಗೆ ಒಂದು ಗುಡಿಸಲೂ ಇಲ್ಲದೆ ಬೇಸಿಗೆಯಲ್ಲಿ ಸುಡುತ್ತಿದ್ದರು, ಹಾಗೆಯೇ ಮಳೆಗಾಲದಲ್ಲಿ ನಿಲ್ಲಲು ಒಂದು ಮನೆಯಿಲ್ಲದೆ ನೆನೆಯುತ್ತಿದ್ದರು, ಇದಕ್ಕೆ ಒಂದು ವ್ಯವಸ್ಥೆಯನ್ನು ನಮ್ಮ ಸರ್ಕಾರದವರು ಮಾಡಿಕೊಟ್ಟಿರುವುದು ನಮ್ಮ ಕಣ್ಣು ಮುಂದೆ ಇದೆ. ಒಂದು ಪಕ್ಷಿಯೂ ಕೂಡ ಮಳೆಗಾಲದಲ್ಲಿ ತಾನು ನೆನೆಯದೇ ಇರುವ ಹಾಗೆ ಮಾಡಿಕೊಳ್ಳುವುದಕ್ಕೆ ಒಂದು ಗೂಡನ್ನು ಕಟ್ಟಿ ಬದುಕುವುದಕ್ಕೆ ಯಾವ ರೀತಿ ಯೋಜನೆ ಮಾಡುತ್ತದೆಯೋ ಅದೇ ರೀತಿ ನಮ್ಮ ಸರ್ಕಾರದವರು ದೀನದಲಿತರಿಗೆ, ನಿರ್ಗತಿಕರಿಗೆ ವಾಸಕ್ಕೆ ಒಂದು ಯೋಗ್ಯವಾದ ಮನೆಗಳನ್ನು ಕಟ್ಟಿಕೊಡಬೇಕೆಂದು ಯೋಚನೆ ಮಾಡಿ, ಈ ಬಗ್ಗೆ ಒಂದು ಬೃಹದಾಕಾರವಾದ ಯೋಜನೆಯೊಂದನ್ನು ಹಾಕಿಕೊಂಡು ಜನತಾ ಗೃಹ ನಿರ್ಮಾಣದ ಯೋಜನೆಯ ಮುಖಾಂತರ ಎಲ್ಲರಿಗೂ ಒಂದೊಂದು ಮನೆಯನ್ನು ಕಟ್ಟಿಕೊಡುತ್ತಾ ಇರುವುದು ನಾವು ನೋಡುತ್ತಾ ಇದ್ದೇವೆ. ಅವರಿಗೆ ಮನೆಯನ್ನು ಕಟ್ಟಿ ಕೊಟ್ಟ ಮಾತ್ರಕ್ಕೆ ಅವರ ಕರ್ತವ್ಯ ಮುಗಿಯಲಿಲ್ಲ. ನಮ್ಮ ಜನತೆಯಿಂದ ಬಹಳ ದಿವಸದಿಂದ ಉಳುವವನೇ ಭೂಮಿಯ ಒಡೆಯನಾಗಬೇಕು ಎಂಬ ಒಂದು ಕೂಗು ಇತ್ತು. ಉಳುವವನೇ ಭೂಮಿಯ ಮಾಲೀಕನಾಗಬೇಕು ಅನ್ನುವ ಒಂದು ಕೂಗು ಏನು ಇತ್ತೊ, ಆ ಕರ್ತವ್ಯದಲ್ಲಿಯೂ ಕೂಡ ನಮ್ಮ ಸರ್ಕಾರದವರು ಕಾರ್ಯಪ್ರವೃತ್ತಿಯುಳ್ಳವರಾಗಿದ್ದಾರೆ. ಈ ಒಂದು ಅವಕಾಶವನ್ನು ನಮ್ಮ ಸರ್ಕಾರದವರು ಮಾಡಿಕೊಟ್ಟಿರುವುದರಿಂದ ಈವೊತ್ತಿನ ದಿವಸ ನಮ್ಮ ಕರ್ನಾಟಕದಲ್ಲಿರುವ ಜನಸಾಮಾನ್ಯರು ಬಹಳ ಸಂತೃಪ್ತಿ ಉಳ್ಳವರಾಗಿದ್ದಾರೆ. ಈವೊತ್ತಿನ ದಿವಸ ಅವರಿಗೆ ಒಂದು ಮನೆ ಮಾಡಿಕೊಟ್ಟಿರುವುದರಿಂದ ತಾನು ತನ್ನ ಮಕ್ಕಳು ಎಲ್ಲರೊಂದಿಗೆ ಸಂವೃದ್ಧಿಯಾದ ಜೀವನ ಸಾಗಿಸಿಕೊಂಡು ಸಂತೃಪ್ತಿಯಿಂದ ಹೋಗುತ್ತಾ ಇರುವುದನ್ನು ನೋಡಿದರೆ ಇದು ಒಂದು ಮುನ್ಸೂಚನೆಯ ಶುಭ ಚಿಹ್ನೆ ಎಂದು ನನಗೆ ಕಾಣುತ್ತದೆ.

ಇನ್ನು ಎರಡನೆಯದಾಗಿ ಹೇಳುವುದಾದರೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ದುಡಿಯುವಂಥಾ ದಿನಕೂಲಿಯವರಿಗೆ ನಿರ್ದಿಷ್ಟವಾಗಿ ಇಂತಿಷ್ಟು ಸಂಬಳ ಕೊಡಬೇಕೆಂದು ನಮ್ಮ ಸರ್ಕಾರದವರು ಮಾಡಿ ಕೊಟ್ಟಿದ್ದಾರೆ. ನಾನು ಶೃಂಗೇರಿ ಕ್ಷೇತ್ರದಿಂದ ಬಂದಿರುವವನಾಗಿರುವುದರಿಂದ ಮಲೆನಾಡಿನ ಬಗ್ಗೆ ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ನಮ್ಮ ಮಲೆನಾಡು ಪ್ರದೇಶ ಬಯಲು ಸೀಮೆ. ಈ ಮಲೆನಾಡು ಪ್ರದೇಶದಲ್ಲಿ ಕೂಲಿಗಾರರು ತಮ್ಮ ದಿನನಿತ್ಯದ ಅವಶ್ಯಕತೆಗಳನ್ನು ಸಾಗಿಸಿ

ಕೊಂಡು ಹೋಗಬೇಕಾದರೆ ಮೊದಲು ಬಹಳ ಕಷ್ಟ ಇತ್ತು. ಈಗ ಜನರು ಜಾಗೃತಿಗೊಂಡಿದ್ದಾರೆ. ಈಗ ಅವರಿಗೆ ಧೈರ್ಯ ಬಂದಿದೆ. ಈಗ ನಮ್ಮ ಸರ್ಕಾರದವರು ಇಂತಿಂಥಾವರಿಗೆ ಇಂತಿಷ್ಟು ಸಂಬಳ ಕೊಡಬೇಕು ಎಂದು ನಿರ್ದಿಷ್ಟಪಡಿಸಿರುವುದರಿಂದ ಆ ಜನರು ಈ ಸಂಬಳವನ್ನು ಕೇಳತಕ್ಕಂಥಾ ಧೈರ್ಯ ಬಂದು ಅವರು ತಮ್ಮ ಜೀವನವನ್ನು ಚೆನ್ನಾಗಿ ಸಾಗಿಸಿಕೊಂಡು ಹೋಗುತ್ತಿದ್ದಾರೆ. ಈ ರೀತಿಯಾಗಿ ನಮ್ಮ ಸರ್ಕಾರದವರು ಸುಧಾರಿಸುವಂಥಾ ಒಳ್ಳೊಳ್ಳೆಯ ಕೆಲಸವನ್ನು ಮಾಡಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮೂರನೆಯದಾಗಿ ನೆಚ್ಚನೆಯ ಸತಿ ಇರಲು ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಅನ್ನುವ ಒಂದು ಪದಕ್ಕೆ ಅರ್ಥ ಹೇಳಬೇಕಾದರೆ ಇದು ಅವರವರ ಪಾಲಿಗೆ ಸೇರಿದ್ದು. ಇದಕ್ಕೆ ಸರ್ಕಾರ ಏನೂ ಮಾಡು ವುದಕ್ಕಾಗುವುದಿಲ್ಲ.

ಇನ್ನು ವಿದ್ಯಾಭ್ಯಾಸದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ಈಗ ಸಾಮಾನ್ಯವಾಗಿ ಎಷ್ಟೋ ಕಡೆಗಳಲ್ಲಿ ಶಾಲೆಗಳನ್ನು ತೆರೆಯುತ್ತಿದ್ದೀರಿ, ಶಾಲಾ ಕಟ್ಟಡಗಳನ್ನೂ ಕೂಡ ಕಟ್ಟುತ್ತಿದ್ದೀರಿ. ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ ನಮ್ಮ ಮಲೆನಾಡು ತುಂಗ, ಭದ್ರಾ ನೇತ್ರಾ ಈ ಎಲ್ಲಾ ನದಿಗಳಿಂದ ಕೂಡಿದ ಪ್ರದೇಶ. ತಾಯಿ ತುಂಗೆ ಇರತಕ್ಕಂಥಾ ನಮ್ಮ ಶೃಂಗೇರಿಯಲ್ಲಿ ಎಲ್ಲಾ ಸಂಪನ್ಮೂಲಗಳೂ ಕೂಡ ಕೇಂದ್ರೀಕೃತವಾಗಿ, ಸಂಪದ್‌ಭರಿತವಾಗಿ ಜನರು ಸಂತೃಪ್ತಿಯಿಂದ ಇದ್ದಾರೆ. ನಮ್ಮ ಶೃಂಗೇರಿಗೆ ೧೮ ಮೈಲಿ ದೂರದಲ್ಲಿ ಈ ಎಲ್ಲಾ ನದಿಗಳೂ ಬಂದು ಸೇರುತ್ತವೆ. ಸಾಮಾನ್ಯವಾಗಿ ನಮ್ಮ ಮಲೆನಾಡಿನಲ್ಲಿ ಒಂದೊಂದು ಮನೆಗೂ ಬಹಳ ದೂರ ಇರುವುದರಿಂದ ಒಂದೊಂದು ಮನೆಗೂ ಒಂದೊಂದು ಊರು ಹೇಳುತ್ತೇವೆ. ನಮ್ಮ ಕಡೆ ಎಲ್ಲೆಲ್ಲಿ ಪಾಠಸಾಲೆಗಳು ಇವೆಯೋ ಅಲ್ಲಿ ಆ ಉಪಾಧ್ಯಯರಿಗೆ ವಾಸಿಸಲು ಸರಿಯಾದ ವಸತಿ ಇಲ್ಲ. ೫-೬ ಮೈಲಿಗೊಂದು ಅವರಿಗೆ ವಸತಿ ಇರು ವುದೇ ಕಷ್ಟ. ಇದರಿಂದ ಮಳೆಗಾಲದಲ್ಲಿ ಅನೇಕ ಶಾಲೆಗಳು 3 ತಿಂಗಳು ಮುಚ್ಚಿರುತ್ತವೆ. ಇದು ಅಧಿಕೃತ ವಾಗಿ ಗೊತ್ತಿಲ್ಲದೇ ಇದ್ದರೂ ಕೂಡ ನಾನು ಅದಧಿಕೃತವಾಗಿ ಕಾಣುತ್ತಾ ಇದ್ದೇನೆ. ಹೀಗೆ ಮೂರುತಿಂಗಳ ಕಾಲ ಆ ಹುಡುಗರಿಗೆ ವಿದ್ಯಾಭ್ಯಾಸ ಇಲ್ಲದೇ ಹೋದರೆ ಅವನು ಕಲಿತು ಇರುವುದೆಲ್ಲಾ ಮರೆತು ಹೋಗು ತ್ತದೆ. ಹಾಗಾಗಬಾರದು. ಈ ದಿಶೆಯಲ್ಲಿ ನಮ್ಮ ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಎಲ್ಲೆಲ್ಲಿ ಪಾಠಶಾಲೆಗಳು ಇವೆಯೋ ಅಲ್ಲಲ್ಲಿ ಉಪಾಧ್ಯಾಯರಿಗೆ ವಸತಿಗಳನ್ನು ಕಟ್ಟುವ ಯೋಜನೆಯನ್ನು ಮಾಡ ಬೇಕು. ಆ ದಿಶೆಯಲ್ಲಿ ಅವರು ಕಾರ್ಯಪ್ರವೃತ್ತಿ ಉಳ್ಳವರಾಗಿರಬೇಕು ಎಂದು ಹೇಳುತ್ತೇನೆ.

ಇನ್ನು ನಮ್ಮ ಮಲೆನಾಡಿನಲ್ಲಿ ನೀರಿನ ಕೊರತೆ ಅನೇಕ ಕಡೆಗಳಲ್ಲಿ ಇರುವುದನ್ನು ನಾವು ನೋಡುತ್ತಾ ಇದ್ದೇವೆ. ಶ್ರೀಮಾನ್ ಕೆ. ವಿ. ಪುಟ್ಟಪ್ಪನವರು ರಷ್ಯಾ ದೇಶಕ್ಕೆ ಹೋಗಿದ್ದಾಗ್ಗೆ ಕರ್ನಾಟಕವನ್ನು ಕುರಿತು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ನೀನು ಎಲ್ಲೇ ಇರು ಎಲ್ಲ ರಿಗೂ ತೌರುಮನೆಯಾಗಿ ನಮ್ಮ ನಾಡಿಗೆ ಬಾ ಎನ್ನುವ ಒಂದು ಮಾತನ್ನು ಹೇಳಿದ್ದಾರೆ. ಹಾಗೆ ನಮ್ಮ ಮಲೆನಾಡಿನಲ್ಲಿ ಹೆಚ್ಚು ನದಿಗಳು ಇದ್ದು ಸಂಮೃದ್ಧಿಯಾಗಿ ನೀರು ಇದ್ದರೂ ಕೂಡ ಈ ನದಿಯ ಪ್ರಯೋಜನವನ್ನು ನಾವು ಉಪಯೋಗಿಸಿ ಕೊಳ್ಳದೆ ಬೇರೆಯವರಿಗೆ ಕೊಡುತ್ತಾ ಇದ್ದಾರೆ. ನಮಗೆ ಆ ನೀರಿನ ಪ್ರಯೋಜನ ಈಪೊತ್ತು ಇಲ್ಲವಾಗಿದೆ. ನಮ್ಮ ಕಡೆ ಎಲ್ಲಾ ಕಡೆಯೂ ನೀರು ಇದ್ದರೂ ಸಹ ನಮಗೆ ಏನು ಪ್ರಯೋಜನವಿಲ್ಲದಂತಾಗಿದೆ. ನಮ್ಮ ಮಿತ್ರರೊಬ್ಬರು ವಿರೋಧ ಪಕ್ಷದವರೊಬ್ಬರು ಕಳೆದ ಅಧಿವೇಶನದಲ್ಲಿ ಈ ಬಗ್ಗೆ ಒಂದು ಮಾತು ಹೇಳಿದರು. ಅದೇನೆಂದರೆ ರೈತರು ನೀರಿಗಾಗಿ ಪಡುವಂಥಾ ಕಷ್ಟಗಳ ಬಗ್ಗೆ ಟೆಲಿಗ್ರಾಂಗಳು ಬರುತ್ತಾ ಇದೆ ಎಂದು ಹೇಳಿದ್ದಾರೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ರೈತರು ನೀರಿಗಾಗಿ ಪಡುವ ಕಷ್ಟವನ್ನು ತಪ್ಪಿಸಿ ಅವರಿಗೆ ಅದರ ಉಪಯೋಗ ಆಗುವ ಹಾಗೆ ನಮ್ಮ ಸರ್ಕಾರದವರು ಎಚ್ಚೆತ್ತು ಒಂದು ವ್ಯವಸ್ಥೆಯನ್ನು ಮಾಡಿಕೊಡ ಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನನ್ನ ಕ್ಷೇತ್ರವಾದ ಶೃಂಗೇರಿಯ ತಾಲ್ಲೂಕು ಕೊಪ್ಪದಲ್ಲಿ ಯಾರಾದರೂ ಪ್ರವಾಸ ಮಾಡುವಾಗ ಕುಡಿಯಲು ನೀರು ಇಲ್ಲ ಎಂದರೆ ಆಶ್ಚರ್ಯಪಡಬಹುದು. ಮಲೆನಾಡಿನಲ್ಲಿ ಎತ್ತ ನೋಡಿದರೂ ಕಾರಂಜಿಯೋಪಾದಿಯಲ್ಲಿರತಕ್ಕ ಬುಗ್ಗೆಗಳು ನೀರನ್ನು ಚೆಲ್ಲುತ್ತಿರುತ್ತವೆ. ಬೆಂಗಳೂರಿನಂಥ ನಗರಗಳಲ್ಲಿ ನಾವು ಕಾರಂಜಿಗಳನ್ನು ಏನು ನೋಡುತ್ತೇವೆ. ಆ ರೀತಿಯಲ್ಲಿ ಪ್ರಕೃತಿದತ್ತವಾದ ಕಾಡುಗಳಲ್ಲಿ ನೀರು ಎಲ್ಲಾ ಕಡೆಯಲ್ಲಿಯೂ ಕಾಣುತ್ತಿರುತ್ತದೆ. ಆದರೆ ಇದನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಅದಕ್ಕೆ ಬೇಕಾದಂಥ ಆವರಣವನ್ನು ನಿರ್ಮಾಣ ಮಾಡಿ ಪೈಪುಗಳ ಮುಖಾಂತರ ನೀರನ್ನು ಪಕ್ಕದ ಹಳ್ಳಿಗಳಿಗೆ

ಸಾಗಿಸಿ, ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ. ಈದಿಸೆಯಲ್ಲಿ ಸರ್ಕಾರದವರು ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದವರು ಓಪನ್ ವೆಲ್‌ಗಳನ್ನು ಮತ್ತು ಬೋರ್‌ವೆಲ್‌ಗಳನ್ನು ನಿರ್ಮಾಣ ಮಾಡಿ ಈ ಸಮಸ್ಯೆಯನ್ನು ಬಗೆ ಹರಿಸುತ್ತೇವೆಂದು ದೀರ್ಘವಾಗಿ ಫಣ ತೊಟ್ಟಿದ್ದಾರೆ. ಇಂಥ ಯೋಜನೆಗಳನ್ನು ಹಾಕುವುದರ ಮುಖಾಂತರ ಮತ್ತು ನನ್ನ ಸಲಹೆಯನ್ನು ಗಮನಕ್ಕೆ ತೆಗೆದುಕೊಂಡು ಕಾರ್ಯಕ್ರಮಗಳನ್ನು ರೂಪಿಸಿಕೊಂಡರೆ ಈ ಸಮಸ್ಯೆಯನ್ನು ನಾವು ಬಗೆಹರಿಸಬಹುದು ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಇನ್ನೊಂದು ಜೀವಂತ ಸಮಸ್ಯೆಯನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ನಾನು ವೃತ್ತಿಯಲ್ಲಿ ವಕೀಲನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಕೆಲಸ ಮಾಡುವಂಥ ನರಸಿಂಹರಾಜ ಪುರದಲ್ಲಿ ಏನಾಗಿದೆ ಎಂದರೆ, ಲಕ್ಕವಳ್ಳಿ ಪ್ರಾಜೆಕ್ಟಿಗೆ ಮುಳುಗಡೆಯಾದಂಥ ಜಮೀನಿನ ರೈತರಿಗೆ ಮತ್ತು ಗೇಣಿದಾರರಿಗೆ ಈ ಸ್ಥಳವನ್ನು ಬಿಟ್ಟು ಬೇರೆ ಕಡೆ ಹೋಗಿ ಎಂದು ಹೇಳಿದರು. ಅವರುಗಳು ಎಲ್ಲಿಗೋ ಹೋಗಿ ಸರ್ಕಾರಿ ಜಮೀನಿನಲ್ಲಿ ಮನೆಗಳನ್ನು ಕಟ್ಟಿಕೊಂಡು, ಮನೆಯ ಮುಂದುಗಡೆ ತೆಂಗಿನ ಸಸಿಗಳನ್ನು ಹಾಕಿಕೊಂಡು ವಾಸವಾಗಿದ್ದಾರೆ. ಅವರು ಹಾಕಿರತಕ್ಕ ತೆಂಗಿನ ಸಸಿಗೂ ಈಗ ೨೦ ವರ್ಷ, ಮನೆಯಲ್ಲಿರುವ ಮಗನಿಗೂ ೨೦ ವರ್ಷ. ಮಗ ಈಗ ಪ್ರಭುದ್ಧ ಮಾನಕ್ಕೆ ಬಂದಿದ್ದಾನೆ. ಈ ಪರಿಸ್ಥಿತಿಯಲ್ಲಿ ಸರ್ಕಾರ ದವರು ಮತ್ತೆ ಅವರನ್ನು ಈ ಸ ಳವನ್ನೂ ಬಿಟ್ಟು ಬೇರೆ ಕಡೆಗೆ ಹೋಗಿ ಎಂದು ಹೇಳುತ್ತಿದ್ದಾರೆ. ಇದನ್ನು ತಿಳಿದ ಜನರು, ನಾವು ಬಹಳ ಕಾಲದಿಂದ ಇದ್ದಂಥ ಜಮೀನನ್ನು ಕಳೆದುಕೊಂಡಿದ್ದೇವೆ, ಈಗ ಇದ್ದಂಥ ಮನೆಗಳನ್ನು ಬಿಟ್ಟು ಎಲ್ಲಿಗೆ ಹೋಗುವುದು ಎಂದು ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ. ಈ ವಿಷಯವನ್ನು ಸರ್ಕಾರದವರು ಸರಿಯಾಗಿ ಗಮನಿಸಿ, ಅವರಿಗೆ ಆ ಸ್ಥಳವನ್ನು ಬಿಟ್ಟು ಬೇರೆ ಕಡೆಗೆ ಹೋಗದಂತೆ, ಸರ್ಕಾರಿ ಆಜ್ಞೆಯನ್ನು ರದ್ದುಗೊಳಿಸಬೇಕು. ಇದರ ಬಗ್ಗೆ ಈಗಾಗಲೇ ಒಂದು ಸುಗ್ರೀವಾಜ್ಞೆ ತಂದು, ಈ ಆಜ್ಞೆಗೆ ತಿದ್ದುಪಡಿ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು, ಇಲ್ಲಿ ಸೇರದಿರತಕ್ಕ ಸದಸ್ಯರು ಇದನ್ನು ಗಮನಿಸಬೇಕು ಮತ್ತು ಇಂಥ ಒಂದು ಕೆಲಸ ಎಲ್ಲಿಯೂ ನಡೆದಿಲ್ಲ ಎನ್ನು ವುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಗೇಣಿದಾರರಿಗೆ ಈ ಸ್ಥಳದಲ್ಲಿ ಯಾವ ಪರಿಹಾರವನ್ನು ಕೊಟ್ಟಿಲ್ಲ. ಇದರ ಬಗ್ಗೆಯೂ ಸರ್ಕಾರದವರು ದೀರ್ಘವಾಗಿ ಯೋಚನೆಮಾಡಿ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕುಡಿಯುವ ನೀರಿನ ದೃಷ್ಟಿಯಿಂದ, ಮಲೆ ನಾಡಿಗೆ ಒಂದು ಕಾರ್ಯಕ್ರಮ ಮಾಡಿಕೊಡಬೇಕು ಎಂದು ನಾನು ಸರ್ಕಾರವನ್ನು ಕೇಳುತ್ತೇನೆ. ತಮ್ಮ ಕಾನೂನಿನ ಪ್ರಕಾರ ಬಯಲು ಸೀಮೆಗಳಲ್ಲಿ ೧೦ ಮನೆಗಳಿಗೆ ಒಂದು ಬಾವಿಯನ್ನು ತೆಗೆಯಿಸುವ ಕಾರ್ಯಕ್ರಮ ಇದೆ. ಇದನ್ನು ತಾವು ಮನಸ್ಸಿನಲ್ಲಿಟ್ಟುಕೊಂಡು ಇಲ್ಲಿ ಕೆಲಸ ಮಾಡುವುದಾದರೆ ಬಹಳ ಕಷ್ಟವಾಗುತ್ತದೆ. ಮಲೆನಾಡಿನಲ್ಲಿ ಒಂದು ಮನೆಯಿರತಕ್ಕದ್ದು ಒಂದು ಊರೇ; ಅದಕ್ಕೋಸ್ಕರ ಇಲ್ಲಿಯೇ ತಾವು ಅನುಕೂಲವಾದಂಥ ಕ್ರಮ ತೆಗೆದುಕೊಂಡು ಸೂಕ್ತವಾದ ವ್ಯವಸ್ಥೆಯನ್ನು ಮಾಡಿಕೊಡ ಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಮಲೆನಾಡು ಹಿಂದುಳಿದಿರತಕ್ಕ ಪ್ರದೇಶ ಎನ್ನುವುದನ್ನು ನಾನು ಮತ್ತು ಮಲೆನಾಡಿನಿಂದ ಆರಿಸಿ ಬಂದಿರತಕ್ಕ ಸದಸ್ಯರು ಎಲ್ಲರೂ ಹೇಳುತ್ತಾರೆ. ಇದರ ಅಭಿವೃದ್ಧಿಗಾಗಿ ಒಂದು ಮಂಡಳಿಯನ್ನು ರಚನೆ ಮಾಡಬೇಕು ಎಂದು ಬಹಳ ಕಾಲದಿಂದಲೂ ದೀರ್ಘವಾಗಿ ಸರ್ಕಾರದವರು ಯೋಚನೆ ಮಾಡಿ ಇಲ್ಲಿಯೂ ಅನೇಕಸಾರಿ ಇದು ಚರ್ಚೆ ಯಾಗಿದೆ. ನಾನು ವಿದ್ಯಾರ್ಥಿಯಾಗಿದ್ದಾನಿಂದಲೂ ಈ ವಿಷಯವನ್ನು ಕೇಳುತ್ತಿದ್ದೇನೆ. ಇದು ಇವತ್ತು ಆಗಬಹುದು, ನಾಳೆ ಆಗಬಹುದು ಎಂದು ಇಲ್ಲಿಯವರೆಗೆ ಬಂದಿದೆ. ನನ್ನ ಜೊತೆಯಲ್ಲಿಯೇ ಅಭ್ಯಾಸ ಮಾಡಿರತಕ್ಕ ಬಹಳ ಜನ ನನ್ನ ಮಿತ್ರರು ಇಲ್ಲಿ ಶಾಸಕರಾಗಿದ್ದಾರೆ. ಅವರಲ್ಲಿ ನನ್ನ ಪ್ರಾರ್ಥನೆ ಏನೆಂದರೆ, ಈ ಮಲೆನಾಡಿನ ಅಭಿವೃದ್ಧಿ ಮಂಡಳಿ ರಚನೆ ಮಾಡುವುದಕ್ಕೆ ತಾವೆಲ್ಲರೂ ಸಹಕಾರ ಕೊಟ್ಟು, ಸರ್ಕಾರದವರು ಇದನ್ನು ಜಾಗ್ರತೆಯಾಗಿ ಕಾರ್ಯರೂಪಕ್ಕೆ ತರುವಂತೆ ಕೆಲಸ ಮಾಡಬೇಕು. ನಮ್ಮ ಪ್ರದೇಶ, ಒಂದು ನಮ್ಮದೇ ಆದ ವಿಶಿಷ್ಟ ಪೂರ್ವದ ವೈಶಿಷ್ಟತೆಯನ್ನು ಹೊಂದಿದೆ. ಈಗತಾನೆ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಒಂದು ಆದೇಶವನ್ನು ಕೊಟ್ಟಿದ್ದಾರೆ. ಅದರ ಹೆಚ್ಚಿನ ಉಪಯೋಗ ನನ್ನ ಕ್ಷೇತ್ರದಲ್ಲಿ ಆಗಬಹುದು.? ಮಳೆಗಾಲದಲ್ಲಿ ಮಕ್ಕಳು ಪಾಠಶಾಲೆಗೆ ಹೋಗು ವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಮನೆಯಿಂದ ಸ್ಕೂಲನ್ನು ತಲುಪಬೇಕಾದರೆ, ಅನೇಕ ಹಳ್ಳಗಳನ್ನು ದಾಟಿಕೊಂಡು ಸ್ಕೂಲಿಗೆ ಹೋಗಬೇಕಾಗುತ್ತದೆ. ಬೆಳಿಗ್ಗೆ ಮನೆಯಿಂದ ಹೋದ ಮಕ್ಕಳು ಸಂಜೆ ಮನೆಗೆ

ಬರುವವರೆಗೂ ತಂದೆ ತಾಯಿಗಳು ಯಾವುದೇ ಕೆಲಸ ಮಾಡುವುದಕ್ಕೆ ತಯಾರು ಇಲ್ಲ. ಇಂಥ ಪರಿಸರದಲ್ಲಿ ಸಂಚಾರ ವ್ಯವಸ್ಥೆಯನ್ನು ಸರ್ಕಾರದವರು ಮಾಡಿಕೊಡುವುದಕ್ಕೆ ಆದೇಶಕೊಡಬೇಕು. ಅನೇಕ ಕೆಲಸಗಳನ್ನು ಈ ದಿಸೆಯಲ್ಲಿ ಸರ್ಕಾರದವರು ಮಾಡಿದ್ದಾರೆ. ನಾನು ಶಾಸಕನಾಗಿ ಪ್ರವಾಸ ಮಾಡಿದಂಥ ಕಾಲದಲ್ಲಿ ಕಾಫೀ ತೋಟದಲ್ಲಿ ಕೆಲಸ ಮಾಡತಕ್ಕ ಕೆಲಸಗಾರರನ್ನು ಭೇಟಿ ಮಾಡಿದೆ. ನಮ್ಮಲ್ಲಿ ಸುಮಾರು ೧೧ ಸಾವಿರ ಕೆಲಸಗಾರರು ಇದ್ದಾರೆ. ನಾನು ಅವರನ್ನು ನಿಮಗೆ ಏನು ಕೆಲಸ ಮಾಡಿಕೊಡಬೇಕು ಎಂದು ಕೇಳಿದಾಗ ಅವರು, ನಮ್ಮ ದೇಶದಲ್ಲಿ ಸಮಾಜವಾದವನ್ನು ಮತ್ತು ಅವರ ತತ್ವಗಳನ್ನು ಜಾರಿಗೆ ಕೊಡುತ್ತೇವೆನ್ನುವುದನ್ನು ಬಹಳ ಕಾಲದಿಂದಲೂ ಕೇಳುತ್ತಿದ್ದೆವು, ಶ್ರೀಮತಿ ಗಾಂಧಿಯವರು ಅಧಿಕಾರಕ್ಕೆ ಬಂದಮೇಲೆ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿದ್ದಾರೆ. ಈ ಕಾರ್ಯಕ್ರಮಗಳು ನಮ್ಮ ಕರ್ನಾಟಕದಲ್ಲಿ ಮಾನ್ಯ ದೇವರಾಜ ಅರಸ್ ಅವರ ನಾಯಕತ್ವದಲ್ಲಿ ಚೆನ್ನಾಗಿ ಕಾರ್ಯಗತವಾಗಿವೆ, ಅದಕ್ಕೋಸ್ಕರ ಅವರಿಗೆ ನಮ್ಮ ಬೆಂಬಲವನ್ನು ಕೊಟ್ಟಿದ್ದೇವೆ ಎಂದು ಹೇಳಿದರು. ಜನಗಳು ನಮ್ಮ ಕಾರ್ಯಕ್ರಮಗಳನ್ನು ಮೆಚ್ಚಿದ್ದಾರೆ; ಮತ್ತು ನಮ್ಮ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುವಂಥ ಜವಾಬ್ದಾರಿಯನ್ನು ನಮ್ಮ ಕೈಯಲ್ಲಿ ಕೊಟ್ಟಿದ್ದಾರೆ. ನಾವಾದರೂ ನಿರಂತರವಾಗಿ ಜಾಗೃತಿಯನ್ನು ಹೊಂದಿದವರಾಗಿದ್ದೇವೆ. 'ಎಟರನಲ್ ವಿಜಿಲೆನ್ಸ್ ಈಸ್ ದ ಪ್ರೈಜ ಆಫ್ ಡೆಮಾಕ್ರಸಿ' ಅಂದರೆ ಪ್ರಜಾಪ್ರಭುತ್ವದಲ್ಲಿ ನಾವು ಸರ್ವಥಾ ಜಾಗ್ರತಿಯನ್ನು ಹೊಂದಿರಬೇಕು. ಅಂತೆಯೇ ನಾವು ಈ ಪ್ರಜಾಪ್ರಭುತ್ವದ ಕೊಡುಗೆಯನ್ನು ಜನಗಳಿಗೆ ಕೊಡಬೇಕಾಗಿದೆ. ಅದ್ದರಿಂದ ನಮ್ಮ ಸರ್ಕಾರದವರು ದೀರ್ಘ ಯೋಜನೆ ಮಾಡಿ ಏನು ಕಾರ್ಯಕ್ರಮಗಳನ್ನು ಆಯವ್ಯಯದ ಪತ್ರದಲ್ಲಿ ಕಾಣಿಸಿದ್ದಾರೆ, ಅವುಗಳನ್ನೆಲ್ಲಾ ಕಾರ್ಯಗತ ಮಾಡುವ ಮುಖಾಂತರ ನಮ್ಮ ಜನರ ಅನೇಕ ಕಾಲದ ಬೇಡಿಕೆಗಳನ್ನು ಈಡೇರಿಸಿ ಕೊಡುತ್ತೇವೆನ್ನುವ ಮಾತನ್ನು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಶ್ರೀನಿವಾಸ್ (ಶ್ರೀರಂಗಪಟ್ಟಣ).— ಸನ್ಮಾನ್ಯ ಸಭಾಧ್ಯಕ್ಷಣೀಯವರೇ, ಈಗಾಗಲೆ ನನ್ನ ಮಿತ್ರರನೇಕರು ಬಜೆಟ್ ಮೇಲೆ ಮಾತನಾಡಿದ್ದಾರೆ. ಅನೇಕರು ಮಾತನಾಡುವಾಗ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಹಾಗೂ ಮಂತ್ರಿಗಳ ಗೈರುಹಾಜರಿಯ ಬಗ್ಗೆ ಮಾತನಾಡಿದ್ದಾರೆ, ಮತ್ತು ತಮ್ಮ ಅಸಮ್ಮತಿಯನ್ನು ತೋರಿಸಿದ್ದಾರೆ. ಈ ಸದನಕ್ಕೆ ಈ ಸಾರಿ ಅನೇಕ ಯುವಕರು ಹೊಸದಾಗಿ ಆರಿಸಿ ಬಂದಿದ್ದೇವೆ. ಇಲ್ಲಿ ನಾವು ಒಂದು ಸತ್ಸಂಪ್ರದಾಯವನ್ನು ಹಾಕಬೇಕಾದಾಗ ಹಿರಿಯರಾದಂಥ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳು ಹಾಜರಿದ್ದು ನಮ್ಮಗಳಿಗೆ ಮಾರ್ಗದರ್ಶನ ನೀಡುವುದು ಅವಶ್ಯಕ. ಅವರುಗಳು ಈ ಸದನಕ್ಕೆ ತಾತ್ಸಾರ ಮನೋಭಾವವನ್ನು ತೋರಿಸಿದಾಗ ನಮ್ಮಂಥ ಯುವಕರು ಬಹಳ ನಿರಾಸೆಗೊಳ್ಳಬೇಕಾಗುತ್ತದೆ. ನಮ್ಮ ವಿರೋಧಪಕ್ಷದ ನಾಯಕರು ಬಜೆಟ್ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿದಾಗ ಯಾವ ಮಂತ್ರಿಗಳೂ ಹಾಜರಿರಲಿಲ್ಲ. ಬೇರೆ ಸದಸ್ಯರು ಮಾತನಾಡುತ್ತಿರುವಾಗ ಇವರುಗಳು ಹಾಜರಿರುವುದು ಬೇಡ, ಆದರೆ ವಿರೋಧಪಕ್ಷದ ನಾಯಕರು ಮಾತನಾಡುವಾಗಲಾದರೂ ಇವರು ಹಾಜರಿರಬೇಕಾದ್ದು ಅವಶ್ಯಕ ಎಂದು ನಾನು ಹೇಳಿ ಈ ರೀತಿಯಾದರೆ ನಾವು ಒಂದು ಕೆಟ್ಟ ಸಂಪ್ರದಾಯವನ್ನು ಹಾಕಿದಂತಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಇದು ನಮಗೆ ಗೌರವ ತರತಕ್ಕದ್ದಲ್ಲ ಎಂದು ನಾನು ಅವರಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಮುಂದಾದರೂ ಈ ರೀತಿ ಆಗದೆ ಇರುವ ರೀತಿಯಲ್ಲಿ ಅಧ್ಯಕ್ಷರು ಸರ್ಕಾರಕ್ಕೆ ಸೂಚನೆ ಕೊಡಬೇಕು.

ಛೇರ್ಮನ್‌ರವರು.— ಮಾನ್ಯ ಸದಸ್ಯರು ಹೇಳಿದ ದಿವಸ ಮಾನ್ಯ ಮುಖ್ಯಮಂತ್ರಿಗಳ ಆರೋಗ್ಯ ಸರಿಯಾಗಿರಲಿಲ್ಲ.

ಶ್ರೀ ಎಸ್. ಎಂ. ಯಾಹ್ಯಾ.— ಮಂತ್ರಿಗಳೆಲ್ಲಾ ಇಲ್ಲಿದ್ದೇವೆ, ಯಾವಾಗಲೂ ಮುಖ್ಯಮಂತ್ರಿಗಳೇ ಇರಬೇಕು ಎಂದರೆ ಆಗುವುದಿಲ್ಲ. ನಮಗೂ ಬಹಳ ಜವಾಬ್ದಾರಿ ಇರುತ್ತದೆ. ತಾವು ಬಜೆಟ್ ವಿಚಾರದಲ್ಲಿ ನಿಮ್ಮ ಕೆಲವು ಸೂಚನೆಗಳನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಶ್ರೀನಿವಾಸ್.— ನಾನು ಟೀಕೆ ಮಾಡುತ್ತೇನೆಂದು ತಾವು ಭಾವಿಸಬಾರದು. ನಾವು ಹೊಸದಾಗಿ ಇಲ್ಲಿಗೆ ಬಂದಿರತಕ್ಕವರು, ಸರಿಯಾದ ಸಂಪ್ರದಾಯವನ್ನು ಕಲಿತುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ ಅಷ್ಟೆ.

ಶ್ರೀ ಎಸ್.ಎಂ. ಯಾಹ್ಯಾ : ಈ ಸಲ ಹೊಸಬರು ಕೆಲವರು ಬಂದಿದ್ದಾರೆ. ನಾವು ಕೆಲವರು ಕಳೆದ 6 ವರ್ಷಗಳಿಂದ ಇಲ್ಲಿ ಸದಸ್ಯರಾಗಿದ್ದೇವೆ. ಇದಕ್ಕೂ ಹಳಬರು ಕೆಲವರು ಇಲ್ಲಿದ್ದಾರೆ. ಬಿಟ್ಟಿನಲ್ಲಿ ಎಲ್ಲರಿಗೂ ಜವಾಬ್ದಾರಿ ಇರುತ್ತದೆ. ಸ್ವಲ್ಪ ದಿವಸಗಳು ಕಳೆದಮೇಲೆ ನಾವು ಮತ್ತು ನೀವು ಎಲ್ಲರೂ ಒಂದೇ ರೀತಿ ಯಲ್ಲಿ ಹೋಗುತ್ತೇವೆಂಬುದು ತಮಗೇ ತಿಳಿಯುತ್ತದೆ.

ಶ್ರೀ ಎಂ. ಶ್ರೀನಿವಾಸ : ನಮ್ಮ ಆಡಳಿತ ಪಕ್ಷದ ಸದಸ್ಯರಿಗೆ ನನ್ನ ಒಂದು ಮನವಿ ಏನೆಂದರೆ, ನೀವುಗಳು ಈ ಸದನದಲ್ಲಿ ಮಂತ್ರಿಗಳ ಬಗ್ಗೆ ಟೀಕೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ ನೀವು ನಿಮ್ಮ ಪಕ್ಷದಲ್ಲಿಯಾದರೂ ಇವರನ್ನು ಬಿಗಿ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಈ ಸದನದಲ್ಲಿ ಚರ್ಚೆ ನಡೆಯುತ್ತಿರುವಾಗ ಈ ಎನ್‌ಕ್ವೈರಿ ಕಮೀಷನ್‌ಗಳ ಬಗ್ಗೆ ಆಗಾಗ್ಗೆ ಒಂದು ರೀತಿಯ ಘರ್ಷಣೆಯು ಮಾತಿಗೆ ಎಡೆಕೊಡುತ್ತಿರುವುದನ್ನು ನಾನು ನೋಡಿದ್ದೇನೆ ಮತ್ತು ಕೇಳಿ ದ್ದೇನೆ. ಈ ಎನ್‌ಕ್ವೈರಿ ಕಮೀಷನ್‌ಗಳ ನೇಮಕ ಹೊಸದೇನೂ ಅಲ್ಲ. ಈ ಹಿಂದೆಯೂ ಬೇಕಾದಷ್ಟು ಕಮೀ ಷನ್‌ಗಳು ಆಗಿವೆ, ಅವುಗಳ ವರದಿಯೂ ಸಹ ಬಂದಿವೆ. ಆದಕಾರಣ ಅವುಗಳ ಬಗ್ಗೆ ಯಾರೂ ತಲೆಕೆಡಿಸಿ ಕೊಳ್ಳಬೇಕಾಗಿಲ್ಲ. ಆಡಳಿತ ಪಕ್ಷದ ಸದಸ್ಯರು ಬಡ್ಜೆಟ್ ಮೇಲೆ ಭಾಷಣ ಮಾಡುವಾಗ ಈ ಕಮೀಷನ್‌ಗಳ ಬಗ್ಗೆ ಮಾತನಾಡಿ ಈ ಸದನದ ಸಮಯವನ್ನು ಕಳೆಯುವುದಾಗಲೀ, ಅದರ ಬಗ್ಗೆ ಹೆಚ್ಚಿನ ತಲೆಕೆಡಿಸಿಕೊಳ್ಳುವ ಅವಶ್ಯಕತೆಯಾಗಲೀ ಇಲ್ಲವೆಂದು ಹೇಳುತ್ತೇನೆ. ಈ ಮೊದಲು ನೇಮಕವಾಗಿದ್ದ ಕಮೀಷನ್‌ಗಳು ಕೊಟ್ಟ ವರದಿಗಳು ಬೇಕಾದಷ್ಟು ಇವೆ. ಅದರಂತೆ ಇದೂ ಆಗುತ್ತದೆ. ತಮಗೆ ಹೇಳಬೇಕೆಂದರೆ, ಗ್ರೋವರ್ ಕಮೀಷನ್ ಕಛೇರಿಯ ಮುಂದೆ ಕೆಲವರು ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಸಾರ್ವಜನಿಕರು ಓಡಾಡುವ ಫುಟ್‌ಪಾತ್ ಮೇಲೆಯೇ ಮಾಡುತ್ತಿದ್ದಾರೆ. ಆ ರಸ್ತೆ ಬಹಳ ಚಿಕ್ಕದು. ವಾಹನಗಳು ಹೆಚ್ಚಾಗಿ ಓಡಾಡುತ್ತಿ ರುತ್ತವೆ. ಇದರಿಂದ ಅಲ್ಲಿ ಓಡಾಡುವ ಜನರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿನ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಕಾವೇರಿ ನದಿಗೆ ಅಡ್ಡಲಾಗಿ ಒಂದು ಸೇತುವೆ ನಿರ್ಮಾಣವಾಗುತ್ತಿದೆ. ಮಹದೇವಪುರದ ಬಳಿ ಈ ಸೇತುವೆಯ ಕಾರ್ಯ ಪ್ರಾರಂಭವಾಗಿ 6-8 ವರ್ಷಗಳಾದರೂ ಸಹ ಇನ್ನೂ ಪೂರ್ತಿಯಾಗಿಲ್ಲ. ಪ್ರತಿವರ್ಷ ಒಂದೊಂದು ಪಿಲ್ಲರ್ ಕೆಲಸವಾಗುತ್ತಿದೆ. ಈ ಕೆಲಸ ಮಂಜೂರಾಗಿ, ವರ್ಕ್ ಆರ್ಡರ್ ಕೊಟ್ಟಮೇಲೂ ಸಹ ಇಷ್ಟೊಂದು ನಿಧಾನ ಮಾಡಿದರೆ ಅದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ಯಾವುದೇ ಕಾರ್ಯವಾಗಲೀ, 6-8 ವರ್ಷಗಳವರೆಗೆ ನಿಧಾನ ಮಾಡಿದರೆ ಅದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆಂಬುದನ್ನು ತಾವು ತಿಳಿದುಕೊಂಡು ಇದರ ಕಡೆಗೆ ಹೆಚ್ಚಿನ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Lokapavani Karighatta Lift Irrigation. ಇನ್ನು ನಮ್ಮ ತಾಲ್ಲೂಕಿನ ಬಳಿ (ಲಕ್ಷ್ಮಣ ತೀರ್ಥ)ನದಿಗೆ ಸೇರಿದಂತೆ 40 ಲಕ್ಷ ರೂಪಾಯಿಗಳ ಒಂದು ಲಿಫ್ಟ್ ಇರಿಗೇಷನ ಸ್ಕೀಮನ್ನು ಪ್ರಾರಂಭಮಾಡಿ ಎಂಟು ವರ್ಷಗಳಾಯಿತು. ಕಳೆದ ಎರಡು ವರ್ಷಗಳಿಂದ ಯಾವುದೇ ಕೆಲಸವು ಅಲ್ಲಿ ನಡೆಯುತ್ತಿಲ್ಲ. ಇಷ್ಟೊಂದು ಹಣ ಖರ್ಚುಮಾಡಿ ಅದರ ಒಂದು ಉಪಯೋಗವನ್ನು ನಾವು ತೆಗೆದುಕೊಳ್ಳದಿದ್ದರೆ ಅದರಿಂದ ನಮ್ಮ ರಾಜ್ಯಕ್ಕೆ ನಷ್ಟವಾಗುತ್ತದೆ. ಆದಕಾರಣ ಸರ್ಕಾರದವರು ಶೀಘ್ರವಾಗಿ ಮುಗಿಸುವಂತಹ ಕಾರ್ಯ ಕ್ರಮಗಳನ್ನು ಕೈಕೊಳ್ಳುವುದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ.

ಇನ್ನು ಶ್ರೀರಂಗಪಟ್ಟಣ ಐತಿಹಾಸಿಕವಾಗಿ ಪ್ರಸಿದ್ಧವಾಗಿದೆ. ಅಲ್ಲಿ ರಂಗನಾಥಸ್ವಾಮಿ ದೇವಸ್ಥಾನ ವಿದೆ. ಟಿಪ್ಪುಸುಲ್ತಾನ ಅರಮನೆ ಮೊದಲುಗೊಂಡು ಇನ್ನೂ ಅನೇಕ ಸ್ಥಳಗಳಿವೆ. ಇವುಗಳನ್ನು ನೋಡಲು ಪ್ರವಾಸಿಗರು ಬಂದರೆ, ಇಳಿದುಕೊಳ್ಳಲು ಯಾವ ವ್ಯವಸ್ಥೆಯೂ ಆ ಟೌನಿನಲ್ಲಿ ಇಲ್ಲ. ಶ್ರೀ ಮಹಮುದಾಲಿ ಯವರು ಟೂರಿಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅಧ್ಯಕ್ಷರಾಗಿದ್ದಾಗ ಅಲ್ಲಿಗೆ ಒಂದು ಸಲ ಬಂದು ಅಲ್ಲಿ ಒಂದು ಟೂರಿಸ್ಟ ಬಂಗಲೆ ಕಟ್ಟಿಸಲು ಶಂಕುಸ್ಥಾಪನೆ ಮಾಡಿ ಹೋದರು. ಆದರೆ ಯಾವ ಕೆಲಸವೂ ಆಗಲಿಲ್ಲ. ಮತ್ತೆ ಅಜೀಜ್‌ಸೇಠ್ ಅವರು ಅದೇ ಟೂರಿಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಅಧ್ಯಕ್ಷರಾಗಿ ಒಂದು ಎರಡ ನೆಯ ಸಲ ಶಂಕುಸ್ಥಾಪನೆ ಮಾಡಿದರು. ಆದರೆ ಕೆಲಸ ಮಾತ್ರ ಇನ್ನೂ ಆಗಲಿಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ, ದಯವಿಟ್ಟು ಇನ್ನೊಂದು ಸಲ ಅಲ್ಲಿಗೆ ಯಾರೂ ಶಂಕುಸ್ಥಾಪನೆ ಮಾಡಲು ಬರಬೇಡಿ, ಕಟ್ಟಡವನ್ನು ಕಟ್ಟಿದಮೇಲೆ ಅದರ ಪ್ರಾರಂಭೋತ್ಸವಕ್ಕೆ ಬನ್ನಿ ಎಂದು ತಮ್ಮ ಮೂಲಕ ಸರ್ಕಾರದವರನ್ನು ಪ್ರಾರ್ಥನೆ ಮಾಡುತ್ತೇನೆ. ಪ್ರತಿ ಶನಿವಾರ ಮತ್ತು ಭಾನುವಾರ ಸಾವಿರಾರು ಜನ ಪ್ರವಾಸಿಗರು ಅಲ್ಲಿಗೆ

ಬರುತ್ತಾರೆ. ಆದರೆ ಸರ್ಕಾರದವರು ಅಲ್ಲಿ ಏರ್ಪಡಿಸಿರುವ ಸೌಲಭ್ಯಗಳು ಮಾತ್ರ ಏನೇನೂ ಸಾಲದು. ಇಡೀ ಪ್ರಪಂಚದಲ್ಲಿಯೇ ಅದು ಒಂದು ದೊಡ್ಡ ಪ್ರಸಿದ್ಧವಾದ ಸ್ಥಳವಾದ ಕಾರಣ ಅದರ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕೆಂದು ನಿಮ್ಮ ಮೂಲಕ ಸರ್ಕಾರವನ್ನು ಪ್ರಾರ್ಥಿಸುತ್ತೇನೆ.

ಇನ್ನು ಸಾರಿಗೆ ವ್ಯವಸ್ಥೆ ಬಗ್ಗೆ ಹೇಳುವುದಾದರೆ, ಈಗಿನ ವ್ಯವಸ್ಥೆಯನ್ನು ವರ್ಣಿಸುವುದಕ್ಕೇ ಸಾಧ್ಯವಿಲ್ಲ. ಅಷ್ಟೊಂದು ಅವ್ಯವಸ್ಥೆಯಿಂದ ಕೂಡಿದೆ. ಇದನ್ನು ಅನುಭವಿಸಿ ತಿಳಿಯಬೇಕೇ ಹೊರತು ಮಾತಿನಿಂದ ಹೇಳುವುದಕ್ಕೆ ಸಾಧ್ಯವಿಲ್ಲ. ಸಕಾಲದಲ್ಲಿ ಹೊರಡುವ ಬಸ್‌ಗಳಿಲ್ಲ. ಹಳ್ಳಿಗಳಿಗೆ ಹೋಗಲು ಸರಿಯಾದ ಸಂಚಾರ ಸೌಕರ್ಯವಿಲ್ಲ. ಮೈಸೂರಿನಿಂದ ಬೆಂಗಳೂರಿಗೆ ಮಾತ್ರ ಅರ್ಧ ಗಂಟೆ ಇಲ್ಲವೇ ೨೦ ನಿಮಿಷಕ್ಕೆ ಒಂದರಂತೆ ಬಸ್‌ಗಳನ್ನು ಓಡಿಸಿದ ಮಾತ್ರಕ್ಕೆ ಎಲ್ಲ ಕಡೆಯೂ ಬಸ್ ಸೌಕರ್ಯ ಕೊಟ್ಟಂತಾಗುವುದಿಲ್ಲ. ಹೆಂಗಸರು, ಮಕ್ಕಳು, ವಯಸ್ಸಾದವರು ಸಾವಿರಗಟ್ಟಲೆ ಬಸ್ಸಿಗಾಗಿ ಬಸ್‌ಸ್ಟ್ಯಾಂಡ್‌ಗಳಲ್ಲಿ ಕಾಯುತ್ತಿರುವುದನ್ನು ತಾವು ಬೇಕಾದರೆ ಹೋಗಿ ನೋಡಬಹುದು. ಈ ಜನರ ಗೋಳನ್ನು ತಪ್ಪಿಸಲು ಗ್ರಾಮಾಂತರ ಪ್ರದೇಶಗಳ ರೂಟುಗಳನ್ನು ಖಾಸಗಿಯವರಿಗೆ ವಹಿಸಿಕೊಡಬೇಕೆಂಬುದು ಸರ್ಕಾರದ ಧೋರಣೆಯಾಗಿದೆ ಎಂಬುದಾಗಿ ಮಾನ್ಯ ಸಾರಿಗೆ ಸಚಿವರು ಕೊಟ್ಟಿರುವ ಹೇಳಿಕೆಯನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಅದು ನಿಜವಾದರೆ ಅದನ್ನು ಶೀಘ್ರವಾಗಿ ಮಾಡತಕ್ಕದ್ದು ಸರಿ ಎಂದು ನನಗಾದರೂ ಅನಿಸುತ್ತದೆ. ಇದಕ್ಕೆ ಕಾರಣ ರಾಷ್ಟ್ರೀಕರಣದಿಂದಲೇ ಎಲ್ಲ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವ ಕ್ರಮಗಳಿಂದ ಜನತೆಗೆ ಸೌಕರ್ಯ ಸಿಗುತ್ತದೋ ಅಂತಹ ಕ್ರಮಗಳನ್ನು ಸರ್ಕಾರದವರು ಕೈಕೊಳ್ಳಬೇಕೇ ಹೊರತು, ರಾಷ್ಟ್ರೀಕರಣದಿಂದಲೇ ಎಲ್ಲ ಸಮಸ್ಯೆಗಳನ್ನು ಪರಿಹಾರ ಮಾಡುತ್ತೇವೆನ್ನುವ ಧೋರಣೆಯನ್ನು ಸರ್ಕಾರ ಈಗ ಏನು ಹೊಂದಿದೆ, ಅದನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ. ಈ ಬಗ್ಗೆ ಸರ್ಕಾರ ಏನು ಯೋಚನೆ ಮಾಡಿದೆ, ಅದಕ್ಕೆ ನನ್ನ ಅಭಿನಂದನೆಯನ್ನು ತಮ್ಮ ಮೂಲಕ ಸರ್ಕಾರದವರಿಗೆ ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಸ್ಕೂಲುಗಳ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಒಂದೇ ಕೊಠಡಿಯಲ್ಲಿ ನಾಲ್ಕು ತರಗತಿಗಳು ನಡೆಯುತ್ತಿವೆ. ನಾಲ್ಕು ತರಗತಿಗಳಿಗೂ ಒಬ್ಬರೇ ಉಪಾಧ್ಯಾಯರು- ಇಂತಹ ಪಾಠಶಾಲೆಗಳು ಬೇಕಾದಷ್ಟಿವೆ. ಕಾಲೇಜುಗಳ ಬಗ್ಗೆ ನಾವು ಹೆಚ್ಚಿನ ಗಮನ ಕೊಡಬೇಕಾಗಿಲ್ಲ. ಮುಖ್ಯವಾಗಿ ನಾವು ನರ್ಸರಿ ಶಾಲೆಗಳ ಬಗ್ಗೆ ಪ್ರೈಮರಿ ಶಾಲೆಗಳ ಬಗ್ಗೆ ಮತ್ತು ಹೈಯರ್ ಸೆಕಂಡರಿ ಶಾಲೆಗಳ ಬಗ್ಗೆ ಹೆಚ್ಚಿನ ಗಮನ ಕೊಡಬೇಕಾಗಿದೆ. ಈ ರೀತಿ ನಾವು ಇವುಗಳಿಗೆ ಹೆಚ್ಚಿನ ಗಮನ ಕೊಟ್ಟದ್ದೇ ಆದರೆ ಮುಂದೆ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಕಾಲೇಜುಗಳು ತಾನಾಗಿಯೇ ಸರಿಹೋಗುತ್ತವೆ. ಯಾವುದೇ ಹೈಯರ್ ಎಜುಕೇಷನ್‌ನಿಂದ ನಮ್ಮ ಮಕ್ಕಳಿಗೆ ಉಪಯೋಗವಾಗುವುದಿಲ್ಲ. ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾ ಕಟ್ಟಡಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಟ್ಟಿಸಲು ಸರ್ಕಾರದವರು ಆಸಕ್ತಿ ವಹಿಸಬೇಕು. ಏಕೆಂದರೆ ಈಗ ಒಂದೇ ಕೊಠಡಿಯಲ್ಲಿ ನಾಲ್ಕು ತರಗತಿಗಳು ನಡೆಯುತ್ತಿವೆ. ಒಬ್ಬರೇ ಉಪಾಧ್ಯಾಯರು. ಇನ್ನು ಯಾವ ರೀತಿ ಪಾಠಗಳು ನಡೆಯುತ್ತವೆ ಎಂಬುದನ್ನು ತಾವೇ ಯೋಚನೆ ಮಾಡಿ.

ಈ ಒಂದು ವಿಶ್ವವಿದ್ಯಾನಿಲಯದ ಆಕ್ಟ್‌ಗೆ ಹಿಂದೆ ಸದನದಲ್ಲಿ ಮಾನ್ಯ ಮಂತ್ರಿಗಳು ಎಲ್ಲರ ಸಲಹೆಗಳನ್ನು ತೆಗೆದುಕೊಂಡು ಒಂದು ಕಾಂಪ್ರಹೆನ್ಸೀವ್ ಬಿಲ್ಲನ್ನು ತರುತ್ತೇನೆ ಎಂದು ಭರವಸೆಯನ್ನು ನೀಡಿದ್ದಾರೆ. ಕಳೆದ ಮೂರು, ನಾಲ್ಕು ವರ್ಷಗಳಿಂದ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ರೀತಿಯಾದ ಖಾಯಂ ಅಪಾಯಿಂಟಮೆಂಟುಗಳು ಆಗಿಲ್ಲ. ಈ ಆಕ್ಟ್‌ನ ತೊಂದರೆಯಿಂದಾಗಿ ಪ್ರೊಫೆಸರ್ಸ್, ರೀಡರ್ಸ್, ಲೆಕ್ಚರರ್ಸ್ ಎಷ್ಟೋ ಹುದ್ದೆಗಳು ಖಾಲಿ ಇವೆ. ನಾನು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯನಾಗಿರುವುದರಿಂದ ವಿಷಯಗಳನ್ನು ತಿಳಿದು ಜವಾಬ್ದಾರಿಯುತವಾಗಿ ಹೇಳುತ್ತಿದ್ದೇನೆ. ಈ ಆಕ್ಟನ್ನು ಬದಲಾವಣೆ ಮಾಡದೇ ಹೋದರೆ ವಿಶ್ವವಿದ್ಯಾನಿಲಯ ತನ್ನ ಕಾರ್ಯವನ್ನು ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಸರ್ಕಾರ ಈ ಯೂನಿವರ್ಸಿಟಿ ಆಕ್ಟ್ ಬಗ್ಗೆ ತೀವ್ರವಾದ ಗಮನವನ್ನು ಹರಿಸಿ ಎಷ್ಟು ಜಾಗ್ರತೆ ಸಾಧ್ಯವಾಗುತ್ತದೋ ಅಷ್ಟು ಜಾಗ್ರತೆ ಸುಧಾರಿತವಾದ ಬಿಲ್ಲನ್ನು ತರವುದು ಒಳ್ಳೆಯದೆಂದು ನನಗಾದರೂ ಅನ್ನಿಸುತ್ತದೆ.

೩-೦೦ ಪಿ.ಎಂ.

ಇನ್ನು ಒಂದು ವಿಚಾರವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಫ್ರೀಸೈಟ್ ಹಂಚಿಕೆಮಾಡಲ ಜಮೀನನ್ನು ಸರ್ಕಾರದವರು ಅಕ್ವೈರ್ ಮಾಡಿಕೊಂಡರು. ನಮ್ಮ ತಾಲ್ಲೂಕಿನಲ್ಲಿ ಬೇಕಾದಷ್ಟು ಜಮೀನನ್ನು ಅಕ್ವೈರ್‌ಮಾಡಿ, ಅವನ್ನು ಸೈಟುಗಳಾಗಿ ಪರಿವರ್ತನೆಮಾಡಿ ಉಚಿತ ನಿವೇಶನಗಳನ್ನು ಬಡವರಿಗೆ ಹಂಚಿದ್ದಾರೆ. ಆದರೆ ಜಮೀನನ್ನು ಅಕ್ವೈರ್ ಮಾಡಿಕೊಂಡ ಮಾಲೀಕರಿಗೆ ಇವತ್ತಿನವರೆಗೂ ಯಾವುದೇ ರೀತಿಯಾದ ಹಣ ಸಂದಾಯವಾಗಿಲ್ಲ. ಈ ಬಗ್ಗೆ ಸರ್ಕಾರ ಗಮನಕೊಟ್ಟು ಯಾರ ಜಮೀನನ್ನು ಸೈಟಿಗೋಸ್ಕರ ಅಕ್ವೈರ್ ಮಾಡಿಕೊಂಡಿದ್ದೀರೋ ಆ ಮಾಲೀಕರಿಗೆ ಹಣ ಸಂದಾಯ ಮಾಡಬೇಕು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†SRI C. M. ARUMUGAM (K.G.F.).—Madam Chairaman; it is a great pleasure to participate in the general discussion on the budget persented by a very lovable person Mr. Yahya. I was not able to raise my voice in this House for some years, just because my election was set aside by the High Court. I got a stay from the Supreme Court. It is something like the Pandavas who were in the forest for twelve years and then in disguise for one year. Sometimes I used to come here and put my signature. Sometimes the then Secretary who got five years' extension used to advise me not to put my signature also. At the time of 1972 General Elections the then Prime Minister Mrs. Indira Gandhi with all her power and might used to come in a helicopter and hundreds of cars were in the scene and Mr. Devaraj Urs used to accompany her. For eleven years they ruled. I got myself elected then. What happened in 1972 also happened in 1978. I was, unfortunately to face the election in this situation. Several Central Government Ministers came in helicopters. How to stand before the mighty leaders of the Central Cabinet followed by several cars ; half a dozen people used to be in the rear and half a dozen in front. I had not even a Constable to follow me. I won the election with a very big margin. How I wish the Ministers should resign before the elections ! It will enable fair treatment being given to one and all. One should get elected on merit and not on the backing of Political parties and leaders. I am happy that some of the members are new ; some of the persons who sat this side have gone to the other side and those who were on that side have come to this side. Many of those who were occupying the front benches on that side, have lost their deposits, I am told. I am happy that am placed in the chair from which I can directly look at the Chair, and I can always get protection and inspiration from the Chair. Even if I were to be in the back bench, I would have made myself felt.

SRI MALLUR ANANDA RAO.—From this side you are going to that side.

SRI C. M. ARUMUGAM.—I can assure the member that it will never happen.

During these two or three days' discussion, the Leader of the Opposition made effective speech and one point made out by us is that the Ministers should be here. It is more because we would like to see their personalities; Mr. Gundu Rao is a charming personality in that Dress. It gives us inspiration and makes us talk more. It is good that Cabinet should devote much time and give top priority to the Assembly proceedings. I am not making any remarks on any Minister but such a convention should be established; when the Assembly is in session, they must make themselves available. It is better that the Ministers are available to the House.

For the last thirty years working of the Constitution has made the people to re-think on the relationship between the States and the Centre, not only in the matter of finance, but also in the matter of power and functions. For the last 30 years, both the Central and the State Governments were ruled by one single party. Therefore, it did not arise but when Tamil Nadu had a Government of D. M. K., the West Bengal had a Communist Government and also a Communist Government came to power in Kerala, this has started. They wanted to change the relationship between the States and the Centre. They wanted more powers to the States. Now, Kerla, Karnatake, Andhra, Maharashtra, Tamil Nadu, West Bengal and Kashmir States have been ruled by different Political parties. Therefore, now there is a talk to arrange a dialogue on the State-Centre relations. We want the Centre to be very strong but at the same time, the States should also have some protection. The States should not be interfered by the Centre. The States should have its own power to manage the affairs of the State. Therefore, I would appeal to the Central Government and the party in power to rethink about this matter and see that a dialogue with the State Chief Ministers on the Centre-State relations is convened so that the States get more powers. In India, there is only one citizen ship. In America, there are two citizenships—the State citizenship and the Central citizenship. If a man wants to go from New York to Colombia or from one State to another State, he must apply and secure the citizenship. That is the position in America. Anyway, here it is not so. Here, there are two Ministers for Health, one is a Minister for Health in the State and another Minister for Health at the Centre, Sri Raj Narain. In the same way, there are two Ministers for Co-operation, Education and other departments. What I would suggest is, let the Central Government confine themselves in the matter of defence, in the matter of communications in, the matter of Railways, in the matter of currency, in the matter of external affairs and in the matter of foreign trade.

So far as other subjects are concerned, they can give the entire responsibility to the State Governments. They can give full power to to the States. Our Finance Minister will agree with me if I say that no programmes or projects could be successfully implemented for the welfare of the people without the assistance from the Central Government. Therefore, I am suggesting the Centre to confine its activities to those subjects mentioned earlier and give adequate full powers with sufficient funds to the States to implement other programmes. If that is done, it is possible for the States to look after its affairs and implement various programmes for the welfare of the people.

Now I come to Education. We are spending nearly Rs. 140 Crores i.e., roughly 1/5th of our budget on Education, but we are unable to formulate an educational policy both for the State and the Centre. The Standard of education and the quality of education in Government schools, primary, high school and colleges is very poor. How can we implement the compulsory education scheme successfully? We are not able to provide Engineering and Medical Education to all our boys and girls because seats are restricted. In addition to Government schools, there are so many private institutions. They get cent percent grant from the Government. They are running primary, middle, high school classes and also colleges. When you give cent per cent grant where is the need to keep those institutions in their hands? Why don't you nationalise it? In addition to nationalising those institutions, action should be taken to improve the standard of Education in Government Schools also, There are so many Officers A.E.O., D.E.O., Joint Director, Deputy Director-in the Education Department in every district. What are they doing? If there is an atraction for private institutions, why not you also create such an attraction for Government institutions? You have got an army of Officers in the Education Department. Some of them are specialists. Some of them are going abroad once in six months or once in an year. Have they gained any experience or knowledge to improve the standard of Education? No. Therefore, I suggest that the Government should take actien and see that the amount alloted for Education in the budget is properly utilised. Then the question of langunge comes when Education comes. When we talk about language, some friends may like it or some may not like it. But there are 14 recognised languages in this country. In our primary schools, boys and girls of 6 years have been asked to learn three languages English, Hindi and a local language, i. e., Kannada. It is highly impossible to study all these languages at the age of 6 years. Late Pandit Jawaharlal Nehru said that Euglish should continue so long as the non-Hindi speaking people wanted it. We talk about the three-language formula. But

in all the Northern States, they don't adopt this three language formula. They know the reading and writing of one language i. e., Hindi. I had an occasion to go to Bihar. There, you will not see a singale board or a single letter of English anywhere in Bihar City-Patna. They study only Hindi and they don't study either Kannada or Tamil or Malyalam or Marathi or any other languge. They confine only to Hindi. Like-wise, in Utter Pradesh, Madhya Pradesh and other northern States, they study only Hindi. of course, Punjab is little advanced in that aspect because they study other languages. Now what is happening ? Gradually, they are asking us to learn Hindi which is not possible. Most of our students fail in Hindi only. In my case, my daugther studied Kannada also and she got a medical seat not because I am a SC but on her merit only. The fact is that she has to study Hindi also.........

SRI MALLUR ANANDA RAO.—If you can ask the Education Examination Board to furnish the percentage of results of the State, then you will know the correct fact, I think 80-82% passes in Hindi. It may be a case with your daughter.

SRI S. M. YAHYA.—Hindi is not compulsory, in so many places, they just study. Wherever Hindi is compulsory, only a particular section of people take Hindi and to that extent they would also pass.

Otherwise, Hindi is optional and in many places they study Hindi. Pass or fail is immaterial. All would not take Hindi. They take other languages also. A particular section taking Hindi will pass the examination. It is not that Bangalore people may easily pass Hindi, but it is difficult for K.G.F. people to pass.

SRI C.M. ARUMUGAM.—How can a boy or girl can learn three languages at the age of 6 years ? You are telling that Hindi is not imposed but it is being imposed compulsorily in all public sector undertakings in India. We receive the circulars etc., of the northern States which are invariably in Hindi only. I don't know how we can read those Circulars etc., what I want to tell is, we can learn Hindi and we have no objection but there cannot be the domination of the Ganges Valley on the Southern States. All these years, the domination of Ganges Valley was there. Even to-day the domination of Ganges Valley is there.

The Prime Minister who was to be from Uttar Pradesh ever since we attained independence has been changed, Now, the Prime Minister is from Gujarat. The domination as such from ganges valley might be stopped and prevented. But now that domination comes in the form of Hindi. Therefore that imposition what ever may be the form should be stopped and the assurance given by late Pandit Jawharlal Nehru should be followed scruplously on langauge issue.

Madam, I am now coming to the subject of Irrigation. This is little interesting for our friends. Madam, for the last 30 years lot of money has been spent on irrigation. If we can go through, it is roughly about Rs. 800 crores on several irrigation projects and apart from this Rs, 800 crores we have spent Rs. 100 crores on multipurpose projects; about Rs. 200 crores on hydro-electric projects. These projects brought nearly 18 lakhs hector of land under irrigation for these years. If you look into the budget review, the amount spent on irrigation in 1957-58 was Rs. 58 crores which has gone to Rs. 700 crores now. That is 12 times increase. The expenditure was also increased to 12 times. In 1957 58 it was about Rs. 53-55 crores and now it has gone upto Rs. 700 crores. 12 times. Several construction of projects were taken up for the development of the State and the people. I ask one thing. Have you surveyed the State? Are the people improved? Has the standard of living increased? Anyway, the Government now should think in right earnest whether the money has helped the common people. And whether the lands have been irrigated. Therefore Iurge upon the Government should take steps in this regard and help the poor people living in villages.

Madam, one point in this budget I like as I like Mr. Yahya is about Employment Guarantee Scheme. Of course, this is a good scheme which is the first of its kind working successfully in Maharashtra. Now there is a mention about this in your speech. In the Constitution also mention has been made about employment guarantee. Article 41 of the Constitution provides:

> "The State shall, within the limits of its economic capacity and development, make effective provision for securing the right to work, to education and to public assistance in cases of unemployment, old age, sickness and disablement, and in other cases of undeserved want".

The Constitution was written in 1947 and came into force in 1950. For the last 30 years nobody thought about it. I am glad that Devaraj Urs Government has brought this Scheme for the benefit of the poor and weaker sections of the society. Governmeut every year allots Rs. 25 crores for the implementation of schemes. In this connection, I would suggest that for the proper implementation of this scheme the Government should allot another Rs. 25 crores, thus making it Rs. 50 crores per annum to provide employmant for the rural population. Therefore, I want the Government to come forward with definite programme of Employment Guarantee Scheme as is done in Maharashtra and thus help the poor and weaker sections of the society in Karnataka.

Madam, I am coming to the very controversial point. That is about prohibition. It is a nice subject. We are getting above Rs. 70 crores by way of excise revenue by foreign liquors and Indian liquors. We have introduced prohibition and failed. There is no prohibition in Bangalore because some of the VIPs are living in Bangalore. Some of our friends have said that prohibition was introduced in Russia and Africa and in some other parts of the country. So far as we are concerned most of us are Hindus. Our religion is Hindu. According to Buddism and Islam, they should not drink. Because of religious attachment, majority of us will go to temple and thousands of rupees are put in Hundis. In Tirupathi thousands of rupees are there. Even gold is also there.

SRI R. GUNDU RAO (Minister for Transport and Tourism).—Hinduism never said that we should not drink.

3-30 P.M.

SRI C·M. ARUMUGAM.–In spite of the religious injunction there are some people who are drinking. In thewestern countries drinks form part of food. When I visited Goa some years ago ,instead of water they gave me beer. In France they never serve water. Water is costly and so they give only wine. If prohibition is to be reintroduced, the Government of India must compensate the loss of excise revenue. As to whetherliqu or reduces the life or promotes longivity, I shall give an instance. In America after introducing prohibition some officers conducted a survey as to whether a teetotaller lives long or a drunkard lives long. They went to a house and saw a man living for 102 years. They asked him the secret of his long life. He said he does not drink beer, whisky or wine or gin.—not even tea or coffee. In the next room they heard some noise of glasses and bottles breaking or falling. They asked the man what was going on there. He said that his father was there in the next and that he was fully drunk. And what was his age? His age was 140 years. So, you cannot say that a man lives long by not drinking or he shortens his life by drinking. I can quote an instance from Tamil Nadu. Our revered Rajaji was a highly disciplined soul. He is purely a vegetarian and would not touch even egg. In one week he will address one meeting and he lived 93 years and was physically strong and mentally alert till the end of his life. But then there was E.V. Ramaswamy Naicker, the Periyar. He cannot have his breakfast without chicken, without mutton, without liver fry, fish pickles and eggs. And he cannot have his dinner without chicken biriyani and he was addressing ten meetings a day and he lived for 95 years. So, the longivity of a person cannot be decided by what he takes or what he does not take. So, if you want to reintroduce prohibition, the Government of India must bear the loss of revenue.

Now I will come to another controversial point. *viz.* enquiry commissions. I am not going into the merits or demerits of the enquiry commissions. Enquiries must be there and commissions must be there. The enquiry against Dr. M. D. Nataraj is because he got 20 acres of land. Granting of 20 acres of land to one person who is the son-in-law of the Chief Minister—whether it is legal or illegal or whether action must be taken or not, I have nothing to say in that matter. The Revenue Minister who sanctioned 20 acres to the son-in-law of the Chief Minister has also sanctioned some acres of land to his own son. Why that has not been brought within the purview of the enquiry ? Secondly, I have been demanding enquiry into the affairs of the Sharavathy Project since 1957, Why ? Because the Sharavathy Project was originally estimated for Rs. 34 crores and the estimate ultimately rose to Rs. 200 crores. How many people are involved in it ? Successive Chief Ministers are involved in it. I was the only man who raised this subject in 1958. People were then thinking why this man was talking about the Sharavathy Project. There was one former Minister. He started as a riffraff and became a landlord of 1000 acres of land. How is it that he got those 1000 acres and why was there no enquiry about it? A former Revenue Minister sanctioned 600 acres to his relatives- He should also be brought within the purview of the enquiry. Some Minister's wives have got big air-conditioned theatres and bunglows and are leading a jolly good life. One morning they will have breakfast in Hotel East West and for lunch they will go West End and For dinner they will go to Hotel Ashoka. Wherefrom they got so much ofmoney? I know that one Chief Minister has got six bungalows in Rajajinagar in binami names. So, I would like to make a suggestion through you, Sir, to the Government that they must institute enquiries into the affairs of all the M.L.As, MPs and all the successive Chief Ministers who held offices since 1952. Rama suspected his wife because she lived with Ravana for some time and said that she should walk over the fire in order to purify herself. Sita walks on the fire. Like that this is testing case for the Chief Minister. There must be an enquiry into the assets of all the successive Chief Ministers the Ex- M.L.As and Ex-MPs and into the affairs of Sharavathy Project. They used to call it Sharavahty Karma Kanda. We must appoint a Commission. Let the Janatha Government appoint a Commission. Everybody must go before it and prove how he got wealth. There are some officers who are corrupt. If you look into their way of living, what salary we get will not be enough for a week. Very Small officers have constructed big bungalows. We can see IAS. officers owing bungalows in four or five years service. Today an Assistant Engineer is promoted as Executive Engineer and next

year you can see him owning a poshbungalow. You please go to Indira Nagar which is the beautiful extension in Bangalore. Most of the buildings there are owned only by officers. So, you conduct an enquiry into all these things. Madam, honesty must begin from grassroots. You can see peons owing two or three houses in Bangalore in addition to half a dozen cattle. How did they get all that ? Some own half a dozen autorickaws? Where from did they get it? who is to go into all these? and shake up the society and make the society pure ?

Madam, I like one thing. I like some of these ministers. The present Chief Minister Sri Devaraj Urs in non-communal. He likes all castes. He has given representation to all the people. But before taking them into the cabinet he must, as in America, verify whether they are honest, whether their family members are honest, whether he has adequate means to have his food. Otherwise, what happens is, we find all the corruption. In America they do it. I will give a small example. When Mr. Atlee was the Prime Minister of U. K. some members raised in the House of Commons that the P.W.D. Minister received a garland on a Christmas Day and a cup of wine. Mr. Atlee said that he will enquire it. In U.K. during Christmas it is normal that one goes to another's house and if offered takes a drink, and greet each other. When enquiry was held, the Minister accepted that he received the garland and drink and he was removed. That is the honesty they have. Here what do we find? Charges and counter charges. I do not want a cent per cent corrupt to escape and a man committing 5% corruption to be punished. That is all my submission. Therefore, all the previous ministers must be subjected to an enquiry. They must prove before the public that they led an honest life. That is my point

About the Finance Commission I have to say that the State's share has not increased with the award of successive Finance Commissions. I am wondering why only 5.3% is given to us in the total whereas U.P., Maharashtra and other States are getting more. If you want to improve living conditions of people and improve the State you must necessarily get more funds to the State. For that you must make out a case. One suggestion is you must try to see that the Centre Waives off the loans. The State has taken a lot of loans and repayment of loan and development, both are not possible. On the loans we are paying interest also. To improve the financial position of the State we cannot depend only on taxation. The natural resources must be increased. You must increase the forest wealth. What was the forest revenue 10 years back and how much has it increased? You have minerals. The

State has been well blessed with rich minerals including gold. The minerals resources must be exploited so that we can get revenue and plough back the same for the development of Karnataka.

There are 87,000 pensioners in Karnataka who have worked for protecting the border of our country. To look after them is the responsibility of both the State and the Centre. We must see that their living conditions are improved, their children get education and they are given medical aid. In addition to increasing the pension the Government must prepare some schemes to benefit the poor pensisners who served their life for the country and retired. It is high time the Government drawup some schemeto improve the lot of these pensioners inttead of merely giving some money to them.

Ae regards the rural housing, you have constructed some houses under the people's housing scheme. The B.D,Os and other officers who are incharge demand money from the poor people for alloting those houses. Those houses cannot stand rainy season. They collapse. Before you provide them with houses, you must see that the construction is good and they stand for at least 20 to 30 years.

Several villages in the State do not have even approach roads. Where is your planning? We know how we got independence. We got independece from the top. Those who are rich and big in politics they only got independence. The independence is in their hands only. They are in powers. It is something like a volley ball. The person who is tall gets the ball and throw and a short person tries to jump to hit the ball. The planning has started only in big cities and urbau centres. It has not gone into villages. It is so because how can you expect a big man to know what hunger is? Persons who have no experience of village life have been made to sit in air conditioned rooms to draw up plans. They prepare plan suited to urban cities and shopistiaated areas. Those plans are not meant for rural areas. So, all your planning is defective. If you go to a village, there is neither a bath room nor a kitchen. There will be only one room and when any occasion takes place in one's house, he must have it only in the open because the houses are so small. Some of my friends must be knowing that in 25 years' time Russia built houses for every one; every individual was given two pairs of wollen suits and everyone had a radio. We have 30 years of independence and what radio is nobody knows in thee villages. When you want to live in Ashoka Hotel for even a meeting, what do you think of the villages? They have to live along with their cattle and donkeys. So, there must be rethinking in rural planning and persons who are suffering must be assisted first.

Next about the minimum wages. If there are 20,000 workers they strike and get more whereas for workers who work in the fields for 12 hours a day do not have any minimum wages. He is a slave of th landlords. If he demands a few rupees more, next day he will be sen out, therefore, 80% of our villages require to be talked on a top priority basis in the matter of housing, environment, drinking water, etc. Today the villages drink water from the lakes. You want to spend Rs. 30 crores to buring Cauvery water to Bangalore but you do not think that most of the villages do not have any drinking water.

Therefore, this rural planning needs rethinking to improve the living conditions of our rural masses.

Madam, I have one more submission to make to our Hon'ble Minister for Finance. The officers do prepare plan schemes and the Finance Department sanctions the money. Sometimes these officers will not spend that money and they allow it to lapse thereby the general public are deprived of their welfare measures. If they allow any amount to lapse in the Medical and Public Health department, it means that they have deprived the patients. Likewise in the Public Works Department and other departments. We are working for the last 30 years as a democratic State, and we know how the Budget is prepared. But my feeling is that the officials are not tamed in that aspect. Some times they spend very little amount ; they do not want to take responsibility and some officers will be afraid of even signing the letters. I request the Hon'ble Minister to note down these points and to see that the amount sanctioned in the budget is spent properly and to the satisfaction and the betterment of the State and the people.

Thank you very much, Madam.

ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ೧೯೭೮-೭೯ನೇ ಸಾಲಿನ ಆಯವ್ಯಯ ಪತ್ರವನ್ನು ನಮ್ಮ ಅರ್ಥಮಂತ್ರಿಗಳಾದ ಯಾಹ್ಯಾ ಅವರು ಮಂಡಿಸಿರುವುದನ್ನು ನಾನು ತೃಪ್ತಿಕರದಿಂದ ಹೇಳುವುದರ ಜೊತೆಗೆ ಕೆಲವು ಸಲಹೆಗಳನ್ನು ಕೊಡಲಿಕ್ಕೆ ಆಶಿಸುತ್ತೇನೆ. ಈಗ ೧೯೭೮-೭೯ರ ಬಜೆಟ್ ಅಂದಾಜಿನಲ್ಲಿ ೧೨೦ ಕೋಟಿ ೯೪ ಲಕ್ಷ ರೂಪಾಯಿ ಕೊರತೆ ಬರಬಹುದೆಂದು ಅವರು ತೋರಿಸಿದ್ದಾರೆ. ಇದರ ಜೊತೆಗೆ ಈ ಬಜೆಟ್‌ನಲ್ಲಿ ಯಾವುದೇ ಹೊಸ ತೆರಿಗೆಗಳನ್ನು ಸೂಚಿಸಿಲ್ಲ. ಅವಶ್ಯವಿರುವ ಮಟ್ಟಿಗೆ ನಿರ್ದಿಷ್ಟ ಪ್ರಸ್ತಾವಗಳನ್ನು ಸ್ವಲ್ಪ ತರುವಾಯ ಈ ಸದನದ ಮುಂದೆ ಮಂಡಿಸಬೇಕು ಎಂದು ಅವರು ಹೇಳಿದ್ದಾರೆ. ಈಗ ಹಾಕಿರತಕ್ಕ ತೆರಿಗೆ ಏನು ಇದೆ ಅದು ಸರ್ಕಾರಕ್ಕೆ ಬರುವ ರೀತಿಯಲ್ಲಿ ಎಚ್ಚರಿಕೆ ವಹಿಸಿದರೆ ೧೨೦ ಕೋಟಿ ರೂಪಾಯಿ ಹೊಸ ತೆರಿಗೆ ಹಾಕುವಂಥ ಸಂದರ್ಭ ಬರುವುದಿಲ್ಲ. ಇವೊತ್ತು ಸರ್ಕಾರದವರು ಮಾರಾಟ ತೆರಿಗೆ ಏನು ಹಾಕಿದ್ದಾರೆ ಅದು ಬಹಳ ಮಟ್ಟಿಗೆ ಹೆಚ್ಚಿಗೆ ಹಾಕಿದ್ದಾರೆ ಎಂದು ಹೇಳುವುದಿಲ್ಲ. ಸಾಮಾನ್ಯವಾಗಿ ಈಗ ಮಾರಾಟ ತೆರಿಗೆ ವಸೂಲಾಗುತ್ತಿರುವುದು ನಲವತ್ತು ಪರ್‌ಸೆಂಟ್ ಮಾತ್ರ. ಇನ್ನುಳಿದ ಅರವತ್ತು ಪರ್‌ಸೆಂಟ್ ಮಾರಾಟ ತೆರಿಗೆ ವಸೂಲಾಗುತ್ತಿಲ್ಲ. ಇದಕ್ಕೆ ನಾನಾ ರೀತಿಗಳ ಕಾರಣ ಇದೆ. ಈ ವಿಚಾರ ನನಗೆ ಒಬ್ಬನಿಗೆ ಮಾತ್ರ ತಿಳಿದಿದೆ ಎಂದು ಹೇಳುತ್ತಿಲ್ಲ. ಈ ಮಾರಾಟ ತೆರಿಗೆ ಆದಾಯವನ್ನು ವ್ಯವಸ್ಥಿತವಾದ

ರೀತಿಯಿಂದ ಇಲಾಖೆ ಮುಖಾಂತರ ವಸೂಲು ಮಾಡಿದರೆ ೧೨೦ ಕೋಟಿ ೯೪ ಲಕ್ಷ ರೂಪಾಯಿ ತುಂಬಿ ಕೊಳ್ಳಲಿಕ್ಕೆ ಬೇರೆ ಯಾವುದೇ ಒಂದು ಹೊಸ ತೆರಿಗೆಯನ್ನು ಹಾಕಬೇಕಾಗಿಲ್ಲ ಎಂದು ಹೇಳುತ್ತೇನೆ. ಈ ವಿಚಾರದಲ್ಲಿ ಈಗಲಾಯ್ತು ಪ್ರಯತ್ನ ಮಾಡಿದರೂ ಸಹ ಹೊಸ ತೆರಿಗೆಯನ್ನು ಹಾಕುವ ಸನ್ನಿವೇಶ ಬರುವುದಿಲ್ಲ. ಇನ್ನು ಈ ಬಡ್ಜೆಟ್‌ನಲ್ಲಿ ಹತ್ತು ವರ್ಷಗಳ ಭವಿಷ್ಯವನ್ನು ನಾನಾ ರೀತಿಯಲ್ಲಿ ವರ್ಣನೆ ಮಾಡಿ ಹೇಳಿದ್ದಾರೆ. ಎಲ್ಲ ವರ್ಗಗಳಿಗೂ ಹಿತಕರವಾದ ಎಲ್ಲ ವ್ಯವಸ್ಥೆ ಮಾಡುವ ಸಲುವಾಗಿ ಅನೇಕ ಯೋಜನೆಗಳನ್ನು ತಯಾರು ಮಾಡುತ್ತೇವೆ ಎಂದು ಹೇಳಿದ್ದಾರೆ. ಇವರು ಹಿಂದೆ ವಿದ್ಯಾಭ್ಯಾಸ ಮಂತ್ರಿಗಳಾಗಿ ಬಹಳ ಚೆನ್ನಾಗಿ ನಡೆಸಿದರು. ಅದೇ ಆರ್ಥಿಕ ಶಾಖೆ ವಹಿಸಿಕೊಂಡ ಮೇಲೆ ಅಷ್ಟೊಂದು ಚೆನ್ನಾಗಿ ನಡೆಸುತ್ತಾರೆಯೋ ಎಂದು ನಾವು ದೂರದಿಂದಲೇ ನೋಡುತ್ತಿದ್ದೆವು. ಈ ಬಡ್ಜೆಟ್ ವಿಚಾರ ಮಾಡುವ ಕಾಲದಲ್ಲಿ ಇವರಿಗೆ ದೇವರು ಎಂತಹ ಶಕ್ತಿ ಕೊಟ್ಟಿದ್ದಾನೆ ಎಂದು ನೋಡಬೇಕಾಗಿದೆ. ಇವರ ಒಂದು ಹೆಚ್ಚು ಪ್ರತಿಭೆಗೆ ಸಂಬಂಧಪಟ್ಟ ಇಲಾಖೆಯ ನೌಕರರು ಸಹ ಸಹಾಯ ಮಾಡಿದ್ದಾರೆ ಅವರಿಗೂ ಸಹ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಇನ್ನು ಬೇಸಾಯ ನಮ್ಮ ದೇಶದ ಪ್ರಧಾನ ವೃತ್ತಿ ಎಂದು ಹೇಳಿದ್ದಾರೆ. ಇದನ್ನು ಅಕ್ಷರಶಃ ಒಪ್ಪತಕ್ಕ ಮಾತು. ಹಾಗೆ ನಾವು ಬೇಸಾಯ ಮಾಡತಕ್ಕ ಮನುಷ್ಯನಿಗೆ ಏನು ಸಹಾಯ ಕೊಟ್ಟಿದ್ದೇವೆ ಎಂದು ನೋಡ ಬೇಕಾಗುತ್ತದೆ. ಅದೇ ಕೈಗಾರಿಕೆ ಮಾಡತಕ್ಕ ಮನುಷ್ಯನಿಗೆ ಎಲ್ಲಾ ತರಹದ ಸವಲತ್ತು ಕೊಡುತ್ತೇವೆ. ಸಹಾಯಧನ ಕೊಡುತ್ತಿದ್ದೇವೆ. ಅಲ್ಲದೆ ಕಡಿಮೆ ಬಡ್ಡಿಯಲ್ಲಿ ಕೋಟಿ, ಕೋಟಿ ರೂಪಾಯಿ ಹಣ ಕೊಡುತ್ತಿದ್ದೇವೆ. ಆದರೆ ಅದೇ ಬೇಸಾಯ ಮಾಡತಕ್ಕ ಮನುಷ್ಯನಿಗೆ ಯಾವುದೇ ರೀತಿಯ ಸಹಾಯವನ್ನು ಕೊಡುತ್ತಿಲ್ಲ. ನೀರಾವರಿ ವ್ಯವಸಾಯ ಮಾಡವುದಕ್ಕಾಗಿ ಬಾವಿಯನ್ನು ತೋಡಿಕೊಂಡು ವ್ಯವಸಾಯ ಮಾಡಲಿಕ್ಕೆ ಪ್ರಾರಂಭ ಮಾಡಿದರೆ, ಇವರು ಹಾಕತಕ್ಕಂತಹ ಎಲೆಕ್ಟ್ರಿಸಿಟಿ ಚಾರ್ಜ್ ನೋಡಿದರೆ ಅವನು ವ್ಯವಸಾಯವನ್ನೇ ಬಿಡಬೇಕಾಗುತ್ತದೆ. ಇನ್ನು ಗೊಬ್ಬರದ ರೇಟ್‌ನ ಬಗ್ಗೆ ಹೇಳಬೇಕು ಎಂದರೆ, ಅದರ ಬೆಲೆ ಕೂಡ ಬಹಳ ಇದೆ. ಆ ಗೊಬ್ಬರ ಹಾಕಿ ವ್ಯವಸಾಯ ಮಾಡಿದರೆ ಸಾಕು ಆ ರೋಗ ಎಲ್ಲಿ ಇರುತ್ತದೆ ಎನ್ನುವುದೇ ಗೊತ್ತಾಗುವುದಿಲ್ಲ. ಆ ಗೊಬ್ಬರ ಹಾಕುವುದರಿಂದಲೇ ರೋಗ ಉತ್ಪತ್ತಿಯಾಗುತ್ತದೆಯೋ ಏನೋ ಗೊತ್ತಿಲ್ಲ ಇವೊತ್ತು ವ್ಯವಸಾಯ ಮಾಡತಕ್ಕವನಿಗೆ ಸರಿಯಾದ ರೀತಿಯಲ್ಲಿ ಅನುಕೂಲಗಳನ್ನು ಒದಗಿಸದೇ ಹೋದರೆ ತುಂಬಾ ತೊಂದರೆಯಾಗುತ್ತದೆ. ಈಗ ಸರ್ಕಾರಿ ನೌಕರರಾಗಲಿ, ಬೇರೆ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕವರಾಗಲಿ, ಅನುಕೂಲ ಪಡೆಯತಕ್ಕ ಅವಕಾಶಗಳು ಇದೆ. ಆದರೆ ಅದೇ ರೈತ ಯಾವ ಕಡೆಯಿಂದ ಅನುಕೂಲ ಪಡೆಯಬೇಕು ಎಂದು ಕೇಳುತ್ತೇನೆ. ಒಬ್ಬ ರೈತ ತನ್ನಲ್ಲಿರತಕ್ಕ ಎತ್ತುಗಳನ್ನು ಮೇಯಿಸುವುದಕ್ಕೆ ಹೋಗದೆ ಇದ್ದರಾಗಲಿ, ಅಥವಾ ಅವನ ಮನೆಯಲ್ಲಿ ಅಡುಗೆ ಮಾಡದೆ ಇದ್ದರಾಗಲ್ಲಿ, ಇವರನ್ನು ಯಾರೂ ಕೇಳುವವರೇ ಇರುವುದಿಲ್ಲ. ಇನ್ನು ಮಾನ್ಯ ಸದಸ್ಯರಾದ ರಾಜಶೇಖರನ್ ಅವರು ಒಂದು ವಿಚಾರವನ್ನು ಅಂದರೆ "ಅವರು ಅವರ ಕ್ಷೇತ್ರದಲ್ಲಿ ಪ್ರವಾಸದಲ್ಲಿದ್ದಾಗ ಸಾವಿರಾರು ಸಂಸಾರಗಳಿಗೆ ಮನೆ ಇಲ್ಲದೆ ತೊಂದರೆ ಅನುಭವಿಸುತ್ತಿದ್ದಾರೆಂದು ತಿಳಿಸಿದರು. ಆದರೆ ಅವರೂ ಕೂಡ ಸಂಸತ್ಸದಸ್ಯರಾಗಿದ್ದವರು. ಅವರ ಸಂಬಂಧಿಗಳು ಕೂಡ ೧೩ ವರ್ಷ ರಾಜ್ಯ ಆಳಿದ್ದಾರೆ. ಆಗ ಅವರಿಗೆ ಇಷ್ಟೊಂದು ಪಶ್ಚಾತ್ತಾಪ ಇರಲಿಲ್ಲವೇ ? ನಾವು ಹೇಳಬಹುದು ಆದರೆ ಕೆಲಸ ಮಾಡತಕ್ಕ ವಿಧಾನವನ್ನು ನಾವು ಹೊಂದಿರಬೇಕು. ಇನ್ನು ಭೂ ಸುಧಾರಣ ಕ್ಷೇತ್ರದಲ್ಲಿ ಗೇಣಿದಾರರ ವ್ಯವಹಾರ ತೀರ್ಮಾನ ಮಾಡುವುದಕ್ಕೆ ಖಾಸಗಿ ಸದಸ್ಯರು ಲಂಚ ಪಡೆಯತಕ್ಕವರು ಇದ್ದಾರೆ ಎಂದು ಕೆಲವು ಸದಸ್ಯರು ಹೇಳಿದರು. ತನ್ನ ಜೊತೆಯಲ್ಲಿ ಬೆಳೆದಿರತಕ್ಕಂತಹ ಜನರ ತೀರ್ಮಾನವನ್ನು ತಾನು ಅದೇ ಸ್ಥಳದಲ್ಲೇ ತೀರ್ಮಾನ ಮಾಡುವಾಗ ತಪ್ಪು ಮಾಡಿದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಅವರು ಎಂದಿಗೂ ತಪ್ಪು ಮಾಡಲಿಕ್ಕೆ ಹೋಗುವುದಿಲ್ಲ. ಇವೊತ್ತು ಅಸಿಸ್ಟೆಂಟ್ ಕಮಿಷನರ್ ಅವರು ಚೇರ್‌ಮನ್ ಆಗಿರುವುದರಿಂದ ಅವರ ಕೈಕೆಳಗೆ ಕುಳಿತು ತೀರ್ಮಾನ ಮಾಡಬೇಕಾಗಿದೆ. ಈ ಬಗ್ಗೆ ನಾನು ಕೇಳಬೇಕು ಎಂದರೆ ಆ ಸ್ಥಳದಲ್ಲಿರತಕ್ಕಂತಹ ಖಾಸಗಿ ಜನರಿಗೆ ಪಾಪ ಪುಣ್ಯದ ಭೀತಿ ಇರುವುದಿಲ್ಲವೇನು ? ಇವೊತ್ತು ರಾಷ್ಟ್ರಾಧ್ಯಕ್ಷನಾಗಬೇಕಾದರೆ ಯಾವ ಒಂದು ಕ್ವಾಲಿಫಿಕೇಷನ್ ಕೂಡ ಬೇಡ ; ಎಂದು ಹೇಳಬೇಕಾದರೆ, ಸಾವಿರಾರು ಜನರ ಎದುರುಗಡೆ ಜಮೀನು ವಹಿಸಿಕೊಡುವಂಥ ತೀರ್ಮಾನ ಕೊಡತಕ್ಕವನಿಗ ಪಾಪ ಪುಣ್ಯದ ಅರಿವು ಇರುವುದಿಲ್ಲವೇನು ಎಂದು ಕೇಳುತ್ತೇನೆ. ಇವೊತ್ತು ಶಾಸನ ಸಭೆಯ ಸದಸ್ಯನಾಗಿರತಕ್ಕವನು ಒಬ್ಬ ಅಸಿಸ್ಟೆಂಟ್ ಕಮಿಷನರ್ ಕೆಳಗೆ ಕುಳಿತು ತೀರ್ಮಾನ ಮಾಡಬೇಕು, ಇದೊಂದು ಪ್ರಜಾಪ್ರಭುತ್ವಕ್ಕೆ ಲೋಪವಾಗಿದೆ. ಈ ದೃಷ್ಟಿಯಿಂದ ನಾವು ಪ್ರಜಾಪ್ರಭುತ್ವಕ್ಕೆ ಗೌರವ ಕೊಡಬೇಕಾದರೆ ಎಲ್ಲಾ ಅಲೋಚನೆ ಮಾಡಬೇಕು. ಎಂದು ಹೇಳುತ್ತೇನೆ.

ಸರಿಯಾದಂಥ ಪ್ರಜಾಪ್ರಭುತ್ವ ಈ ದೇಶಕ್ಕೆ ಬರಲಿಲ್ಲ, ದೇಶದಲ್ಲಿ ಯಾವರೀತಿಯಲ್ಲಿ ಪ್ರಜಾಪ್ರಭುತ್ವ ಇರಬೇಕೆಂದು ಹೇಳುತ್ತಿದ್ದ ಪೂಜ್ಯ ಮಹಾತ್ಮಾ ಗಾಂಧೀಜಿಯವರನ್ನು ನಾವು ಕೊಂದು ಹಾಕಿದ್ದೇವೆ. ಅವರು ಇದ್ದಿದ್ದರೆ ಈ ಪ್ರಜಾಪ್ರಭುತ್ವವೇ ಬೇರೆ ರೀತಿ ಇರುತ್ತಿತ್ತು. ಆದರೆ ಅದಕೆ ಅವಕಾಶ ಕೊಡಲಿಲ್ಲ. ಇವತ್ತು ಎಲ್ಲರೂ ಟೀಕೆ ಮಾಡುತ್ತಿದ್ದಾರೆ. ಯಾರಾದರೂ ಅಧಿಕಾರಿಗಳು ಇವತ್ತು ಲಂಚಕೋರರಾಗಿದ್ದಾರೆ, ಅವರು ಭ್ರಷ್ಟಾಚಾರ ಮಾಡುತ್ತಿದ್ದಾರೆ ಎಂದು ಹೇಳುವುದಾದರೆ ಅದು ೧೯೪೭ನೇ ಇಸವಿಯಿಂದೀಚೆಗೆ ಮಾತ್ರ. ಆದರೆ ಇದಕ್ಕೆ ಹಿಂದೆ ಇದ್ದ ಅಧಿಕಾರಿಗಳು ಲಂಚಕೋರರಾಗಿರಲಿಲ್ಲವೆ? ಎಂದು ಕೇಳಬಹುದು. ಆಗಲೂ ಸಹ ಲಂಚಕೋರ ಅಧಿಕಾರಿಗಳಿದ್ದರು, ಆದರೆ ಎಲ್ಲೋ ಸಾವಿರಕ್ಕೆ ಒಬ್ಬರು. ಇವತ್ತು ಏನಾಗಿದೆ ಎಂದರೆ ಈ ಲಂಚ ತೆಗೆದುಕೊಳ್ಳುವುದು ಸರ್ವೇಸಾಮಾನ್ಯವಾಗಿದೆ. ಪಾಪ ಪುಣ್ಯಗಳ ಭೀತಿ ಈ ಲಂಚಕೋರರಲ್ಲಿ ಕಡಿಮೆಯಾಗಿದೆ. ಸ್ವಾರ್ಥತೆ ಹೆಚ್ಚಾಗಿದೆ, ತ್ಯಾಗಬುದ್ಧಿ ಕಡಿಮೆಯಾಗಿದೆ. ಇದೇರೀತಿ ಮುಂದುವರಿದರೆ ದೇಶದಲ್ಲಿ ಒಳ್ಳೆಯ ಪ್ರಜಾಪ್ರಭುತ್ವವನ್ನು ತರುವುದಕ್ಕಾಗುವುದಿಲ್ಲ. ಮಾನ್ಯ ಆರ್ಥಿಕ ಸಚಿವರು ತಮ್ಮ ಬಜೆಟ್ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಏನೆಂದರೆ,

> "ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಸಲುವಾಗಿ ಈಗ ಕಾಯ್ದಿರಿಸಲಾದ ಶೇಕಡ ೧೮ರ ಸ್ಥಾನಗಳಿಗೆ ಹೆಚ್ಚಿಗೆಯಾಗಿ ಅವರಿಗೆ ಶೇಕಡ ೪೦ರಷ್ಟು ಸ್ಥಾನಗಳನ್ನು ಕಾಯ್ದಿರಿಸಲಾಗಿದೆ."

4-00 P M.

ಹಿಂದುಳಿದ ವರ್ಗದವರಿಗೆ ರಿಸರ್ವೇಷನ್ ಇಡಬೇಕೆಂದು ಮಾಡಿದ್ದು ಸರಿ, ಕಳೆದ ೩೦ ವರ್ಷಗಳಿಂದಲೂ ಇವರಿಗೆ ರಿಸರ್ವೇಷನ್ ಇಡುತ್ತಾ ಬಂದಿದ್ದೇವೆ. ಇನ್ನೂ ಎಷ್ಟು ದಿವಸ ಇದೇರೀತಿ ಕೊಡಬೇಕು? ಇವರಿಗೆ ರಿಸರ್ವೇಷನ್ ಕೊಡುವುದನ್ನು ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಇವತ್ತು ಏನಾಗಿದೆ ಎಂದರೆ, ಯಾರು ಹರಿಜನ ಗಿರಿಜನರ ಹೆಸರನ್ನು ಹೇಳಿಕೊಂಡು ಓಡಾಡುತ್ತಿದ್ದಾರೆ ಅವರಿಗೆ ಈ ಎಲ್ಲ ಸೌಲಭ್ಯಗಳೂ ಸಿಕ್ಕುತ್ತಿವೆಯೇ ಹೊರತು ನಿಜವಾಗಿಯೂ ಈ ಗ್ರಾಮೀಣ ಹರಿಜನಗಿರಿಜನರಿಗೆ ಇದುವರೆಗೂ ೧೦ ಪರ್ಸೆಂಟ್ ಕೂಡ ಸರ್ಕಾರದಿಂದ ಕೊಡುತ್ತಿರುವ ಸೌಲಭ್ಯಗಳು ಸಿಕ್ಕುತ್ತಿಲ್ಲ. ಯಾರು ಐ.ಎ.ಎಸ್. ಐ.ಪಿ.ಎಸ್. ಅಧಿಕಾರಿಗಳಿದ್ದಾರೆ, ಯಾರಿಗೆ ಆದಾಯ ಜಾಸ್ತಿ ಇದೆ, ಯಾರು ರಾಜಕಾರಣಿಗಳು ಇದ್ದಾರೆ ಅವರಿಗೆ ಮಾತ್ರ ಈ ಸೌಲತ್ತುಗಳು ಸಿಕ್ಕುತ್ತಿವೆ. ಹಳ್ಳಿಯಲ್ಲಿ ವಾಸಿಸಿಕೊಂಡು ಜೀವಿಸುವ ಹರಿಜನರು ಇವತ್ತು ಬಿ.ಎ, ಬಿ.ಎಸ್‌ಸಿ, ಪದವಿಗಳನ್ನು ಪಡೆದುಕೊಂಡಿದ್ದರೂ ಅವರಿಗೆ ೫-೬ ವರ್ಷಗಳಿಂದಲೂ ಕೆಲಸವಿಲ್ಲದೆ, ದಿವಸಕ್ಕೆ ೩-೪ ರೂಪಾಯಿಗಳ ಕೂಲಿಗೆ ಹೋಗುತ್ತಿದ್ದಾರೆ. ಈ ಪ್ರಜಾಪ್ರಭುತ್ವದಲ್ಲಿ ದೇಶದಲ್ಲಿರುವ ಎಲ್ಲರಿಗೂ ಸರಿಸಮಾನವಾದ ಹಕ್ಕು ಇರಬೇಕೆಂದು ಹೇಳುತ್ತಿದ್ದೇವೆ, ಜಾತ್ಯಾತೀತ ರಾಷ್ಟ್ರ ಕಟ್ಟಬೇಕೆಂದು ಹೇಳುತ್ತಿದ್ದೇವೆ, ಇದು ಬರೀ ಬಾಯಿ ಮಾತಿನಲ್ಲಿ ಮಾತ್ರ ಇದೆಯಷ್ಟೆ. ಇವತ್ತು ನಾವು ಜಾತಿಯ ಹೆಸರನ್ನು ಹೇಳುತ್ತಿದ್ದೇವೆ. ಈ ರೀತಿ ಹೇಳುವುದಾದರೆ ಇದು ಜಾತ್ಯಾತೀತ ರಾಷ್ಟ್ರವೆ? ಅವನು ಅಂಥ ಜಾತಿ, ಇವನು ಇಂಥ ಜಾತಿ ಎಂದು ಕಳೆದ ೩೦ ವರ್ಷಗಳಿಂದಲೂ ರಿಸರ್ವೇಷನ್ ಇಡುತ್ತಿರುವುದನ್ನು ಸಹಿಸುವುದಕ್ಕಾಗುವುದಿಲ್ಲ, ಯಾರು ಯಾರು ಪರಾಸ್ರಯದಲ್ಲಿದ್ದಾರೆ ಅಂಥವರನ್ನು ಮೇಲಕ್ಕೆ ಎಬ್ಬಿಸಿ ನಿಮಗೆ ಏನು ಬೇಕೋ ಅದನ್ನು ಒದಗಿಸಿಕೊಡುತ್ತೇವೆ, ಸುಖವಾಗಿ ಜೀವನ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿ ಬಂದಿದ್ದೇವೆ. ಮಾನ್ಯ ಅರ್ಥ ಮಂತ್ರಿಯವರು ಏನು ಹೇಳಿದ್ದಾರೆ ಆ ಮಾತನ್ನು ಕಾರ್ಯತಃ ಮಾಡಿ ತೋರಿಸಬೇಕು. ಮಾನ್ಯ ಮುಖ್ಯ ಮಂತ್ರಿಯವರು ಒಂದು ಕಡೆ ಮೀಟಿಂಗ್‌ನಲ್ಲಿ ಮಾತನಾಡುತ್ತಾ ಸರ್ಕಾರಿ ನೌಕರರನ್ನು ಹಾಡಿ ಹೊಗಳಿದ್ದಾರೆ. ನೀವೆಲ್ಲರೂ ಚೆನ್ನಾಗಿ ಕೆಲಸ ಮಾಡಿದ್ದರಿಂದ ನಾವು ಈರೀತಿಯ ಯಶಸ್ಸನ್ನು ಗಳಿಸುವುದಕ್ಕೆ ಸಾಧ್ಯವಾಯಿತು. ಆದ್ದರಿಂದ ಈ ಹೊಗಳಿಕೆಗೆ ನೀವೂ ಕೂಡ ಭಾಗಿಗಳು ಎಂದು ಹೇಳಿದ್ದಾರೆ.

ಇನ್ನೊಂದು ಮಾತು ಹೇಳುವುದಾದರೆ, ಅಕ್ರಮವಾಗಿ ಜಮೀನನ್ನು ಯಾರು ಯಾರು ಸಾಗುವಳಿ ಮಾಡಿಕೊಂಡಿದ್ದಾರೆ, ಅಂಥ ಜನರನ್ನು ಆ ಜಮೀನಿನಿಂದ ಹೊರಗೆ ಹಾಕಬೇಕೆಂದು ಮಾನ್ಯ ಕಂದಾಯ ಮಂತ್ರಿಗಳು ಒಂದು ಆದೇಶವನ್ನು ಹೊರಡಿಸಿದರು. ಆ ಸಂದರ್ಭದಲ್ಲಿ ಅನೇಕ ಜನ ಜಮೀನಿಲ್ಲದವರು ಅಕ್ರಮ ಸಾಗುವಳಿ ಮಾಡಿಕೊಂಡಿದ್ದವರು ತೊಂದರೆಗೆ ಒಳಗಾದರು. ಹೇಗೆಂದರೆ, ಅವರ ಹೆಸರಿನಲ್ಲಿ ಪಹಣಿ ಇರಲಿಲ್ಲ: ಅಲ್ಲದೆ ಪಹಣಿ ಬರೆಸಿಕೊಳ್ಳುವ ಶಕ್ತಿಯೂ ಇರಲಿಲ್ಲ. ಇಂಥ ಆ ಜನರನು ಆ ಜಮೀನು

ಗಳಿಂದ ಒಂದು ವರ್ಷದೊಳಗಾಗಿ ಓಡಿಸಿದರು. ನಂತರ ಅದೇ ಜಮೀನುಗಳನ್ನು ಬೇರೆ ಜನಗಳಿಗೆ ಹಂಚಿಕೆ ಮಾಡಿದರು. ಅದನ್ನು ಎಂಥವರಿಗೆ ಹಂಚಿಕೆ ಮಾಡಿದರು ಅಂದರೆ ಯಾರಿಗೆ ಹೆಚ್ಚಿಗೆ ಜಮೀನು ಇತ್ತು, ಯಾರು ಟ್ರಾಕ್ಟರ್ ಇಟ್ಟುಕೊಂಡಿದ್ದರು, ಅಂಥವರಿಗೆ ಕೊಟ್ಟರು. ಅವರು ಆ ಜಮೀನನ್ನು ತಮ್ಮ ಮಗನ ಹೆಸರಿಗೆ, ಮಗಳ ಹೆಸರಿಗೆ, ಹೆಂಡತಿ ಹೆಸರಿಗೆ ಮಾಡಿಸಿ ಪಹಣಿ ಬರೆಸಿದರು.

ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಇನ್ನೊಂದು ಮಾತು ಹೇಳಬಯಸುತ್ತೇನೆ. ನಮ್ಮ ತಿಪಟೂರು ತಾಲ್ಲೂಕಿಗೆ ಒಬ್ಬ ತಹಸೀಲ್ದಾರರು ಬಂದಿದ್ದರು. ಅವರು ಬಹಳ ಬುದ್ಧಿವಂತರು, ಅವರು ಎಷ್ಟು ಬುದ್ಧಿವಂತರು ಎಂದರೆ ಅವರು ಏನೇನು ಕಲಿಯಬಹುದೋ ಅಷ್ಟನ್ನೂ ಒಂದೇ ವರ್ಷದಲ್ಲಿ ಕಲಿತಿದ್ದರು. ಅಕಸ್ಮಾತ್ತಾಗಿ ಅವರಿಗೆ ಅಲ್ಲಿಂದ ಬೇರೆಕಡೆಗೆ ಟ್ರಾನ್ಸ್‌ಫರ ಆಯಿತು. ಆಗ ಅವರ ಬಳಿ ಸುಮಾರು ಒಂದೂವರೆ ಸಾವಿರ ಫೈಲುಗಳು ಪೆಂಡಿಂಗ್ ಇದ್ದವು. ಇವರ ಆಫೀಸ್ ಎಲ್ಲಿತ್ತು ಅಂದರೆ ಇವರ ಮನೆಯಲ್ಲೇ ಇತ್ತು, ರೆವಿನ್ಯೂ ಇನ್‌ಸ್ಪೆಕ್ಟರ್, ವಿಲೇಜ್ ಅಕೌಂಟೆಂಟ್, ಎಲ್ಲಾ ಇವರ ಮನೆಯಲ್ಲೇ ಇರುತ್ತಿದ್ದರು. ನಂತರ ಇವರ ಜಾಗಕ್ಕೆ ಇನ್ನೊಬ್ಬ ಹೊಸ ತಹಸೀಲ್ದಾರ್‌ರವರು ಬಂದರು. ಅವರು ಹೊಸಬರಾದ್ದರಿಂದ ಅವರಿಗೆ ಏನೊಂದು ಗೊತ್ತಿರಲಿಲ್ಲ ಒಂದು ಸಾರಿ ನಾನೇ ಅವರನ್ನು ಯಾವುದೋ ಒಂದು ಫೈಲು ನಿಮ್ಮ ಕಡೆ ಬಂದಿದೆಯೆಂತೆ ನೋಡಿ ಎಂದು ಹೇಳಿದೆ ಅವರು ಮೂರು ನಾಲ್ಕು ದಿವಸ ಹುಡುಕಿದರೂ ಅದು ಸಿಕ್ಕಲಿಲ್ಲ. ಕೊನೆಗೆ ಪುನಃ ಅವರೇ ಬಂದು ನನ್ನನ್ನು ಕೇಳಿದರು. ಇವತ್ತು ನಾವು ಯಾರಿಗೆ ಸಹಾಯ ಮಾಡಿ, ಯಾರನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತಿದ್ದೇವೆ, ಆ ಜನರಿಗೆ ಯಾವ ಸೌಲಭ್ಯಗಳೂ ಸಿಕ್ಕದೆ, ಅವರಿಗೆ ಆಗುತ್ತಿರುವಂತಹ ಅನ್ಯಾಯಗಳು ಬೇರೆ ಯಾರಿಗೂ ಆಗುತ್ತಿಲ್ಲ. ಹೊತ್ತೊತ್ತಿಗೆ ಊಟಮಾಡಿಕೊಂಡಿದ್ದ ಜನರಿಗೆ ನಾವು ಏನೇನೋ ಹೇಳಿ ಅವರನ್ನು ಎಬ್ಬಿಸಿದ್ದೇವೆ, ಇವತ್ತು ಯಾವ ಒಂದು ಬಡ್ಜೆಟ್‌ನ್ನು ಈ ಸದನದ ಮುಂದೆ ಮಂಡಿಸಿದೆಯೋ ಇದರಿಂದ ಒಂದು ಕ್ರಾಂತಿಯೇ ಆಗಬಹುದೆಂದು ಭಾವಿಸಬೇಕಾಗುತ್ತದೆ. ದೇಶದಲ್ಲಿರುವವರೆಲ್ಲರೂ ಬಸವನ ಪುರಾಣವನ್ನು ಹೇಳುವವರೇ ಆಗಿದ್ದಾರೆ, ಇದರಲ್ಲಿ ಕಟುಕರು ಯಾರು, ಬಸವನ ಪುರಾಣ ಹೇಳುವವರು ಯಾರು ಎಂಬುದನ್ನು ಕಂಡು ಹಿಡಿಯುವುದೇ ಕಷ್ಟವಾಗಿದೆ. ನಾವು ಮಾಡುತ್ತಿರುವ ಕೆಲಸವನ್ನು ನೋಡಿ ಜನತೆ ತಮ್ಮ ಮನಸ್ಸಿನಲ್ಲಿರುವುದನ್ನು ಹೇಳಲೂ ಆರರು, ನಮ್ಮನ್ನು ಕೇಳಲೂ ಆರರು, ಎಲ್ಲವನ್ನೂ ತಮ್ಮ ಮನಸ್ಸಿನಲ್ಲೆ ಇಟ್ಟುಕೊಂಡಿದ್ದಾರೆ. ಹರಿಜನಗಿರಿಜನರಿಗೆ ಕೊಡುವ ಸೌಲತ್ತುಗಳನ್ನು ಕಡಿಮೆ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಹಿಂದಿನ ಕಾಲದಲ್ಲಿ ಕೆಟ್ಟ ಕೆಲಸ ಮಾಡುತ್ತಿದ್ದವರಿಗೆ ಬುದ್ಧಿವಾದ ಹೇಳಲು ಹೋದರೆ ಆಗ, ಕಟುಕರ ಮುಂದೆ ಬಸವನ ಪುರಾಣವೆ ಎಂದು ಬುದ್ಧಿವಾದ ಹೇಳಲು ಹೋದವರಿಗೆ ಹೇಳುತ್ತಿದ್ದರು. ಆದರೆ ಇವತ್ತು ಎಲ್ಲರೂ ಧರ್ಮ, ನ್ಯಾಯ–ನೀತಿ, ಪುರಾಣ ಹೇಳುವವರೇ ಆಗಿದ್ದಾರೆ. ಇದರಲ್ಲಿ ಯಾರು ಯೋಗ್ಯರು, ಯಾರು ಅಯೋಗ್ಯರು ಎಂದು ಪತ್ತೆ ಹಚ್ಚುವುದೇ ಕಷ್ಟವಾಗಿದೆ. ಇಂಥ ಸಂದರ್ಭದಲ್ಲಿ ನಾವು ಎಚ್ಚೆತ್ತುಕೊಳ್ಳದಿದ್ದರ ಮುಂದೆ ನಮಗೆ ಕಷ್ಟವಾಗುತ್ತದೆಂದು ಹೇಳಬಯಸುತ್ತೇನೆ.

ಸಾಮಾನ್ಯವಾಗಿ ಹೋದವರ್ಷ ಆಹಾರಧಾನ್ಯಗಳನ್ನು ಸರಬರಾಜು ಮಾಡುತ್ತಿದ್ದಾಗ ಮಿಲೊ ಎಂಬ ಜೋಳವನ್ನು ಜನರಿಗೆ ಸರಬರಾಜು ಮಾಡುತ್ತಿದ್ದರು. ಇದರಿಂದ ಬಡಜನತೆಗೆ ಬಹಳ ಅನುಕೂಲವಾಗುತ್ತಿತ್ತು. ಇದು ಬಹಳ ಕಡಿಮೆ ಬೆಲೆಯಲ್ಲಿ ಮಾರ್ಕೆಟ್‌ನಲ್ಲಿ ದೊರೆಯುತ್ತಿದ್ದುದರಿಂದ ಜನರು ಬಹಳ ಸಂತೋಷದಿಂದ ತೆಗೆದುಕೊಂಡು ಹೋಗುತ್ತಿದ್ದರು. ಆದರೆ ಈಗ ಅದನ್ನು ಸರಬರಾಜು ಮಾಡುವುದನ್ನು ನಿಲ್ಲಿಸಿರುತ್ತಾರೆ. ಇದಕ್ಕೆ ಕಾರಣವೇನೆಂದು ಕೇಳಿದರೆ ಕೇಂದ್ರದವರು ಕೊಡುತ್ತಿಲ್ಲ ಎಂದು ಹೇಳುತ್ತಿದ್ದಾರೆ ಕೇಂದ್ರದವರು ಈಗ ಮಿಲೋ ಸಿಕ್ಕುತ್ತಿಲ್ಲ, ಇದನ್ನು ಬೇರೆ ದೇಶಗಳಿಂದ ತರಿಸಬೇಕಾಗಿತ್ತು, ತರಿಸುವುದನ್ನು ನಿಲ್ಲಿಸಿರುತ್ತೇವೆಂದು ಉತ್ತರ ಕೊಡುತ್ತಿದ್ದಾರೆ.

ಶ್ರೀ ಎಚ್. ಗಂಗಾಧರ್.—ಹಿಂದೆ ಮಿಲೊವನ್ನು ಅಮೇರಿಕಾದಿಂದ ತರಿಸುತ್ತಿದ್ದರು. ಅಮೇರಿಕದಲ್ಲಿ ಇದನ್ನು ಹಂದಿಗಳಿಗೆ ಹಾಕುವುದಕ್ಕೋಸ್ಕರವಾಗಿ ಉಪಯೋಗಿಸುತ್ತಿದ್ದೇವೆ. ನೀವು ಏತಕ್ಕೆ ತೆಗೆದುಕೊಂಡು ಹೋಗುತ್ತೀರಿ ಎಂದು ಕೇಳುತ್ತಿದ್ದರಂತೆ. ಅದಕ್ಕೆ ನಮ್ಮ ದೇಶದಲ್ಲಿ ಜನರು ಇದನ್ನು ತಿನ್ನುತ್ತಾರೆಂದು ಹಿಂದಿನ ಸರ್ಕಾರದವರು ಹೇಳಿದರಂತೆ.

ಶ್ರೀ ವಿ. ಎಲ್. ಶಿವಪ್ಪ.—ಅವರು ಹೇಳುವುದು ನಿಜವಿರಬಹುದು. ಏತಕ್ಕೆಂದರೆ ಈಗಿನ ಪ್ರಧಾನಿಯವರಾದ ಮೊರಾರ್ಜಿ ದೇಸಾಯ್‌ರವರಿಗೆ ೮೦ ವರ್ಷಗಳಾಯಿತು. ಅವರು ಹಿಂದೆಯೂ ಉಪ–ಪ್ರಧಾನ ಮಂತ್ರಿಗಳಾಗಿದ್ದರು. ನೆಹರೂರವರ ಕಾಲದಲ್ಲಿ ಅವರು ಸಮಾಜವಾದಿ ಸಮಾಜವನ್ನು

ಸ್ಥಾಪನೆ ಮಾಡಬೇಕೆಂದು ಇದ್ದಾಗ ಅದಕ್ಕೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದಂತ ಜನ ಅವರು. ಈವತ್ತಿನದಿನವಸ ಅದೇ ವಿಲೋವನ್ನು ತರಿಸಿಕೊಟ್ಟರು ತಿನ್ನತಕ್ಕಂಥ ಪರಿಸ್ಥಿತಿಯಲ್ಲಿ ಇರುತ್ತೇವೆಯೋ ಹೊರತು ಇನ್ನು ಬೇಡವೆನ್ನುವ ಮಟ್ಟಕ್ಕೆ ನಮ್ಮ ದೇಶವು ಮುಂದುವರಿದಿಲ್ಲ. ಈ ದೇಶ ಈ ಸ್ಥಿತಿಯಲ್ಲಿರುವುದಕ್ಕೆ ಇಂದಿನ ಪ್ರಧಾನಿಗಳೂ ಕಾರಣರೆಂದರೆ ತಪ್ಪಲ್ಲ. ಆದ್ದರಿಂದ ಮತ್ತೆ ಅದನ್ನೇ ತರಿಸಿಕೊಟ್ಟರೆ ಬಹಳ ಸಂತೋಷ.

ಇನ್ನು ನಮ್ಮಲ್ಲಿ ಪರಿಹಾರ ಕಾಮಗಾರಿಗಳಿಗಾಗಿ ಕೇಂದ್ರ ಸರ್ಕಾರದವರು ಶೇಕಡಾ ೭೦ರಷ್ಟು ಹಣವನ್ನು ಸಾಲವಾಗಿ ನೀಡುತ್ತಿದ್ದರು. ರಾಜ್ಯದ ಎಲ್ಲ ಉತ್ಪತ್ತಿಯನ್ನು ತೆಗೆದುಕೊಳ್ಳತಕ್ಕಂಥ ಕೇಂದ್ರ ಸರ್ಕಾರ ರಾಜ್ಯಕ್ಕೆ ಬಹಳ ಕಡಿಮೆ ಹಣವನ್ನು ಕೊಟ್ಟರೆ ಯಾವ ರೀತಿ ಪ್ಲಾನ್ ಸ್ಕೀಮ್‌ಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಕೇಳಬೇಕಾಗಿರುತ್ತದೆ. ಮಾನ್ಯ ಮೊರಾರ್ಜಿ ದೇಸಾಯ್‌ರವರು ಮೊನ್ನೆ ಅಮೇರಿಕಾದಲ್ಲಿ ಪ್ರವಾಸವಿದ್ದಾಗ ನಮ್ಮ ದೇಶದಲ್ಲಿ ಬಡತನವಿದ್ದರೂ ನಾಗರೀಕತೆಯಲ್ಲಿ ಬಹಳ ಐಶ್ವರ್ಯವಂತರಾಗಿದ್ದೇವೆಂದು ಹೇಳಿಕೊಂಡಿರುತ್ತಾರೆ. ಅವರು ಹೀಗೆಲ್ಲ ಏತಕ್ಕೆ ಹೇಳುತ್ತಾರೋ ಗೊತ್ತಿಲ್ಲ. ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದವರಿಗೆ ಸರಿಯಾದ ರೀತಿಯಲ್ಲಿ ಸಹಾಯ ಮಾಡದೆಹೋದಪಕ್ಷದಲ್ಲಿ ರಾಜ್ಯಕ್ಕೆ ಅನುಕೂಲತೆಯಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ನಮ್ಮ ದೇಶದಲ್ಲಿ ಬಹುತೇಕ ವರ್ಷಗಳಿಂದ ಖಾಸಗಿ ಶಾಲಾ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಈರೀತಿ ನಡೆಸತಕ್ಕಂಥ ಖಾಸಗಿ ಸಂಸ್ಥೆಗಳು ರಾಜಕಾರಣ ಮಾಡತಕ್ಕಂಥ ಸಂಸ್ಥೆಗಳಾಗಿ ಪರಿಣಮಿಸಿಕೊಂಡಿರುತ್ತವೆ. ತಮಗೆ ಬೇಕಾದವರಿಗೆ ನೌಕರಿಗಳನ್ನು ಕೊಡುವುದು, ಜಾತೀಯತೆಯನ್ನು ಮಾಡುವುದು, ಹಣವನ್ನು ಸಂಪಾದನೆ ಮಾಡುವುದರಲ್ಲಿಯೇ ಮಗ್ನರಾಗಿರುತ್ತಾರೆ. ಇವರನ್ನು ಹೀಗೆಯೇ ಮುಂದುವರಿಯುವುದಕ್ಕೆ ಬಿಡಬಾರದೆಂದು ಹೇಳುತ್ತೇನೆ. ಕೊನೆಯಪಕ್ಷ ಇನ್ನು ಮುಂದೆ ಪ್ರಾರಂಭಿಸುವ ಶಾಲೆಗಳನ್ನು ಸರ್ಕಾರದವರೇ ತೆರೆದರೆ ಒಳ್ಳೆಯದೆಂದು ನನ್ನ ಅಭಿಪ್ರಾಯವಾಗಿರುತ್ತದೆ. ಮೂರು ನಾಲ್ಕು ವರ್ಷಗಳು ತಮ್ಮ ಸ್ವಂತಹಣದಿಂದ ನಡೆಸಿದ ನಂತರ ಅವರಿಗೆ ಸಹಾಯಧನವನ್ನು ಕೊಡುವ ಒಂದು ಪದ್ಧತಿ ಜಾರಿಯಲ್ಲಿರುತ್ತದೆ. ಏತಕ್ಕೆ ಈರೀತಿಯಾಗಿ ಮಾಡುತ್ತಿರುತ್ತಾರೋ ಅರ್ಥವಾಗುತ್ತಿಲ್ಲ. ಇನ್ನು ಮುಂದೆ ಯಾವ ಖಾಸಗಿ ಶಾಲೆಯನ್ನು ತೆರೆಯುವುದಕ್ಕೆ ಪರ್ಮಿಶನ್ ಕೊಡಬಾರದೆಂದು ಹೇಳುತ್ತೇನೆ. ಬೇಕಾದರೆ ಮೂರು ವರ್ಷಗಳು ಶಾಲೆಗಳನ್ನು ತೆರೆಯಲು ತಡವಾದರೂ ಪರವಾಗಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಭಾರತ ಸರ್ಕಾರದವರು ಪಾನ ನಿರೋಧವನ್ನು ಹಂತಹಂತವಾಗಿ ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಮಾನ್ಯ ಸಚಿವರೂ ಸಹ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಸ್ವಾಭಾವಿಕವಾಗಿ ಈಗಾಗಲೇ ಪ್ರಧಾನಮಂತ್ರಿಯವರು ಪಾನನಿರೋಧವನ್ನು ಜಾರಿಗೆ ತರುತ್ತೇವೆಂದು ಹೇಳಿರುವುದರಿಂದ ಅವರು ಜಾರಿಗೆ ತಂದುಬಿಟ್ಟರೆ ನಮ್ಮ ಪ್ರಶ್ನೆಯೇ ಬರುವುದಿಲ್ಲ. ಹೀಗೆ ಅವರು ಬರಿ ಬಾಯಲ್ಲಿ ಹೇಳಿಕೊಂಡು ಬರುತ್ತಿರುತ್ತಾರೆಯೇ ಹೊರತು ಕಾರ್ಯತಃ ಮಾಡುತ್ತಿಲ್ಲ, ಹಿಂದೆ ನಾನು ಪಿ.ಎಸ್.ಪಿ.ಯಲ್ಲಿ ಇದ್ದಾಗ ಶ್ರೀ ಜೆ. ಎಚ್. ಪಟೇಲ್‌ರವರು ಪ್ರಚಾರ ಭಾಷಣಕ್ಕೆ ಬಂದಿದ್ದರು. ಆಗ ಅವರ ಭಾಷಣವನ್ನು ಕೇಳಿ ಅವರು ಮುಂದೆ ವಿರೋಧಪಕ್ಷದ ನಾಯಕರಾಗಬಹುದೆಂದು ಭಾವಿಸಿದ್ದೆ. ಆದರೆ ಅವರು ಇನ್ನೂ ಕಾಪಿಟಲಿಸ್ಟ್‌ರವರ ಕೈಯಲ್ಲಿ ಸಿಕ್ಕಿಕೊಂಡು ಅವರ ಕಡೆ ಕುಳಿತುಕೊಂಡಿದ್ದಾರೆ. ಈ ದೇಶದಲ್ಲಿ ಯಾವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಕಳ್ಳತನ, ವ್ಯಭಿಚಾರ, ಜೂಜಾಡುವುದು ಕಾನೂನು ಬಾಹಿರವೆಂದು ತಿಳಿದಿದ್ದರೂ ಇವೆಲ್ಲವನ್ನು ಒಮ್ಮೆಲೇ ತಪ್ಪಿಸುವುದಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ನಾನು ಹೇಳುವುದಾದರೂ ಇಷ್ಟೆ, ಎಷ್ಟೇ ಕಷ್ಟವಾದರೂ ಪಾನನಿರೋಧವನ್ನು ಜಾರಿಗೆ ತಂದು ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಸುಖವಾಗಿ ಬಾಳುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI N. B. SIRDESAI (Khanapur).—Madam Chairman, I oppose the Budget Estimate for 1978-79 on account of the un-democratic and un-constitutional policy adopted by the State Government. And Because of the in-equality shown in matters relating to employment and distribution of public funds without taking into consideration

the genuine needs of border areas and under-developed areas in the State. I appose this Budget. Sir, with due respect to the Hon. Minister for Finance, I submit that the budget speech delivered by him appears to be traditional one and I am sure that it will not fulfil the long cherished aspiration and expectation of the common people in particular and all other people in general. Government are spending huge amount; but they are not getting good results. Government must find out the reasons why they are getting poor results. I am levelling these charges against the Government on the basis of facts and concrete instances which I am going to substantiate in the course of my speech. As an introduction to my speech or my earliear statements, I would like to place before this august House the undemocratic and unconstitutional policies that are being adopted by this Government.

In the preamble of the Indian Constitution it is stated that the Sovereign Democratic Republic of India is constituted to secure justice, opportunity and equality to all citizens of India. That means, social, economic and political justice and equality of status and opportunity for employment has to be secured to all citizens. Unfortunately, I would like to bring to the notice of the Government that this Government has not done any justice to the people of border areas. Since last 2 years we have been struggling hard for the merger of our areas with Maharashtra and for our legitimate right for seeking employment and to get equal distribution of funds to our areas.

This Government cannot make any law which takes away or a bridges the fundamental rights. But this Government is passing orders in contravention of the provisions of the Constitution.

As per article 16(1) of the Constitution there shall be equality of opportunity for all citizens in matters relating to employment or appointment to any office under the State. But this right also is denied to the Marathi people in border areas. Then, regarding the Public Service Commission, I wish to say something. Public Service Commission and all the recruitment committees have not done justice to the Marathi people. Even 1 per cent of our people have not been recruited in the border areas. This is done on the lame excuse that our people do not know Kannada. It might be because we are agitating for merger of these areas with Maharashtra. This Government had declared that for the purposes of recruitment, knowledge of Kannada should not be the creterion but it is going back on its own orders.

Then regarding the linguistic and cultural rights, the Indian Constitution has guaranteed protection of interests of minorities. As per article 29(1) of the Constitution, any section of the citizens residing in the territory of India or any part thereof having a distinct ladguage, script or culture of its own shall have the right to conserve the same. I want to ask this Government what right this Government has got to impose Kannada language in the Marathi Primary Schools against the wishes of the people.

SMT. S. PRAMILA.—It is not against their wishes.

SRI N. B. SIRDESAI.—It is my personal opinion. You may differ from me. Text-books for the Primary Schools are not available. When I went to purchase the English copy of M.C.S.R. it was not available since the last two months copies are not available Government is not providing funds for the printing of these books, I am told. So, I request the Government to furnish copies of M.C.S.R. as early as possible.

Under article 38 of the Constitution of India, it is stated that the State shall strive to promote the welfare of the people by securing and protecting as effectively as it may a social order in which justice,-social, economic and political,—is given. I want to ask the Government how it is possible to secure such a social order by ignoring the rights of Marathi people and by keeping the border dispute pending for such a long period. It is an accepted fact that we are fighting for its settlement.

SRI S. M. YAHYA.—Article 38 is an article on directive principles. So far as Karnataka is concerned, the minorities are not merely protected but also they are given all the facilities. The people of Karnataka are certainly very tolerant and more protection is given to their languages, and institutions than in any other State. Facilities given to linguistic minorities is something commendable.

SRI N. B. SIRDESAI.—It is there only on paper and not in reality.

As regards organisation of Village Panchayats, as per article 40 of the Constitution of India, the State shall take steps to organise village panchayats and endow them with such powers and authority as may be necessary to enable them to function as units of self-government. While organising the village panchayats, Government should not organise them as per their whims and fancies. They must take into consideration the language difficulty, the distance difficulty and all other difficulties prevailing there. They should be recognised on a

proper basis giving due regard to the people's wishes in consultation with the Taiuk Development Boards and the villagers.

Then, coming to the tragic History of leasing of the Revenue waste lands. In my taluka lands were leased out some 40-50 years back. Since then they are in actual possession of the grantees. They are occupying them Agreements, Bonds or Kabulayats were executed by the occupants but the agreement bonds were not presented to the Tahsildar with the result that these people have been treated as unauthorised cultivations and their lands have been confiscated to the Government. For no fault on theirs, their lands have been taken over by the Government. So. I appeal to the Government that the official responsible for this tragedy must be punished severely and action taken against them and justice done to the grantees. The lands should be restored to the original grantees.

It is commendable that this Government has promulgated an Ordinance for the restoration of the hereditary Inam lands to the Government and afterwards I read in the newspapers that the Government is going to the release those lands to the original holders. Unless the Government put restrains on the re-sale the purpose of the Government will not be served at all, because the lands will again be disposed off. I hope the Government would take action in this regard.

4-30 P.M.

As regards rehabilitation schemes, I would like to say that there are three places in my taluka—Rama Nagar near Londa, Ashoka Nagar and Prabhu Nagar on the way to Belgaum-Khanapur road. Some displaced families have been rehabilitated but they have not been provided with all amenities. They have not been provided with electricity. Drinking water wells are not provided, Proper roads are not provided and lift irrigation schemes are feasible at Ashoka Nagar and Ramnagar but the Government is not considering the question of undertaking lift irrigation schemes in those places and thus providing them sufficient water supply for irrigation purpose.

SRI S. M. YAHYA.—It is just coming. The Government is spending lakhs of rupees. In Ramnagar, we built up roads schools, panchayat halls, dispensaries etc., and we have also provided parks. So, it is just coming. Certainly we will give all those facilities to those who come from Supa and other submerged areas and stay there.

SRI N. B. SIRDESAI.—These amenities have not been provided to Ashoka Nagar and Prabhu Nagar. Then Sir this Government is collecting huge revenue and taxes from our border area people but they are adopting uneven and unequal distribution of funds I request that equal distribution of funds to all places should be made. Shahaji Maharaj, the father of the Shivaji Maharaj the Great ruled over your area but he never illtreated the Kannadigas. He was impartial in his administration but you are not impartial; you are not giving good treatment to the Marathi speaking people.

As regards implementation of various schemes and policies, the Government is entirely depending upon the Government machinery i.e. the administrative staff but unfortunately, the administrative staff or the bureaucratic set up is not rising to the occasion. They are keeping all the matters pending for months together and for years together. Even at the Secretariat level, there is delay. It is only when the Ministers just asks them to expedite the matter, they take action and the pending matters are expedited but till then they are not taking action to expedite the matters, with the result people have to suffer. I would therefore request the Government to reform the administration in this State.

As regards developmental side, I would like to say that in my taluka, out of 256 villages, 222 villages are populated villages and in reply to my L.A, question on 16-3-1977, the Government have admitted that out of 222 villages, only 67 villages have got all-weather roads and 75 villages have got kachha roads *i.e.*, unmetalled roads which gets muddy during the rainy season and those villages become inaccessible during rainy season on account of heavy rains, In my taluka, 78 villages have no roads at all. Even after 30 years of independence and after 22 years rule by this Government in this State, the people of my taluka and other border area taluks have been suffering in this way. I therefore ask this Government. What right have they got to rule over the disputed border area? Why should they not transfer those areas to Maharashtra and be generous-minded?

ಶ್ರೀ ಪಿ. ರಾಮದೇವ್.— ನಾವು ಹೇಳುತ್ತಾ ಇರುವುದು ಮಹಾಜನ್ ವರದಿ ಏನಿದೆ ಅದನ್ನು ಜಾರಿಗೆ ತರುವುದಕ್ಕೆ ಸಹಾಯ ಮಾಡಿ ಎಂದು. ಅದನ್ನು ಎರಡೂ ಸರ್ಕಾರ ಸೇರಿ ಮಾಡಿರುವುದು. ಮಹಾಜನ್ ವರದಿಯನ್ನು ಬೇಗ ಜಾರಿಗೆ ತಂದರೆ ಯಾವ ತೊಂದರೆಯೂ ಆಗುವುದಿಲ್ಲ. ಆಗ ಯಾವುದೆ ಸಮಸ್ಯೆಗಳು ಉದ್ಭವಿಸುವುದಿಲ್ಲ.

ಶ್ರೀ ಐ. ಪಿ. ಡಿ. ಸಾಲಪ್ಪ.— ಈಗ ಇಲ್ಲಿ ಮಹಾರಾಷ್ಟ್ರದ ವಿಷಯ ಪ್ರಸ್ತಾಪ ಮಾಡುವುದು ಬೇಡ

SRI N. B. SIRDESAI.—Over 100 villages in my taluka have no drinking water facilities at all. One rig machine was sent but I don't know where it is now. It has been removed and probably it must be

functioning in the constituency of some minister. Then Sir, financial assistance is being given to the grantees of the surplus land in my taluka. For purchasing the seeds and for improving the land, the grantees have been given some financial assistance but the thing is that all have not received it So, they wanted to come in procession or stage a dharana before the Hon. Minister to get their grievances redressed. I therefore request the Government to release sufficient amount so that the Deputy Commissioners and the Tahsildars make payment to them and see that their lands are developed.

In the budget speech, the Hon. Minister for Finance has stated that they have also started a scheme for providing stipendiary employment to unemployed graduates and diploma holders. But all the graduates who are in my taluka have not received this benefit. I request the Government to see that all graduates who are unemploye get this benefit. If that is not done, then it is only a slogan of the Government without any result.

As regards industrialisation. I would like to say that nowhere in the budget speech specific mention has been made about establishing industries or bringing about industrialisation. Ample raw material is available in Khanapur Taluka. So many industries could be started in that place. But the Government have not paid attention towards industrialisation of my taluka. If you don't start industries, then how can it be possible to solve the unemployment problem?

As regards land reforms, I would like to say that P.L.D. Bank is advancing loans to the extent of only Rs. 2000 to the tenants and they are asked to credit the balance of the amount which is highly impossible for the tenants to do it. So, I would request the Government to issue orders to accept the premium amount by instalments as there is provision for the same in the Act itself.

In spite of our repeated request to the Government since last 15 years, Government is not prepared to construct Barrages on the River and nalas and fortunately in Khanapur Taluk, there are 6 perinial rivers and about ten perinial nalas, And because Barrages are not constructed, the irrigation facilities are dot available and after the monsoon is over there will be acute scarcity for drinking water. Therefore; I urge upon the Government to construct as many Barrages as possible in our area,

About the electrification, in my taluk the pace is very very slow. In the beginningthe ElectricityBoard Officials said that the aluminium conductors were not available. Thereafter conductors were supplied when we requested the SE, and Chairman of the Karnataka Electricity

Board. After this they putforth their difficulties regarding non-availability of bolts and nuts. So, if this were to be the progress, how could the Government can go ahead with the programme that every village in the State should be electrified.

As regards construction of roads by the P.W.D. no progress has been made with regard to roads in my Taluka. There are no good roads and all of them are in a damage condition. Because of this, the KSRTC are not plying their buses and people of this area are put to great hardship. Therefore, I request the Goveramment to issue instructions to P.W.D. to construct new roads and also to repair the roads which are damaged and also to ask the KSRTC to run buses in our Taluk and thus help the public. Regarding KSRTC I would like to say few points Out of 18 divisions of KSRTC, Belgaum Division is first in giving highest reveue. But Belgaum Division has not been supplied with suffieient buses and some of the buses have gone out of order. Thus greater hardship has been caused to travelling public in Belgaum area

Regarding Forest I would like to say that Forest Department is not granting forest revenue to the Taluk. I have no grudge against the Government about giving relief to North Kanara. Even our Taluka is giving higher revenue to Government then why this discrimination Formerly we used to get about two percent of forest revenue. But now this Government has stopped. I do not know why? Any way, I request the Government to release the forest grant to our Taluk also as it is being released to North Kanara.

As regards Police, I have given a Call Attention Notice. But that has not been put in the business list so far. Some Trible people known as Berads In Belgaum taluka are stealing the cattle in night times. Because of this the poor cultivators are deprived of their cattle which they own for cultivation. Such incidents are going on with the connivance of the police. I would like to ask the Government what action has been taken against the Police for not detecting such cases. This trade is going on since long. A part from this there is illicit dis ilation also. Police have not taken any action against them. Therefore, I urge upon the Government to take suitable action againet the police and put a stop to stealing of cattle.

Then, as regards Public Health ... this is most important. SMPs and AMPs, doctors who have rendered services in remote villages have been served with the termination notice. It is really, injustice has been done to them, unless Government opens state Type Health Unit Hospitals in these areas, the services of these doctors should not be discontinued. Therefore I request the Government issue necessary

instructions in this regard. I would also suggest to the Government that MBBS Graduates may be asked to serve in the villages for a period of 3 years before they are allowed to practice in urban areas.

Madam, I would like to request the Government to start agro based industries in Khanapur taluk and all over the State which may provide people employment and solve the unemployment problem in the State.

As regards Education I bring to the notice of the Government that text books are not available at all in time, Therefore they must be got printed immediately. The Kannada copy of KCSR is available but not the English. So the English copy of KCSR must be got printed and supplied to needy people of this area. I request the Government to liberalise the rules to start high schools and extend educational facilities to the maland people in Belgaum District.

With these words I conclude and thank the Madam Chairman.

† ಶ್ರೀ ಎ. ರಾಮಚಂದ್ರ (ಸೂಳ್ಯ).— ಮಾನ್ಯ ಅಧ್ಯಕ್ಷಣಿಯವರೆ, ಈ ಬಡ್ಜೆಟ್‌ನ್ನು ನಾನು ಸ್ವಾಗತಿಸುವುದಿಲ್ಲವಾದರೂ ಇದರ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪಮಾಡಲಿಕ್ಕೆ ಇಚ್ಛೆಪಡುತ್ತೇನೆ. ನಾನು ಸೂಳ್ಯ ತಾಲ್ಲೂಕಿನಿಂದ ಆರಿಸಿಬಂದಿದ್ದೇನೆ. ನಮ್ಮ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೂಳ್ಯ ತಾಲ್ಲೋಕು ಬಹಳ ಹಿಂದುಳಿದ ತಾಲ್ಲೋಕು. ಬಹುಶಃ ಹೇಳುವುದಾದರೆ ಇಡೀ ರಾಜ್ಯದಲ್ಲಿ ಬೇರೆ ಯಾವ ತಾಲ್ಲೂಕು ಇಷ್ಟು ಹಿಂದುಳಿದಿರಲಿಕ್ಕೆ ಇಲ್ಲ. ಅದು ಮಲೆನಾಡು ಏರಿಯಾ ಹೆಚ್ಚಾಗಿ ಹರಿಜನಗಿರಿಜನರೇ ಇರುವಂತಹ ಒಂದು ತಾಲ್ಲೂಕು. ಆ ಊರಿನಲ್ಲಿ ನೋಡಿದರೆ, ಅಲ್ಲಿನ ಸಾಧಾರಣವಾದ ರಸ್ತೆಗಳಲ್ಲಿ ಸಹ ಜನರು ಓಡಾಡಲು ಹಾಗೂ ಗಾಡಿಗಳು ಓಡಾಡಲು ತೊಂದರೆ ಆಗುವಂತಹ ಸ್ಥಿತಿಯಲ್ಲಿವೆ. ಇದನ್ನು ನೋಡಿದರೆ ಈ ತಾಲ್ಲೂಕು ಎಷ್ಟು ಹಿಂದುಳಿದಿದೆಯೆಂದು ಊಹಿಸಿಕೊಳ್ಳಲು ಸಾಧ್ಯ.

ಏತಕ್ಕೆ ಈ ರೀತಿ ಮಾಡುತ್ತಿದ್ದಾರೋ ನನಗೆ ಅರ್ಥವಾಗುವುದಿಲ್ಲ. ಬಹುಶಃ ನನಗೆ ಏನು ಅನಿಸುತ್ತದೆ ಎಂದರೆ ಈ ಕ್ಷೇತ್ರ ೧೯೫೭ನೇ ಇಸವಿಯಿಂದಲೂ ಕೂಡ ಹರಿಜನ ಮತ್ತು ಗಿರಿಜನರಿಗೆ ಕಾದಿರಿಸಿರುವ ಕ್ಷೇತ್ರವಾಗಿರುವುದರಿಂದ ಆ ಊರಿಗೆ ಯಾವ ಸವಲತ್ತುಗಳನ್ನೂ ಸಹ ಕೊಡಬಾರದು ಎನ್ನುವ ಮನವರಿಕೆಯಾಗಿದೆಯೋ ಏನೋ ಎಂದು ನನಗೆ ಅನಿಸುತ್ತದೆ. ತಾವು ಆ ಊರು ನೋಡಿದರೆ ಗೊತ್ತಾಗುತ್ತದೆ. ಆ ಊರಿನ ಪರಿಸ್ಥಿತಿ, ಆ ಜನರ ಪರಿಸ್ಥಿತಿ ನಿಜವಾಗಿ ನೋಡಿದರೆ ಯಾರಿಗಾದರೂ ಕೂಡ ಕಣ್ಣೀರು ಬರುವಂಥಾ ಪರಿಸ್ಥಿತಿ ಬರುತ್ತದೆ. ಆ ಊರಿನ ಜನರು ಒಂದು ಮಜೂರಿ ಬಗ್ಗೆ ಹೇಳಬೇಕಾದರೆ ಆ ಬಡಜನರಿಗೆ ದಿನಕ್ಕೆ ಒಂದೂವರೆ ರೂಪಾಯಿ ಮಜೂರಿ ಸಹ ಸಿಗದೇ ಇರುವಂಥಾ ಪರಿಸ್ಥಿತಿ ಇದೆ. ನಮ್ಮ ಸರ್ಕಾರದವರು ಇವರ ಬಗ್ಗೆ ಏತಕ್ಕೆ ಕಣ್ಣೆತ್ತಿ ನೋಡುವುದಿಲ್ಲವೋ ಏತಕ್ಕೆ ಅವರ ಕಡೆ ಗಮನ ಕೊಟ್ಟಿಲ್ಲವೋ ನನಗೆ ಅರ್ಥವಾಗುವುದಿಲ್ಲ. ಈ ವಿಷಯಗಳನ್ನು ನಾನು ಹೇಳುವಾಗ ಸಂಬಂಧ ಪಟ್ಟ ಮಂತ್ರಿಗಳು ಇದ್ದಿದ್ದರೆ ಒಳ್ಳೆಯದಾಗುತ್ತಿತ್ತು. ಮೊದಲನೆಯದಾಗಿ ನಾನು ಹೇಳುವುದು ಏನೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ಮೊದಲೆ ಹೇಳಿದ ಹಾಗೆ ಮುಖ್ಯವಾದಂಥಾ ಎಲ್ಲಾ ಪೋರ್ಟ್ ಪೋಲಿಯೋಗಳನ್ನು ಮುಖ್ಯಮಂತ್ರಿಗಳು ಇಟ್ಟುಕೊಂಡಿರುವುದರಿಂದ ಯಾವ ಮಂತ್ರಿಗಳಿಗೂ ಕೂಡ ಸ್ವತಂತ್ರವಾಗಿ ಯಾವರೀತಿಯೂ ಕೆಲಸ ಮಾಡದೇ ಇದ್ದಹಾಗೆ ಇದೆ ಎನ್ನುವಂತೆ ಕಾಣುತ್ತದೆ. ಮುಖ್ಯಮಂತ್ರಿಗಳು ನಮ್ಮ ವಿಷಯಗಳನ್ನು ಕೇಳುವುದಕ್ಕೆ ಈ ಸದನದಲ್ಲಿ ಇರಬೇಕಾಗಿತ್ತು. ಅವರು ಇಲ್ಲದೇ ಇರುವುದರಿಂದ ನಾವು ಹೇಳಿದ ರಿಪೋರ್ಟ್ ಸರ್ಕಾರ ಜಾರಿಗೆ ತರುತ್ತದೆ ಅನ್ನುವ ಆಶ್ವಾಸನೆಯೂ ಕೂಡ ನನಗೆ ಕಾಣುತ್ತಾ ಇಲ್ಲ. ಮೊದಲು ಕೂಡ ಬೇಕಾದಷ್ಟು ಆಶ್ವಾಸನೆ ನೀಡಿದ್ದಾರೆ. ಆದರೆ ಅದು ರಿಕಾರ್ಡ್‌ನಲ್ಲಿ ಇರುತ್ತದೇ ವಿನಾ ಕಾರ್ಯರೂಪದಲ್ಲಿ ಬಂದಂತೆ ಇಲ್ಲ. ನಾನು ೧೯೬೭ನೇ ಇಸವಿಯಲ್ಲಿ ಇಲ್ಲಿಗೆ ಬಂದಾಗ ಇಂತಹ ಪ್ರಸ್ತಾವಗಳನ್ನು ಬೇಕಾದಷ್ಟು ಹೇಳಿದ್ದೇನೆ. ಆದರೆ ಇಷ್ಟರವರೆಗೂ ನೋಡಿದರೆ ಆ ಬಗ್ಗೆ

ಏನೂ ಮಾಡಿಲ್ಲಾ. ಆ ಊರಿನ ಒಂದು ಪರಿಸ್ಥಿತಿ ನೋಡಿದರೆ ಸರಿಯಾದ ಒಂದು ರಸ್ತೆ ಇಲ್ಲ. ಯಾವ ಒಂದು ಅಭಿವೃದ್ಧಿ ಕಾರ್ಯಕ್ರಮಗಳೂ ನಡೆದಿಲ್ಲ ಪಿ. ಡಬ್ಲ್ಯೂ. ಡಿ. ಮಂತ್ರಿಗಳಿಗೆ ಹೇಳಿದರೂ ಕೂಡ ಆ ಊರಿನಲ್ಲಿ ಯಾವುದೇ ಒಂದು ರಸ್ತೆಯನ್ನಾಗಲಿ, ಯಾವ ಒಂದು ಕಾಮಗಾರಿಯನ್ನಾಗಲಿ ಇದುವರೆಗೆ ಮಾಡಿಕೊಟ್ಟಿಲ್ಲ ನಮ್ಮ ಕಡೆ ಮಳೆಗಾಲದಲ್ಲಿ ಒಂದು ಹೊಳೆ ದಾಟಿ ಹೋಗಬೇಕಾದರೆ ಬಹಳ ಕಷ್ಟ. ತಮಗೆ ಒಂದು ಉದಾಹರಣೆ ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಮಾರಕುಂಜ ಅನ್ನುವ ಒಂದು ಊರು ಇದೆ. ಆ ಊರಿಗೆ ಯಾವ ವಿಧವಾದಂಥಾ ರಸ್ತೆ ಮತ್ತು ಬ್ರಿಡ್ಜ್ ಸೌಕರ್ಯಗಳೂ ಇಲ್ಲ. ಈ ಬಗ್ಗೆ ಮನವಿಗಳನ್ನು ಪಂಚಾಯಿತಿಯವರು. ತಾಲ್ಲೂಕು ಬೋರ್ಡ್‌ನವರು ಕೊಟ್ಟಿದ್ದಾರೆ ಶಾಸಕನಾಗಿ ನಾನೂ ಕೂಡ ಕೊಟ್ಟಿದ್ದೇನೆ ಆದರ ಬಗ್ಗೆ ಸರ್ಕಾರದವರು ಏತಕ್ಕೆ ನಿರ್ಲಕ್ಷ್ಯ ಮಾಡುತ್ತಿದ್ದಾರೋ ನನಗೆ ಅರ್ಥ ವಾಗುವುದಿಲ್ಲ. ಸರ್ಕಾರದ ನೀತಿ ನೋಡಿದರೆ, ನನ್ನ ಕ್ಷೇತ್ರದ ಹರಿಜನರಿಗೆ ಅನ್ಯಾಯ ಮಾಡುತ್ತಾ ಇರುವುದನ್ನು ನೋಡಿದರೆ ಇದು ಹರಿಜನರಿಗೆ ಮೀಸಲಾಗಿಟ್ಟಿರುವ ಕ್ಷೇತ್ರವಾದ್ದರಿಂದ ಈ ಕ್ಷೇತ್ರವನ್ನು ಯಾವರೀತಿಯಾಗಿಯೂ ಅಭಿವೃದ್ಧಿ ಮಾಡುವುದು ಬೇಡ ಎಂದು ಸರ್ಕಾರಕ್ಕೇನಾದರೂ ಮನಸ್ಸು ಇದೆಯೋ ಏನೋ ನನಗೆ ಗೊತ್ತಾಗುವುದಿಲ್ಲ. ನಮ್ಮ ಮಂತ್ರಿಗಳ ಅಥವಾ ಸರ್ಕಾರದವರ ದಿನನಿತ್ಯದ ಹೇಳಿಕೆಗಳನ್ನು ನೋಡಿದರೆ, ಮತ್ತು ರೇಡಿಯೋದಲ್ಲಿ ಪ್ರಸಾರವಾಗುತ್ತಾ ಇರುವುದನ್ನು ನೋಡಿದರೆ ಈ ಹರಿಜನರನ್ನು ಸರ್ಕಾರ ಯಾವರೀತಿ ಲಕ್ಷ್ಯದಲ್ಲಿಟ್ಟು ಕೊಂಡಿದೆ ಎಂದರೆ ಅವರನ್ನು ಸ್ವರ್ಗಕ್ಕೆ ಏರಿಸಿದಂತೆ ಸೃಷ್ಟಿಸಿದ್ದಾರೇ ವಿನಾ ವಾಸ್ತವವಾಗಿ ನೋಡಿದರೆ ಅವರ ಒಂದು ವಿದಧಲ್ಲಿ ಕೂಡ ಒಳ್ಳೆ ಕೆಲಸ ವಾಗಲಿಲ್ಲ. ಓಟಿಗಾಗಿ ಇಷ್ಟೊಂದು ಪ್ರಚಾರ ನಡೆಯುತ್ತಾ ಇದೆಯೇ ವಿನಾ ಅವರ ಬಗ್ಗೆ ಸರಿಯಾದ ಲಕ್ಷ್ಯ ಕೊಟ್ಟಿಲ್ಲ ಎಂದು ಹೇಳುತ್ತೇನೆ. ನಾನು ೧೯೬೭ನೇ ಇಸವಿಯಿಂದಲೂ ಬಡ್ಜೆಟ್ ಅಧಿವೇಶನದಲ್ಲಿ ಹೇಳುತ್ತಲೇ ಬಂದಿದ್ದೇನೆ. ಹರಿಜನರು ಇವರಿಗೆ ಓಟ್ಟು ಕೊಟ್ಟರೇನೆ ಇವರು ಖಂಡಿತವಾಗಿ ಇಲ್ಲಿಗೆ ಆರಿಸಿ ಬರುವುದು, ಇಲ್ಲದೇ ಹೋದರೆ ಇವರು ಇಲ್ಲಿಗೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಮಾತನ್ನು ನಾನು ಅಂದೂ ಹೇಳಿದ್ದೇನೆ, ಈಪೊತ್ತೂ ಕೂಡ ಹೇಳುತ್ತಾ ಇದ್ದೇನೆ.

ಒಬ್ಬ ಸದಸ್ಯರು. — ಹರಿಜನರು ನಮಗೆ ಏತಕ್ಕೆ ಓಟು ಕೊಟ್ಟರು ಎಂದು ತಮಗೆ ಗೊತ್ತಿದೆಯೋ? ಏನೂ ಮಾಡಲಿಲ್ಲ ಎಂದು ಓಟು ಕೊಟ್ಟರೇ ?

ಶ್ರೀ ಎ. ರಾಮಚಂದ್ರ.— ನೀವು ಅವರಿಗೆ ಏನೂ ಮಾಡಲಿಲ್ಲವಾದರೂ ಮುಂದೆ ಏನಾದರೂ ನಮಗೆ ಮಾಡಿಯಾರು ಎನ್ನುವ ಭರವಸೆಯಿಂದ ಹರಿಜನರು ನಿಮಗೆ ಈ ಸಲ ಓಟು ಕೊಟ್ಟಿದ್ದಾರೆ. ೩೦ ವರ್ಷದಿಂದಲೂ ಸಹ ಹರಿಜನರಿಗೆ ಏನೂ ಮಾಡಿಕೊಟ್ಟಿಲ್ಲ ಬಹಳ ಅನ್ಯಾಯವಾಗಿದೆ. ಆ ಶಾಪ, ಆ ದೋಷ ನಿಮ್ಮ ಮೇಲೆ ಇದ್ದೇ ಇದೆ ಎಂದೂ ಹೋಗಲಿಕ್ಕಿಲ್ಲ. ಈಗಲಾದರೂ ಅವರಿಗೆ ನ್ಯಾಯ ದೊರಕಿಸಿ ಕೊಡಿ ಎಂದು ಹೇಳುತ್ತೇನೆ.

ಶ್ರೀ ಕೆ. ಭಾಸ್ಕರನಾಯಿಡು.— ಅವರಿಗೆ ಬಹಳ ವರ್ಷಗಳಿಂದಲೂ ಅನ್ಯಾಯ ವಾದದ್ದಕ್ಕೇನೇ ಮೊದಲೇ ಕ್ಯಾಬಿನೆಟ್‌ನಲ್ಲೇ ತೀರ್ಮಾನ ಮಾಡಿ ೧೮ ಪರ್ಸೆಂಟ್ ಕೊಟ್ಟೇ ಕೊಡಬೇಕು ಎಂದು ಈ ಸರ್ಕಾರ ಬಂದ ತಕ್ಷಣ ಮಾಡಿದರು ಎಂದು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎ. ರಾಮಚಂದ್ರ.— ನೀವು ೧೮ ಪರ್ಸೆಂಟ್ ಅಂತ ಮಾಡಿರಬಹುದು ೫೦ ಪರ್ಸೆಂಟ್ ಬೇಕಾದರೂ ಮಾಡಬಹುದು, ಎಷ್ಟು ಪರ್ಸೆಂಟ್ ಬೇಕಾದರೂ ಮಾಡಬಹುದು. ಆದರೆ ಅದು ಬರೀ ಕಾಗದ ದಲ್ಲಿ ಇರುತ್ತದೇ ವಿನಾ ಅವರಿಗೆ ಯಾವ ವಿಧವಾದ ಪ್ರಯೋಜನವೂ ಆಗುತ್ತಾ ಇಲ್ಲ. ಅವರಿಗೆ ಯಾವ ಪ್ರಯೋಜನವೂ ಸಿಕ್ಕುತ್ತಾ ಇಲ್ಲ, ಹಾಗಾದರೆ ನಿಮಗೆ ನಾನು ಒಂದು ಪ್ರಶ್ನೆ ಕೇಳುತ್ತೇನೆ ಹೇಳಿ. ಪ್ರತಿ ಯೊಂದು ಇಲಾಖೆಯಲ್ಲೂ ಅಂಕಿಅಂಶಗಳನ್ನು ತೆಗೆದುನೋಡಿ. ಯಾವ ಯಾವ ಇಲಾಖೆಯಲ್ಲಿ ನೀವು ಹೇಳಿದಂತೆ ೧೮ ಪರ್ಸೆಂಟ್‌ನಂತೆ ಸರ್ಕಾರಿ ನೌಕರಿ ಕೊಟ್ಟಿದ್ದಾರೆ ಅನ್ನುವುದನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ. ಯಾವ ಇಲಾಖೆಯಲ್ಲಿ ಇವರಿಗೆ ಸಿಗಬೇಕಾದಂಥಾ ೧೮ ಪರ್ಸೆಂಟ್ ರಿಸರ್ವೇಷನ್ ಉದ್ಯೋಗ ದೊರಕಿಸಿ ಕೊಟ್ಟಿದ್ದಾರೆ ಅನ್ನುವುದನ್ನು ಸ್ಪಷ್ಟವಾಗಿ ಹೇಳಲಿ. ಬೇರೆ ಇನ್ನೇನೂ ಹೇಳ ಬೇಕಾಗಿಲ್ಲಾ. ಈ ಬಗ್ಗೆ ನಾನು ಒಂದು ಇದರ ಲೆಕ್ಕಾಚಾರ ಕೊಡಿ ಎಂದು ಕೇಳಿದಾಗ ಏನು ಉತ್ತರ ಕೊಟ್ಟರು ಎಂದರೆ ೨ ಪರ್ಸೆಂಟ್ ೩ ಪರ್ಸೆಂಟ್ ೪ ಪರ್ಸೆಂಟ್ ಕೊಟ್ಟಿದ್ದೇವೆ ಅನ್ನುವ ಉತ್ತರ ಸರ್ಕಾರ ದಿಂದ ಬಂದಿದೆ. ಈ ಹರಿಜನರ ಕತೆ ಹೇಳಿದರೆ ಇನ್ನೂ ಬೇಕಾದಷ್ಟು ಇವೆ. ಅದನ್ನು ಹೇಳಿದರೆ ಈ ಸದನ ನಗುತ್ತೆ, ಅಷ್ಟೆ. ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ: ಅವರಿಗೆ ಎಷ್ಟು ಮೋಸ

ಮಾಡಿದ್ದಾರೆ, ಇವರು ಅಧಿಕಾರಕ್ಕೆ ಬಂದಮೇಲೆ ಏನೇನು ಮಾಡಿದ್ದಾರೆ ಎಂದು ಎಲ್ಲಾ ವಿಷಯಗಳನ್ನೂ ಬೇಕಾದರೆ ಹೇಳುತ್ತೇನೆ ಆದರೆ ಅದನ್ನೆಲ್ಲಾ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುವುದಿಲ್ಲ.

ಇನ್ನೊಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇನೆಂದರೆ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಡಿ. ದೇವರಾಜ್ ಅರಸ್‌ರವರು ಏನು ಹೇಳಿದ್ದಾರೆ ಎಂದರೆ ನಮ್ಮ ಕರ್ನಾಟಕ ರಾಜ್ಯದಲಿರುವ ಹರಿಜನರಿಗೆ ಬೇಕಾದಷ್ಟು ಸವಲತ್ತುಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ನಾನು ಹೇಳುತ್ತೇನೆ ಅವರಿಗೆ ಯಾವ ಸವಲತ್ತುಗಳನ್ನೂ ಕೊಟ್ಟಿಲ್ಲ ಎಂದು. ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳುತ್ತೇನೆ. ನೀವು ಅವರಿಗೆ ಯಾವ ಸವಲತ್ತುಗಳನ್ನೂ ಕೊಡುವುದು ಬೇಡ ಒಂದೇ ಒಂದು ಸವಲತ್ತುಗಳನ್ನಾದರೂ ಕೊಡುತ್ತೀರಾ ಎಂದು ಕೇಳುತ್ತೇನೆ. ನೀವು ಆ ಸವಲತ್ತನ್ನು ಕೊಟ್ಟರೆ ಬಹಳ ದೊಡ್ಡ ಉಪಕಾರ ಮಾಡಿಕೊಟ್ಟಂತಾಗುತ್ತದೆ. ಅದೇನೆಂದರೆ ಪಾನನಿಷೇಧವನ್ನು ಸಂಪೂರ್ಣವಾಗಿ ಜಾರಿಗೆ ತನ್ನಿ ಎಂದು ಕೇಳಿಕೊಳ್ಳುತ್ತೇನೆ.

ಒಬ್ಬ ಸದಸ್ಯರು.— ಮಾನ್ಯ ಶ್ರೀ ಮೊರಾರ್ಜಿದೇಸಾಯಿಯವರು ಈ ಕೆಲಸವನ್ನು ಮಾಡುತ್ತೇವೆಂದು ಹೇಳಿದ್ದಾರಲ್ಲಾ.

ಶ್ರೀ ಎ. ರಾಮಚಂದ್ರ.— ಶ್ರೀಮಾನ್ ಮೊರಾರ್ಜಿದೇಸಾಯಿಯವರು ಖಂಡಿತವಾಗಿ ಇದನ್ನು ಮಾಡಿಯೇ ಮಾಡುತ್ತಾರೆ. ಆ ಮಾತು ಬೇಕಾಗಿಲ್ಲ. ಈ ರಾಜ್ಯದಲ್ಲಿ ನೀವು ಮೊದಲು ಮಾಡಿ ನೀವು ಕಾಂಗ್ರೆಸ್ ಪಕ್ಷದವರು ನೀವು ಗಾಂಧೀಜಿ ತತ್ವದ ಮೇಲೆ ಅಭಿಮಾನ ಉಳ್ಳಂಥವರು ಮೊದಲು ನೀವು ಇದನ್ನು ಜಾರಿಗೆ ತನ್ನಿ. ನೋಡೋಣ.

ಇನ್ನು ಶ್ರೀಮಾನ್ ಯಾಹ್ಯಾರವರ ಬಗ್ಗೆ ಹೇಳಬೇಕಾದರೆ ನನಗೆ ಅವರ ಮೇಲೆ ತುಂಬಾ ಗೌರವ ಇದೆ. ಅವರು ಮೊದಲು ಕಾರ್ಮಿಕ ಮಂತ್ರಿಗಳಾಗಿದ್ದರು, ಅವರು ಒಂದು ಸಲ ನಮ್ಮ ಊರಿಗೆ ಬಂದಿದ್ದಾರೆ ಒಂದು ಅಪಾಯಿಂಟ್ ಮೆಂಟ್ ಬಗ್ಗೆ ಹೇಳಿದ್ದೆ. ಅವರು ಈ ದಿವಸ ನಾನು ಯಾವುದನ್ನು ಹೇಳಿದರೂ ಮಾಡುವುದಿಲ್ಲ ಎಂದು ಹೇಳುವುದಿಲ್ಲ. ಅವರಿಗೆ ಆ ಕೆಲಸವನ್ನು ಮಾಡುವ ಇಚ್ಛೆ ಇದೆ. ಅವರು ತುಂಬಾ ಒಳ್ಳೆಯ ವ್ಯಕ್ತಿ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಏತಕ್ಕೆಂದರೆ ಅವರಲ್ಲಿ ಅಂಥಾ ಒಂದು ಸೌಜನ್ಯತೆ ಇದೆ ಮತ್ತು ಅವರಲ್ಲಿ ಮಾಡಬೇಕು ಅನ್ನುವ ಒಂದು ಅಭಿಲಾಷೆಯೂ ಕೂಡ ಇದೆ ಎಂದು ಹೇಳುತ್ತೇನೆ. ಅವರು ನಾನು ಈ ಮಾತನ್ನು ಗಿರಿಜನ ಕೊರ್ಮರ ಜಾತಿಯವರ ಬಗ್ಗೆ ಹೇಳಿದ್ದೆ ಅವರನ್ನು ಅವರು ಹೇಳಿದ ತಕ್ಷಣ ಒಪ್ಪಿಕೊಂಡರು ಇವರನ್ನು ಮಂತ್ರಿ ಮಂಡಲದಲ್ಲಿ ಕಾನೂನು ಮಾಡುತ್ತೇವೆಂದು ಹೇಳಿರುವರು. ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಮ್ಮ ನೆನಪಿಗೆ ತರಬೇಕಾಗುತ್ತದೆ. ಹರಿಜನ ಗಿರಿಜನರಲ್ಲಿ ಸ್ಪೃಶ್ಯರೂ ಇದ್ದಾರೆ ಅಸ್ಪೃಶ್ಯರೂ ಇದ್ದಾರೆ. ಇದರಲ್ಲಿ ಯಾರು ಅಸ್ಪೃಶ್ಯರು ಇದ್ದಾರೋ ಅವರಿಗೆ ಉದ್ಯೋಗ ಕೊಟ್ಟಿಲ್ಲಾ. ಅವರಿಗೆ ನಿಜವಾಗಿ ಉದ್ಯೋಗ ಕೊಡಬೇಕು. ಯಾವ ಯಾವ ಇಲಾಖೆಯಲ್ಲಿ ಅಸ್ಪೃಶ್ಯರಾದಂಥಾ ಜನರಿಗೆ ಎಷ್ಟೆಷ್ಟು ಉದ್ಯೋಗಗಳನ್ನು ಕೊಟ್ಟಿದ್ದಾರೆ ಅನ್ನುವುದನ್ನು ತಾವು ತರಿಸಿ ನೋಡಬೇಕು ಯಾರು ಅಸ್ಪೃಶ್ಯರಾಗಿದ್ದಾರೋ ಅಂಥಾ ಗಿರಿಜನರಿಗೆ ನೀವು ಒಂದು ಪರ್ಸೆಂಟ್ ಕೂಡಾ ಅಪಾಯಿಂಟ್ ಮೆಂಟ್ ಕೊಡಲಿಲ್ಲ. ಆ ಗಿರಿಜನರಿಗೆ ಬಹಳ ಅನ್ಯಾಯವಾಗಿದೆ. ಅವರಿಗೆ ಉದ್ಯೋಗ ಸಿಕ್ಕಿಲ್ಲಾ. ಈ ಬಗ್ಗೆ ಶ್ರೀಮಾನ್ ಯಾಹ್ಯಾರವರಲ್ಲಿ ಪ್ರಸ್ತಾಪ ಮಾಡಿದಾಗ ಅವರು ಒಪ್ಪಿಕೊಂಡಿದ್ದಾರೆ. ಆದರೆ ಅವರು ಅದನ್ನು ಜಾರಿ ಮಾಡಲಿಲ್ಲಾ. ಆದುದರಿಂದ ಮತ್ತೊಮ್ಮೆ ಈಗ ತಮ್ಮ ನೆನಪಿಗೆ ತಂದುಕೊಡುತ್ತೇನೆ. ಅವರಿಗೆ ಈ ಸಂದರ್ಭದಲ್ಲಿ ನಾನು ನೆನಪು ಮಾಡಿಕೊಟ್ಟರೆ ಮುಂದೆ ಅವರು ಇದನ್ನು ಜಾರಿ ಮಾಡಿಯಾರು ಅನ್ನುವ ಒಂದು ಧೈರ್ಯ ನನಗೆ ಇದೆ ಎಂದು ಹೇಳುತ್ತೇನೆ.

ಒಂದು ಕಡೆ ಹರಿಜನರ ಉದ್ಧಾರ ಮಾಡಬೇಕು, ಅವರಿಗೆ ಸವಲತ್ತುಗಳನ್ನು ಕೊಡಬೇಕು ಎಂದು ಹೇಳುತ್ತೀರಿ. ಇನ್ನೊಂದು ಕಡೆಯಲ್ಲಿ ಹರಿಜನರಲ್ಲವರನ್ನು ಹರಿಜನರ ಲಿಸ್ಟನಲ್ಲಿ ಸೇರಿಸಿದ್ದೀರಿ. ಇದನ್ನು ನೋಡಿದಾಗ ನಿಮಗೆ ಹರಿಜನರ ಮೇಲೆ ನಿಜವಾಗಿಯೂ ಕರುಣೆ ಇದೆಯೋ ಎಂದು ನೋಡಬೇಕಾಗುತ್ತದೆ. ಮಾನ್ಯ ಮಂತ್ರಿಗಳಾದ ಹಾವನೂರ್ ಅವರು ಸಭೆಯಲ್ಲಿರಬೇಕಾಗಿತ್ತು. ನಮ್ಮ ಕಡೆ ಕೋಟಿ ಪೇರಗಾರರು ಎಂಬ ಒಂದು ಜಾತಿಯವರು ಇದ್ದಾರೆ. ನಿಜವಾಗಿಯೂ ಇವರು ಬ್ರಾಹ್ಮಣರಂತೆ ಇದ್ದಾರೆ. ಬ್ರಹ್ಮ ಸೂತ್ರವನ್ನು ಹಾಕಿಕೊಂಡಿದ್ದಾರೆ. ಬ್ರಾಹ್ಮಣರಂತೆ ಆಚಾರ ವಿಚಾರ ಇವರಲ್ಲಿದೆ. ಇವರನ್ನೂ ಹರಿಜನರ ಲಿಸ್ಟಿನಲ್ಲಿ ಸೇರಿಸಿದ್ದಾರೆ. ಇದು ನೀವು ಹರಿಜನರಿಗೆ ಮಾಡುವ

ಉಪಕಾರವೇ. ಇಂಥ ವಿಷಯಗಳು ಅನೇಕ ಇವೆ, ಆದ್ದರಿಂದ ನಾನು ಹೇಳುತ್ತೇನೆ ಇನ್ನು ಮುಂದೆ ನೀವು ಚುನಾವಣೆಗೆ ಬನ್ನಿ, ಹರಿಜನರು ನಿಮಗೆ ವೋಟು ಕೊಡುತ್ತಾರೆಯೋ ನೋಡೋಣ. ಹರಿಜನರ ಲಿಸ್ಟಿಗೆ ಸವರ್ಣೀಯರನ್ನು ಸೇರಿಸಿದ್ದರ ಪರಿಣಾಮವಾಗಿ ಅನೇಕರು ಇದರ ಉಪಯೋಗವನ್ನು ಪಡೆದು ಕೊಂಡು ಅಪಾಯಿಂಟ್‌ಮೆಂಟ್‌ಗಳನ್ನು ತೆಗೆದುಕೊಂಡಿದ್ದಾರೆ.

೫-೦೦ ಪಿ. ಎಂ.

ಶ್ರೀ ಎಸ್. ಎಂ. ಯಾಹ್ಯಾ.—ಅದನ್ನು ಕೇಂದ್ರ ಸರ್ಕಾರದವರು ಮಾಡಿದ್ದು. ನಾವು ಮಾಡಿರುವುದು ಬ್ಯಾಕ್‌ವರ್ಡ್‌ಕ್ಲಾಸ್ ರಿಪೋರ್ಟ್ ಮಾತ್ರ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ಟೇಟ್ ಗವರ್ನ್‌ಮೆಂಟಿನವರ ರೆಕಮೆಂಡೇಷನ್ಸ್ ಮೇಲೆ ಸೆಂಟ್ರಲ್‌ನವರು ಮಾಡಿದ್ದಾರೆ.

ಶ್ರೀ ಎ. ರಾಮಚಂದ್ರ.—ಮಾನ್ಯ ಮಂತ್ರಿಗಳು ನಾನು ಹೇಳುವುದನ್ನು ಸ್ವಲ್ಪ ಅರ್ಥಮಾಡಿ ಕೊಳ್ಳಬೇಕು. ಇದರ ಬಗ್ಗೆ ನಾನು ಮಾನ್ಯ ಹಾವನೂರ್ ಅವರನ್ನು ಕೇಳಿದ್ದೇನೆ. ಅವರಿಗೂ ಇದು ಗೊತ್ತಾಗಲಿಲ್ಲ. ಸವರ್ಣೀಯರನ್ನು ಹಿಂದುಳಿದವರು ಎಂದು ಮಾಡಿದ್ದಾರೆ. ಅದನ್ನು ಕೇಂದ್ರ ಸರ್ಕಾರದವರು ಒಪ್ಪಿದ್ದಾರೆ ಇದು ನೀವು ಏಕೆ ಮಾಡಬೇಕು ? ಇದು ನಿಜವಾಗಿಯೂ ಅಸ್ಪೃಶ್ಯರ ಉದ್ಧಾರದ ಕೆಲಸವೇ ? ಮಹಾತ್ಮ ಗಾಂಧೀಜಿಯವರು ಹರಿಜನರನ್ನು ಇನ್ನು ಹತ್ತು ವರ್ಷದಲ್ಲಿ ಉದ್ಧಾರ ಮಾಡುತ್ತೇವೆಂದು ಹೇಳಿದ್ದರು. ಈ ದೇಶದಲ್ಲಿ ನೀವು ಮೂವತ್ತು ವರ್ಷಗಳವರೆಗೆ ರಾಜ್ಯಭಾರ ಮಾಡಿದ್ದೀರಿ. ಇನ್ನು ಹತ್ತು ವರ್ಷವಾದರೂ ಅವರ ಉದ್ಧಾರ ಆಗುವುದಿಲ್ಲ ಎನ್ನುವುದನ್ನು ನೀವೇ ಒಪ್ಪಿಕೊಳ್ಳುತ್ತೀರಿ. ಮತ್ತು ಅಸ್ಪೃಶ್ಯತೆ ಹೋಗಿಲ್ಲ ಎನ್ನುವುದನ್ನು ನೀವೇ ಒಪ್ಪಿಕೊಂಡಿದ್ದೀರಿ. ಆದರೂ ಹರಿಜನರು ನಿಮ್ಮ ಮೇಲೆ ವಿಶ್ವಾಸವಿಟ್ಟು ವೋಟು ಕೊಟ್ಟಿದ್ದಾರೆ. ಆದರೂ ಹರಿಜನರ ಉದ್ಧಾರ ಆಗಲಿಲ್ಲ, ಮತ್ತು ಅವರ ಅಸ್ಪೃಶ್ಯತೆ ಹೋಗಲಿಲ್ಲ. ಇದನ್ನೂ ನೀವು ಒಪ್ಪಿಕೊಂಡಿದ್ದೀರಿ. ಇನ್ನು ಮುಂದೆ ನೀವು ಚುನಾವಣೆಗೆ ಬನ್ನಿ ಅವರು ಏನು ಮಾಡುತ್ತಾರೆ ನೋಡೋಣ.

ಶ್ರೀ ಎಸ್. ಎಂ. ಯಾಹ್ಯಾ.—ಸುಳ್ಯದಲ್ಲಿ ನಿಮಗೆ ವೋಟು ಕೊಡುತ್ತಾರೆ.

ಶ್ರೀ ಎ. ರಾಮಚಂದ್ರ.—ಈ ಡಿ ಲಿಮಿಟೇಷನ್ ಕಮಿಟಿಯವರು ಏನು ಶಿಫಾರಸ್ ಮಾಡಿದ್ದಾರೆ ಎನ್ನುವುದರ ಬಗ್ಗೆ ಅವರ ಕಥೆಯನ್ನು ಸ್ವಲ್ಪ ಇಲ್ಲಿ ನಾನು ಹೇಳಬೇಕಾಗುತ್ತದೆ. ಸುಳ್ಯ ತಾಲ್ಲೂಕಿನಲ್ಲಿ ಬರೀ ೧೦ ಸಾವಿರ ಹರಿಜನರು ಇದ್ದಾರೆ. ಮಂಗಳೂರು ತಾಲ್ಲೂಕಿನಲ್ಲಿ ೨೫ ಸಾವಿರ ಹರಿಜನರು ಇದ್ದಾರೆ. ಹರಿಜನರು ಎಲ್ಲಿ ಜಾಸ್ತಿ ಇದ್ದಾರೆ ಅಲ್ಲಿ ಅಸೆಂಬ್ಲಿ ಸೀಟನ್ನು ರಿಸರ್ವ್ ಮಾಡಲಿಲ್ಲ, ಗುಡ್ಡಗಾಡು ಪ್ರದೇಶಕ್ಕೆ ಹೋಗಿ ಅಲ್ಲಿ ರಿಸರ್ವ್ ಸೀಟನ್ನು ಇಟ್ಟಿದ್ದಾರೆ. ೧೦ ಸಾವಿರ ಜನಸಂಖ್ಯೆ ಇರುವ ಗುಡ್ಡಗಾಡು ಪ್ರದೇಶವನ್ನು ರಿಸರ್ವ್ ಮಾಡಿ, ೨೫ ಸಾವಿರ ಜನಸಂಖ್ಯೆ ಇರುವ ಪ್ರದೇಶವನ್ನು ರಿಸರ್ವ್ ಮಾಡದೆ ಬಿಟ್ಟಿದ್ದಾರೆ. ೨೦ ಸಾವಿರ ಹರಿಜನರ ಇರತಕ್ಕ ಪುತ್ತೂರು. ೨೨ ಸಾವಿರ ಜನ ಹರಿಜನರು ಇರತಕ್ಕ ಕಾರ್ಕಳವನ್ನು ರಿಸರ್ವ್ ಮಾಡದೆ ಬಿಟ್ಟು ಬಿಟ್ಟಿದ್ದಾರೆ. ಪರ್ವತ ಪ್ರದೇಶಗಳಲ್ಲಿ ತೆಗೆದುಕೊಂಡು ಹೋಗಿ ಜನಸಂಖ್ಯೆ ಕಡಿಮೆ ಇರುವ ಕಡೆ ಇವರನ್ನು ಹರಿಜನರನ್ನು ಹಾಕಿದ್ದಾರೆ ಇದರಿಂದ ನಮ್ಮ ಸರ್ಕಾರ ಇವರಿಗೆ ಏನು ಮಾಡುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಈ ಕಾರಣಗಳಿಂದಾಗಿ ಹರಿಜನರ ಕ್ಷೇತ್ರ ಯಾವರೀತಿಯಿಂದಲೂ ಅಭಿವೃದ್ಧಿಯಾಗಲಿಲ್ಲ. ಅಲ್ಲಿ ತಾಲ್ಲೂಕು ಬೋರ್ಡಿನವರು ಏನೂ ಅಭಿವೃದ್ಧಿ ಕೆಲಸಗಳನ್ನು ಮಾಡಿಲ್ಲ. ಹರಿಜನರನ್ನು ಕೇಳುವ ಕೇಳುವವರು ಇಲ್ಲವಾಗಿದೆ.

ಇನ್ನು ಹರಿಜನರಿಗೆ ಹಾಸ್ಟಲುಗಳನ್ನು ಮಾಡಿದ್ದಾರೆ. ಅದರ ಕಥೆಯನ್ನು ನೋಡಿದರೆ ಅವರಿಗೆ ಸರಿಯಾದ ಆಹಾರವಿಲ್ಲ, ಅವರಿಗೆ ಮೊದಲು ೫೦ರೂಪಾಯಿಗಳ ಗ್ರಾಂಟನ್ನು ಪ್ರತಿಯೊಬ್ಬ ವಿದ್ಯಾರ್ಥಿಗೂ ಕೊಡುತ್ತಿದ್ದರು. ಈಗ ೧೦ ರೂಪಾಯಿಗಳನ್ನು ಕಟ್‌ಮಾಡಿ ಕೇವಲ ೪೦ ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದಾರೆ. ಇಲ್ಲಿಯೂ ಕೂಡ ಅವರಿಗೆ ಸರಿಯಾದ ಆಹಾರ ಸಿಕ್ಕಲಿಲ್ಲ. ನಾನು ಅಲ್ಲಿಗೆ ಹೋಗಿ ನೋಡಿದ್ದೇನೆ, ಅವರಿಗೆ ಎಣ್ಣೆ ಕೊಡುವುದಿಲ್ಲ. ಸೋಪು ಕೊಡುವುದಿಲ್ಲ. ಅವರುಗಳನ್ನು ಕುರಿಗಳ ಹಾಗೆ ನೋಡುತ್ತಿದ್ದಾರೆ. ಇದು ನಮ್ಮ ಸರ್ಕಾರದ ನೀತಿಯೋ ಎಂದು ನಾನು ತಮ್ಮನ್ನು ಕೇಳುತ್ತೇನೆ. ಈ ವಿಷಯಗಳ ಬಗೆ ಎಷ್ಟೋ ರಿಪೋರ್ಟ್‌ಗಳು ನಿಮಗೆ ಬಂದಿರಬೇಕು. ಹರಿಜನರ ಮೇಲೆ ನಿಮಗೆ ಇಷ್ಟು ತಾತ್ಸಾರ ಮನೋಭಾವನೆಯೇ ? ಇನ್ನಾದರೂ ಹರಿಜನರನ್ನು ನಿರ್ಲಕ್ಷ್ಯ ಮಾಡಬೇಡಿ.

ಅವರು ನಿಮಗೆ ವೋಟು ಕೊಡಲಿ ಬಿಡಲಿ ಆ ಪ್ರಶ್ನೆ ಬೇಡ. ನಿಮ್ಮ ಉದ್ದೇಶ ಏನು ? ದೇಶದ ಬಡವರು ಉದ್ಧಾರ ಆಗಬೇಕು ಎನ್ನುವುದು. ಒಂದುವೇಳೆ ಇದನ್ನು ನೀವು ಮಾಡದೆ ಇದ್ದರೆ ಭಗವಂತನು ನಿಮ್ಮನ್ನು ಮೆಚ್ಚಲಿಕ್ಕಿಲ್ಲ. ಈ ಬಗ್ಗೆ ಮಹಾತ್ಮ ಗಾಂಧಿಯವರು ಹೇಳಿದ ಮಾತನ್ನು ನೀವು ನೆನಪು ಮಾಡಿಕೊಳ್ಳಬೇಕು. ನೀವು ಈಗ ಅವರ ತತ್ವಗಳನ್ನು ಮರೆತು ಬಿಟ್ಟು ಅವರ ಹೆಸರನ್ನು ಮಾತ್ರ ಇಟ್ಟುಕೊಂಡಿದ್ದೀರಿ. ಇತ್ತೀಚೆಗೆ ಅವರ ಹೆಸರನ್ನು ಹೇಳುವ ಬದಲು ಇಂದಿರಾಗಾಂಧಿಯವರ ಹೆಸರಿನಿಂದ ತಿರುಗಾಡುತ್ತಿದ್ದೀರಿ. ಮಹಾತ್ಮ ಗಾಂಧಿಯವರ ತತ್ವಕ್ಕೆ ಬದಲಾಗಿ ಇಂದಿರಾಗಾಂಧಿಯವರು ಹೇಳುವ ಮಾತನ್ನು ಕೇಳುತ್ತಿದ್ದೀರಿ ಇಂದಿರಾಗಾಂಧಿಯವರು ಏನು ಹೇಳುತ್ತಾರೆ ಅದನ್ನು ನೀವು ಮಾಡುವುದು. ಆದರೆ ನಾನು ಹೇಳುತ್ತೇನೆ. ಮಹಾತ್ಮಾಗಾಂಧಿಯವರ ಫೋಟೋ ಇಲ್ಲದಿದ್ದರೆ ವೋಟು ಇಲ್ಲ. ಇದೇ ನಿಮಗೆ ಶಕ್ತಿ, ಎಂದು ತಿಳಿದುಕೊಂಡಿದ್ದೀರಿ.

ಶ್ರೀ ಕೆ. ಭಾಸ್ಕರ ನಾಯಿಡು.—ನಿಮಗೆ ಯಾವ ಫೋಟೋ ಇದೆ ?

ಶ್ರೀ ಎ. ರಾಮಚಂದ್ರ.—ನಮಗೆ ಫೋಟೋ ಬೇಡ, ನಮ್ಮ ಫೋಟೋ ಸಾಕು.

ಶ್ರೀ ಸಿ. ಎಂ. ಇಬ್ರಾಹಿಂ.—ನಾವು ಬಾಂಡೆಡ್ ಲೇಬರರ್ಸ್ ಅಲ್ಲ, ಫ್ರೀ ಬರ್ಡ್ಸ್.

ಶ್ರೀ ಎ. ರಾಮಚಂದ್ರ.—ಯಾರ ಮುಖಾಂತರವೂ ನಮಗೆ ವೋಟು ಬೇಕಿಲ್ಲ. ಯಾರ ಹೆಸರನ್ನು ನಾವು ಹೇಳುವುದೂ ಬೇಕಾಗಿಲ್ಲ. ನಮಗೆ ವ್ಯಕ್ತಿತ್ವ ಇದೆ, ಅದರಿಂದಲೇ ನಮಗೆ ವೋಟು ಬರಬೇಕೆ ಹೊರತು ಇನ್ನೊಬ್ಬರ ಮುಖಾಂತರ ವೋಟು ಬರುವಂಥ ಪರಿಸ್ಥಿತಿ ಇಲ್ಲ. ನಾವೂ ಮಹಾತ್ಮಗಾಂಧಿಯವರ ಹೆಸರನ್ನು ಹೇಳಬೇಕು, ಅವರ ತತ್ವಗಳನ್ನು ಅನುಷ್ಠಾನಕ್ಕೆ ತರಬೇಕು. ಅವರ ತತ್ವಗಳು ನಮಗೆ ನಮ್ಮ ದೇಶಕ್ಕೆ ಬೇಕು. ಇದನ್ನು ನಾವು ಹೇಳುತ್ತೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಸದಸ್ಯರು ಆರು ಜನರ ಫೋಟೋಗಳನ್ನು ಹಾಕಿಕೊಂಡಿದ್ದಾರೆ.

ಶ್ರೀ ಸಿ. ಎಂ. ಇಬ್ರಾಹಿಂ.—ನಮ್ಮದು ಸಾಮೂಹಿಕ ನಾಯಕತ್ವ, ನಮಗೆ ವ್ಯಕ್ತಿತ್ವ ಬೇಕು, ಫೋಟೋ ಅಲ್ಲ.

ಶ್ರೀ ಎ. ರಾಮಚಂದ್ರ. ನಾನು ಇನ್ನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಇನ್ನು ಅರಣ್ಯ ಇಲಾಖೆಯ ಬಗ್ಗೆ ಒಂದು ವಿಚಾರ ಹೇಳಬೇಕಾಗಿದೆ. ಅರಣ್ಯ ಇಲಾಖೆಯಲ್ಲಿ ಎಷ್ಟು ಜನ ಹರಿಜನರು ಹಿನೇ ದರ್ಜೆಯಲ್ಲಿ ಕೆಲಸ ಮಾಡುತ್ತಿದ್ದಾರೆಂಬುದನ್ನು ತಾವು ಹೇಳಬೇಕು. ಫಾರೆಸ್ಟರ ಅಥವಾ ರೇಂಜರ ಹುದ್ದೆಯಲ್ಲಿ ಹರಿಜನರು ಇದ್ದರೆ ಹೇಳಿ ? ಈ ಹುದ್ದೆಗಳನ್ನು ಕೊಡದಿರಲು ಕಾರಣವೇನು ? ವಾಚಮನ್ ಕೆಲಸ ಕೊಟ್ಟಿರಬಹುದು ; ಗಾರ್ಡ್ ಕೆಲಸ ಸಹ ಕೊಟ್ಟಿಲ್ಲ, ಈ ಗಾರ್ಡ್ ಕೆಲಸಕ್ಕೆ ಎಂಪ್ಲಾಯಮೆಂಟ್ ಎಕ್ಸ್‌ಛೇಂಜಿನಿಂದ ಹರಿಜನರ ಹೆಸರು ಹೋದರೂ ಸಹ ಕೆಲಸ ಕೊಡುವುದಿಲ್ಲ. ಬೇರೆಯವರಿಗೆ ಅಂದರೆ ದುಡ್ಡು ಕೊಟ್ಟವರಿಗೆ ಆ ಕೆಲಸ ಕೊಡುತ್ತಾರೆ. ಆದರೆ ಹರಿಜನರಿಗೆ ದುಡ್ಡು ಕೊಡುವ ಶಕ್ತಿ ಇಲ್ಲ. ಮುಖ್ಯವಾಗಿ ಈ ಹರಿಜನರಿಗೆ ವಿದ್ಯಾ ಇಲಾಖೆಯಲ್ಲಿ ಆಗುವಂತಹ ಅನ್ಯಾಯ ಬೇರೆ ಎಲ್ಲಿಯೂ ಆಗುವುದಿಲ್ಲ. ಈ ವಿದ್ಯಾ ಇಲಾಖೆಯಲ್ಲಿ ಹರಿಜನರಿಗೆ ನಾಮಕಾವಸ್ತೆಗೆ ಉದ್ಯೋಗ ಕೊಡುತ್ತೀರಿ. ಮೀಸಲು ಸ್ಥಾನಗಳನ್ನು ತುಂಬುವಾಗ ಇವರನ್ನು ಮಲೆನಾಡು ಪ್ರದೇಶಗಳು ಇಲ್ಲವೇ ಗುಡ್ಡಗಾಡು ಪ್ರದೇಶಗಳಿಗೆ ಅಂದರೆ ಸರಿಯಾಗಿ ನೀರೂ ಸಹ ಸಿಕ್ಕದಂಥ ಜಾಗಗಳಿಗೆ ಹಾಕುತ್ತೀರಿ. ವಿದ್ಯಾ ಸಚಿವರು ಈಗ ಇಲ್ಲಿ ಇಲ್ಲ. ಅವರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಹರಿಜನ ಉಪಾಧ್ಯಾಯರಿಗೆ ಬಹಳ ಅನ್ಯಾಯವಾಗುತ್ತಿದೆ. ಇವರಿಗೆ ಕೆಲಸ ಸಿಕ್ಕಿದರೂ ಸಹ, ಇವರು ಹೋದ ಕಡೆಗಳಲ್ಲಿ ಜಾತಿಭೇದದ ಕಾರಣ ವಾಸಕ್ಕೆ ಮನೆಗಳು ಸಿಕ್ಕದೆ, ನೀರು ಸಿಕ್ಕದೆ ಕೆಲಸಕ್ಕೆ ರಾಜೀನಾಮೆ ಕೊಡುತ್ತಿದ್ದಾರೆ ಅಸ್ಪೃಶ್ಯತಾ ಕಾನೂನಿನ ಪ್ರಕಾರ ಈ ಉಪಾಧ್ಯಾಯರು ಪೋಲೀಸಿನವರಿಗೆ ದೂರು ಕೊಡಲು ಹೋದರೆ ಅವರಿಗೇ ಎರಡು ಬಡಿದು ಹೊರಗೆ ಹಾಕುತ್ತಾರೆ. ಇದು ನ್ಯಾಯವೋ ಅನ್ಯಾಯವೋ ಎಂಬುದನ್ನು ಅವರು ವಿಚಾರ ಮಾಡುವುದೇ ಇಲ್ಲ. ಇದೇ ಕಾರಣದಿಂದ ಬಹಳ ಮಂದಿ ಹರಿಜನ ಮಾಸ್ಟರರು ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಈ ರೀತಿಯಾದರೆ ಇನ್ನು ಇವರಿಗೆ ಯಾವ ರೀತಿ ಕೆಲಸ ಕೊಡುತ್ತೀರಿ ? ನಮ್ಮ ರಾಜ್ಯದಲ್ಲಿ ಜಾತಿಭೇಧ, ಅಸ್ಪೃಶ್ಯತೆ ಇನ್ನೂ ಇರುವುದಾದರೆ ಈ ಹರಿಜನರ ಉದ್ಧಾರವನ್ನು ಇನ್ನು ಯಾವ ರೀತಿ ಮಾಡುತ್ತೀರಿ ? ಮೊನ್ನೆ ಮೊನ್ನೆತಾನೆ ಪಬ್ಲಿಕ್ ಸರ್ವಿಸ್

ಕಮಿಷನ್ ಅವರು ಮೂರನೇ ದರ್ಜೆ ಕ್ಲಾರ್ಕ್ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಇಂಟರವ್ಯೂ ಕರೆದಿದ್ದಾರೆ. ಮಂಗಳೂರಿನಿಂದ ಬೆಂಗಳೂರಿಗೆ ಬರುವ ಸಾಮರ್ಥ್ಯವೂ ಇಲ್ಲದ ಹರಿಜನರಿದ್ದಾರೆ. ಕೆಲವರು ಬಂದರೂ ಸಹ ಹಣ ಕೊಟ್ಟು ಕೆಲಸ ಮಾಡಿಸಿಕೊಳ್ಳುವ ಸಾಮರ್ಥ್ಯ ಅವರಿಗೆ ಇರುವುದಿಲ್ಲ. ಇಂತಹವರನ್ನು ಇಂಟರವ್ಯೂಗಾಗಿ ಬೆಂಗಳೂರಿಗೆ ಕರೆಸುವ ಬದಲು ಮಂಗಳೂರಿನಲ್ಲಿಯೇ ಏತಕ್ಕೆ ಇಂಟರವ್ಯೂ ಮಾಡಬಾರದು ? ಮಂಗಳೂರಿನಲ್ಲಿ ಡಿಸ್ಟ್ರಿಕ್ಟ್ ಎಂಪ್ಲಾಯಮೆಂಟ್ ಆಫೀಸ್ ಇದೆ. ೨೯ ಸಾವಿರ ಜನರು ಅಲ್ಲಿ ಕೆಲಸಕ್ಕಾಗಿ ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿದ್ದಾರೆ. ಇವರಪೈಕಿ ೯ ಸಾವಿರ ಜನರು ಹರಿಜನರೇ ಇದ್ದಾರೆ. ಇವರು ರಿಜಿಸ್ಟರ್ ಮಾಡಿಸಿ ಹತ್ತು ವರ್ಷಗಳು ಕಳೆದರೂ ಸಹ ಇನ್ನೂ ಕೆಲಸ ಸಿಕ್ಕಿಲ್ಲ. ಬೆಂಗಳೂರಿನಲ್ಲಿರುವ ಪಬ್ಲಿಕ್ ಸರ್ವಿಸ್ ಕಮಿಷನ್ ಮುಂದೆ ಇಂಟರವ್ಯೂಗೆ ಬರಲು ಇವರಿಗೆ ತಾಕತ್ ಇಲ್ಲ. ಇನ್ನು ಇವರಿಗೆ ಯಾವ ರೀತಿ ಕೆಲಸ ಕೊಡುತ್ತೀರಿ ? ಒಟ್ಟಿನಲ್ಲಿ ನೀವು ಇಷ್ಟರವರೆಗೆ ಮಾಡಿದಂಥ ಪಾಪವನ್ನು ನಿವಾರಣೆ ಮಾಡಿ ಕೊಳ್ಳಬೇಕಾದರೆ, ಈ ಹರಿಜನರಿಗೆ ೧೮ ಪರ್ಸೆಂಟ್ ಉದ್ಯೋಗ ಕೊಡಬೇಕು. ಮತ್ತು ಇವರಿಗೆ ಕೆಲಸ ಕೊಡುವಾಗ ಅವರವರ ಊರಿನ ಸಮೀಪ ದಲ್ಲಿಯೇ ಕೊಡಿ. ದೂರದ ಊರಿನಲ್ಲಿ ಕೆಲಸ ಕೊಟ್ಟು ಕಳುಹಿಸಿದರೆ, ಅಲ್ಲಿ ಅವರಿಗೆ ವಾಸಕ್ಕೆ ಮನೆ ಸಿಕ್ಕದೆ, ಊಟಸಿಕ್ಕದೆ, ನೀರು ಸಿಕ್ಕದೆ ಕೆಲಸಕ್ಕೆ ರಾಜಿನಾಮೆ ಕೊಟ್ಟು ವಾಪಸ್ ಬರಬೇಕಾಗುತ್ತದೆ. ಆದಕಾರಣ ಅವರು ವಾಸವಿರುವ ಊರಿನ ಸಮೀಪದಲ್ಲಿಯೇ ಕೆಲಸ ಕೊಡಬೇಕೆಂದು ತಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಈ ವಿಚಾರಗಳನ್ನೆಲ್ಲಾ ಸಂಬಂಧಪಟ್ಟ ಮಂತ್ರಿಗಳು ಇದ್ದಾಗ ಮಾತನಾಡುವುದು ಒಳ್ಳೆಯದೆಂದು ಕಾಣುತ್ತದೆ. ಅವರು ಇಲ್ಲದಿರುವಾಗ ಮಾತನಾಡಿದರೆ ಅದರಿಂದ ಏನೂ ಫಲ ಸಿಗುವುದಿಲ್ಲ. ಆದ್ದರಿಂದ ನಾನು ಈಗ ಹೆಚ್ಚು ಮಾತನಾಡದೆ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಬಿ. ಬೆಡಗಿ.—(ಸದಲಗ) ಸನಾನ್ಯ ಅಧ್ಯಕ್ಷಿಣಿಯವರೇ, ಈ ವರ್ಷದ ಬಜೆಟನ್ನು ನಾನು ಒಳ್ಳೆಯ ಬಿಚ್ಚು ಮನಸ್ಸಿನಿಂದ ಮತ್ತು ಸಮಾಧಾನಕರವಾಗಿ ಸ್ವಾಗತಿಸುತ್ತೇನೆ. ನಮ್ಮ ಕಾಂಗ್ರೆಸ್ (ಐ) ಮಂತ್ರಿಮಂಡಲದಲ್ಲಿ ಮುಖ್ಯಮಂತ್ರಿಗಳಾಗಿರುವ ಶ್ರೀ ದೇವರಾಜ ಅರಸ್ ಅವರನೇತೃತ್ವದಲ್ಲಿರತಕ್ಕಂಥ ಮಂತ್ರಿಮಂಡಲವು ದೀನದಲಿತರಿಗಾಗಿ, ಬಡಬಗ್ಗರ ಸಲುವಾಗಿ, ಹಿಂದುಳಿದ ವರ್ಗಗಳ ಸಲುವಾಗಿ ಪ್ರಾಮಾಣಿಕವಾಗಿ ಮಾಡಿದಂಥ ಪ್ರಗತಿಪರವಾದಂಥ ಕೆಲಸಗಳ ಒಂದು ಪ್ರತಿರೂಪ ಈ ಬಜೆಟ್‌ನಲ್ಲಿ ನಮಗೆ ಕಾಣಿಸುತ್ತಿದೆ. ನಮಗೆ ಸ್ವಾತಂತ್ರ್ಯ ಸಿಕ್ಕಿ ಮೂವತ್ತು ವರ್ಷಗಳು ಕಳೆದುಹೋದರೂ ಸಹ, ಈ ಸಮಾಜವಾದದ ನೀಳವಾದಂಥ ಹಕ್ಕಿ ಆಕಾಶದಲ್ಲಿ ಎಲ್ಲೋ ಹಾರಾಡುತ್ತಿತ್ತು. ಅದು ಇಲ್ಲಿಯ ವರೆಗೆ ಯಾರಿಗೂ ಕಾಣಿಸುತ್ತಿರಲಿಲ್ಲ. ನಮ್ಮ ಇಂದಿರಾಗಾಂಧಿಯವರ ಪ್ರಗತಿಪರವಾದಂಥ ಧೋರಣೆ ಯಿಂದ ಮತ್ತು ನಮ್ಮ ಪ್ರಾಂತ್ಯದಲ್ಲಿ ಮಾನ್ಯ ದೇವರಾಜ ಅರಸ ಅವರ ಮಂತ್ರಿಮಂಡಲದವರು ಕೈ ಕೊಂಡ ಕಾರ್ಯಕ್ರಮದ ಫಲವಾಗಿ ಅಂದರೆ ಇವರ ಒಂದು ಆಳ್ವಿಕೆಯ ಕಾಲದಲ್ಲಿ ಈ ಹಕ್ಕಿಯನ್ನು ನಾವು ಸ್ವಲ್ಪಸ್ವಲ್ಪವಾಗಿ ನೋಡುತ್ತಿದ್ದೇವೆ. ನಮ್ಮ ಪ್ರಾಂತ್ಯದಲ್ಲಿರತಕ್ಕಂಥ ಬಡಬಗ್ಗರಿಗೆ, ಹಿಂದುಳಿದಿರ ತಕ್ಕಂಥ ಜನರಿಗೆ ಈ ಸಮಾಜವಾದದ ಅಲ್ಪಸ್ವಲ್ಪ ದರ್ಶನವಾಗಿದ್ದರೆ ಅದು ಇವರ ಆಳ್ವಿಕೆಯ ಕಾಲದಲ್ಲಿ ಎಂದು ಹೇಳಬಹುದು. ಸಾಗರದ ತಳದಲ್ಲಿ ಅನೇಕ ಜೀವಿಗಳು ಜೀವನ ಮಾಡುವಂತೆ, ಈ ಸರ್ಕಾರದ ಆರ್ಥಿಕ ಬಜೆಟಿನಲ್ಲಿ ಬೇರೆಬೇರೆ ಕಮೀಷನ್‌ಗಳು, ಕೌನ್ಸಿಲ್‌ಗಳು, ಕಾರ್ಪೊರೇಷನ್‌ಗಳು ತಮ್ಮ ತಮ್ಮ ಕೆಲಸವನ್ನು ಉತ್ತಮವಾದಂಥ ರೀತಿಯಲ್ಲಿ ನಿರ್ವಹಿಸುತ್ತಿರುವಾಗ, ಅವುಗಳ ಕೆಲಸವನ್ನು ಮರೆಮಾಚಿ, ಎಲ್ಲೋ ಬರುವ ಅಲ್ಪಸ್ವಲ್ಪ ತೊಂದರೆಗಳನ್ನೇ ಮುಂದೆ ಮಾಡಿಕೊಂಡು, ಅವುಗಳನ್ನೇ ಹೇಳುತ್ತಾ ಹೋದರೆ ನಮ್ಮ ಒಂದು ಪ್ರಗತಿಗೆ ಅಡ್ಡಿ ಮಾಡಿದಂತೆಯೇ ಸರಿ. ನಾನು ಈ ಸಂಸದೀಯ ವ್ಯವಹಾರ ನಲ್ಲಿ ಹೊಸಬ. ನಾನು ಈ ಸಲದ ಚುನಾವಣೆಯಲ್ಲಿ ಚಿಕ್ಕೋಡಿ ತಾಲ್ಲೂಕಿನ ಸದಲಗ ಕ್ಷೇತ್ರದಿಂದ ಆರಿಸಿ ಬಂದಿದ್ದೇನೆ. ನಾವು ಗಡಿ ಪ್ರದೇಶದ ಜನರು. ಈ ಬಜೆಟಿಗೆ ಸಂಬಂಧಪಟ್ಟಂತೆ ಮುಂದೆ ಬರತಕ್ಕಂಥ ಡಿಮ್ಯಾಂಡ್‌ಗಳನ್ನು ಅಭ್ಯಾಸ ಮಾಡಿ, ಅವುಗಳ ಬಗ್ಗೆ ಅವಶ್ಯಕವಾದಂಥ ಸಲಹೆಗಳನ್ನು ಸರ್ಕಾರಕ್ಕೆ ಕೊಡುವುದಕ್ಕೆ ಅವಕಾಶವಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಗಡಿ ಪ್ರದೇಶ ವಾದಂಥ ಅಂದರೆ ಹೆಚ್ಚಾಗಿ ಜನರು ಮರಾಠಿ ಮಾತನಾಡುವಂತಹ ಭಾಗದಲ್ಲಿ ಸರ್ಕಾರದವರು ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿಸಿದ್ದಾರೆ. ನಮ್ಮ ಭಾಷಾ ಅಲ್ಪಸಂಖ್ಯಾತರಿಗೆ ಅವಶ್ಯಕವಾಗಿ ಬೇಕಾ ಗಿರುವಂತಹ ನೀರು, ರಸ್ತೆ, ಮತ್ತು ವಿದ್ಯುಚ್ಛಕ್ತಿ ಮುಂತಾದ ಸೌಲಭ್ಯಗಳನ್ನು ಸರ್ಕಾರದವರು ಸರ್ವೇ ಸಾಮಾನ್ಯವಾಗಿ ಒದಗಿಸಿದ್ದಾರೆ. ಆದರೂ ಸಹ ಇನ್ನೂ ಕೆಲವು ಸೌಲಭ್ಯಗಳನ್ನು ಒದಗಿಸಿಕೊಡಬೇಕಾ

ಗಿದೆ. ನಾನು ಆರಿಸಿ ಬಂದಂಥ ಭಾಗದಲ್ಲಿ ಅವಶ್ಯಕವಾದಂಥ ಕಾರ್ಯಕ್ರಮಗಳು ಇನ್ನೂ ಆಗಬೇಕಾಗಿದೆ. ಈ ಸಲದ ಬಡ್ಜೆಟ್ ಒಳ್ಳೆಯ ಸುವ್ಯವಸ್ಥಿತವಾದಂಥ ಬಡ್ಜೆಟ್ ಆದರೂ ಕೂಡ ಇಂತಹ ಒಂದು ದೊಡ್ಡ ಬಡ್ಜೆಟ್‌ನಲ್ಲಿ ಕೆಲವು ತೊಂದರೆಗಳಿರುವುದು ಸ್ವಾಭಾವಿಕವೇ ಸರಿ. ಇಂತಹ ತೊಂದರೆಗಳನ್ನು ನಾವು ಸ್ಥಾನಿಕ ತಳಹದಿಯಮೇಲೆ ನಿವಾರಿಸಿಕೊಳ್ಳಬಹುದು. ನಮ್ಮ ಮಟ್ಟಿಗೆ ಹೇಳುವುದಾದರೆ, ಪಿ.ಡಬ್ಲ್ಯೂಡಿ.ಯಿಂದ ರೋಡ್ ಫೆಸಿಲಿಟೀಸ್ ಸಾಕಷ್ಟು ಆಗಿದೆ. ನೂರಕ್ಕೆ ತೊಂಭತ್ತರಷ್ಟು ರಸ್ತೆಗಳ ಕೆಲಸಗಳು ನಮ್ಮ ಭಾಗದಲ್ಲಿ ಆಗಿದೆ, ಅಲ್ಪಸ್ವಲ್ಪ ಆಗದೇ ಇರಬಹುದು.

ಎಲೆಕ್ಟ್ರಿಸಿಟಿ ಬಗ್ಗೆ ಹೇಳುವುದಾದರೆ, ಸಾಕಷ್ಟು ಹಳ್ಳಿಗಳಿಗೆ ಎಲೆಕ್ಟ್ರಿಸಿಟಿಯನ್ನು ಪೂರೈಸಲಾಗಿದೆ. ಆದರೂ ಕೂಡ ಒಂದು ವಿಷಯವನು ತಮ್ಮ ಗಮನಕ್ಕೆ ತರುತ್ತೇನೆ. ನಮ್ಮ ಕಡೆ ದೊಡ್ಡ ವಿಲೇಜಿಗೆ ಹೊಂದಿಕೊಂಡಂತೆ ಹ್ಯಾಂಲೆಟ್ಸ್ ಅಂದರೆ ಸಣ್ಣ ಸಣ್ಣ ಹಳ್ಳಿಗಳನ್ನು ದುರ್ಲಕ್ಷಿಸಲಾಗಿದೆ. ಈ ಅಟ್ಯಾಚ್ಡ್ ವಿಲೇಜಸ್ ದೊಡ್ಡ ವಿಲೇಜ್ ಪಂಚಾಯಿತಿಯಲ್ಲಿ ಅಧಿಕವಾಗಿವೆ. ದೊಡ್ಡ ವಿಲೇಜ್ ಎಲ್ಲಾ ಸವಲತ್ತುಗಳನ್ನು ತಮ್ಮಲ್ಲೇ ಒದಗಿಸಿಕೊಂಡು ಹ್ಯಾಂಲೆಟ್ಸ್‌ಗೆ ಯಾವ ಸೌಲಭ್ಯವನ್ನೂ ನೀಡಿಲ್ಲ. ಸ್ಥಾನಿಕ ರಾಜಕಾರಣದ ಪರಿಣಾಮದಿಂದ ಈ ರೀತಿಯಾಗಿದೆ. ಉದಾಹರಣಾರ್ಥವಾಗಿ ಹೇಳುವುದಾದರೆ, ಮಹಾರಾಷ್ಟ್ರದ ಮಂಕಾಪುರ ಪಂಚಾಯಿತಿ ವಾರ್ಡ್ ನಿರ್ಮಾಣ ಮಾಡುವ ವೇಳೆ ಒಂದು ಹ್ಯಾಂಲೆಟ್‌ನಲ್ಲಿ ಸವರ್ಣೀಯರನ್ನು ಬಹಿಷ್ಕರಿಸಲು ಆ ಹ್ಯಾಂಲೆಟ್‌ನಲ್ಲಿ ೭೦ ಜನ ಸವರ್ಣೀಯರು ಇರುತ್ತಾರೆ ಎಂದು ಅದನ್ನು ಹರಿಜನರವಾರ್ಡ್ ಘೋಷಿಸಿ ರಿಜರ್ವ್ ಸೀಟನ್ನು ಹಾಕಿದ್ದಾರೆ. ಈ ರೀತಿಯಾದ ಅನ್ಯಾಯದಿಂದ ಅಲ್ಲಿನ ಜನರಿಗೆ ಬಹಳ ಕಳವಳವಾಗಿದೆ ಮತ್ತು ಸಂತಾಪವಾಗಿದೆ.

ಇನ್ನು ರೈತ ಕಾರ್ಮಿಕರ ಬಗ್ಗೆ ಹೇಳುವುದಾದರೆ, ಇವರಿಗೆ ಸಾಕಷ್ಟು ಪ್ರಮಾಣದಲ್ಲಿ ಸವಲತ್ತುಗಳನ್ನು ಒದಗಿಸುವುದು ಅವಶ್ಯವಿದೆ. ಮೇಲಿನ ವರ್ಗದ ಕಾರ್ಮಿಕರು ಮತ್ತು ಸರ್ಕಾರಿ ಯಂತ್ರದಲ್ಲಿ ಕೆಲಸ ಮಾಡತಕ್ಕಂಥ ಉದ್ಯೋಗಸ್ಥರು ಹೆಚ್ಚು ಸವಲತ್ತುಗಳನ್ನು ಒದಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆದರೆ ನಮ್ಮ ದೇಶವನ್ನು ಕಟ್ಟುವಂಥ, ಭೂಮಿಯಲ್ಲಿ ದುಡಿಯುವಂಥ, ದೈನಂದಿನ ಕಾರ್ಯದಲ್ಲಿ ತೊಡಗಿರುವಂಥ ರೈತ ಕಾರ್ಮಿಕರಿಗೆ ಯಾವ ತರಹದ ಸೌಲಭ್ಯಗಳೂ ಈ ಬಡ್ಜೆಟ್‌ನಲ್ಲಿ ಇಲ್ಲ. ಪ್ರಾಂತೀಕ ಸರ್ಕಾರ ಒಬ್ಬ ಹೆಣ್ಣು ಮಗಳಿಗೆ ಒಂದೂವರೆ, ರೂಪಾಯಿ ಒಬ್ಬ ಗಂಡಾಳಿಗೆ ಎರಡೂವರೆ ರೂಪಾಯಿ ಎಂದು ನಿರ್ದಿಷ್ಟವಾಗಿ ಕೂಲಿಯನ್ನು ನಿರ್ಧಾರಮಾಡಿದೆ, ಈ ಕೂಲಿಯಿಂದ ಅಂದರೆ ೮ ದಿವಸಕ್ಕೆ ೧೫-೨೦ ರೂಪಾಯಿಗಳಿಂದ ಒಂದು ಕುಟುಂಬ ಹೇಗೆ ಜೀವಿಸಬಹುದು ಎಂಬುದನ್ನು ಯೋಚಿಸಬೇಕು. ಇವರಿಗೆ ಶಾಶ್ವತ ಪರಿಹಾರವಿಲ್ಲ. ಮಹಾರಾಷ್ಟ್ರದಲ್ಲಿ ಕಡ್ಡಾಯವಾಗಿ ರೋಜಗಾರ್ ಪದ್ಧತಿಯನ್ನು ಮಾಡಿ ಕೂಲಿ ಕೊಡುವ ಹಮ್ಮಿಯನ್ನು ಹಾಕಿದ್ದಾರೆ. ತೀರ ಬಡಬಗ್ಗರಿಗೆ ಒಂದು ವೇಳೆ ಕೂಲಿ ಸಿಕ್ಕದಿದ್ದರೆ ಆ ದಿವಸದ ಕೂಲಿಯನ್ನು ಪ್ರಾಂತೀಕ ಸರ್ಕಾರ ಒದಗಿಸಿಕೊಡುತ್ತದೆ. ಇಂತಹ ಯೋಜನೆಯನ್ನು ನಮ್ಮ ಪ್ರಾಂತ್ಯದಲ್ಲಿ ಹಾಕಿಕೊಳ್ಳಬೇಕೆಂದು ತಮ್ಮ ಮತಿಯಿಂದ ಸರ್ಕಾರವನ್ನು ಪ್ರಾರ್ಥಿಸುವೆ.

ಇನ್ನು ಸಾರ್ವತ್ರಿಕ ಶಿಕ್ಷಣದ ಬಗ್ಗೆ ಹೇಳುವುದಾದರೆ, ಗ್ರಾಮಾಂತರ ಪ್ರದೇಶದಲ್ಲಿ ಪ್ರಾಥಮಿಕ ಶಾಲೆಗಳ ಸಂಖ್ಯೆ ಯಾವತ್ತೂ ಹೆಚ್ಚುತ್ತಾ ಹೋಗುತ್ತದೆ. ಈ ಶಿಕ್ಷಣದ ಬಗ್ಗೆ ಒಂದು ವಿಶೇಷವಾದ ವಿಷಯವನ್ನು ಹೇಳುವುದಾದರೆ ಖಾಸಗೀ ಶಾಲೆಗಳಿಗೆ, ಹೈಸ್ಕೂಲುಗಳಿಗೆ ಸರ್ಕಾರದ ಕಡೆಯಿಂದ ಬಾಡಿಗೆ ಹಣ ಏನು ಬರುತ್ತದೆ ಅದು ವರ್ಷದ ಮೇಂಟೆನೆನ್ಸ್‌ಗೆ ಬರುವುದಿಲ್ಲ. ಒಂದು ಲಕ್ಷ ಅಥವಾ ಎರಡು ಲಕ್ಷ ರೂಪಾಯಿಗಳ ಬಿಲ್ಡಿಂಗ್ ಇದ್ದರೆ, ೩,೦೦೦ ಅಥವಾ ೫,೦೦೦ ರೂಪಾಯಿ ಬಾಡಿಗೆ ಬರುತ್ತದೆ. ಆ ಶಾಲಾ ಕಟ್ಟಡಗಳ ಮೇಲಿನ ಹೆಂಚುಗಳು ಹಾರಿಹೋದರೆ ಅಸ್‌ಬೆಸ್ಟಾಸ್ ಶೀಟ್‌ನ್ನು ಒದಗಿಸುವ ವ್ಯವಸ್ಥೆ ಇಲ್ಲ. ಇದರ ಕಡೆ ಸರ್ಕಾರ ಹೆಚ್ಚು ಗಮನಕೊಡಬೇಕೆಂದು ಪ್ರಾರ್ಥಿಸುವೆ.

ಯಾವ ವ್ಯವಸ್ಥೆಯ ಮೇಲೆ ನಮ್ಮ ರಾಷ್ಟ್ರದ ಆರ್ಥಿಕಸ್ಥಿತಿ ಅವಲಂಬಿಸಿದೆಯೋ ಅಂತಹ ರೈತನ ಸ್ಥಿತಿ ಇವತ್ತು ತೀರ ಸಂಕಟದಲ್ಲಿದೆ. ರೈತನು ಬೆಳೆಯುವ ಎಲ್ಲಾ ಸರಕುಗಳಿಗೂ ಭಾರೀ ಪ್ರಮಾಣದಲ್ಲಿ ಕಡಿಮೆ ಬೆಲೆ ಬರುತ್ತಿದೆ. ನಮ್ಮ ಭಾಗದ ಮಟ್ಟಿಗೆ ಹೇಳುವುದಾದರೆ, ಹೊಗೆಸೊಪ್ಪನ್ನು ಹೆಚ್ಚು ಪ್ರಮಾಣದಲ್ಲಿ ಬೆಳೆಯುತ್ತಾರೆ. ನಮ್ಮ ಕಡೆ ೩-೪ ತಾಲ್ಲೂಕುಗಳಲ್ಲಿ ೪೦-೫೦ ಸಾವಿರ ಎಕರೆಗಳಲ್ಲಿ ಬೆಳೆಯುವ ಆಫ್ಘ್ ತಂಬಾಕು ಬಹಳ ಪ್ರಸಿದ್ಧವಿದೆ. ಈ ಹೊಗೆಸೊಪ್ಪನ್ನು ಬೀಡಿಯಲ್ಲಿ ಹಾಕುತ್ತಾರೆ. ಇವರಲ್ಲಿ ಅಲ್ಪಸ್ವಲ್ಪ ಭಾಗ ಪರದೇಶಕ್ಕೂ ಹೋಗುತ್ತದೆ. ಕಳೆದ ವರ್ಷ ಮತ್ತು ಅದಕ್ಕೆ ಹಿಂದಿನವರ್ಷ

ಹೊಗೆಸೊಪ್ಪು ಒಂದು ಕೆ.ಜಿ.ಗೆ ೮ ರೂಪಾಯಿ ಇತ್ತು. ಈ ಸಾರಿ ೨ ರೂಪಾಯಿಗಿಂತಲೂ ಕಡಿಮೆಯಾಗಿದೆ. ಈ ಪರಿಸ್ಥಿತಿಯಲ್ಲಿ ಸಾವಿರಾರು ಕೆ.ಜಿ. ಹೊಗೆಸೊಪ್ಪನ್ನು ಬೆಳೆದಿರತಕ್ಕಂಥ ರೈತನಿಗೆ ೪೦, ೫೦ ಸಾವಿರ ರೂಪಾಯಿಗಳ ವರಮಾನ ಬರಬೇಕಾಗಿರತಕ್ಕಂಥದ್ದು ಈ ವರ್ಷ ನಾಲ್ಕೈದು ಸಾವಿರ ರೂಪಾಯಿ ಕೂಡಾ ಬರುವುದಿಲ್ಲ. ಈ ವರ್ಷ ರೈತನ ಆರ್ಥಿಕ ಪರಿಸ್ಥಿತಿ ಬುಡಮೇಲಾಗಿದೆ. ಅದನ್ನು ತುಂಬಲು ಸೊಸೈಟಿಗಳಾಗಲೀ, ಸರ್ಕಾರವಾಗಲೀ ಸಾಲ ಸವಲತ್ತನ್ನು ಕೊಡಲು ಸಾಧ್ಯವಾಗಿಲ್ಲ. ಈ ಹೊಗೆಸೊಪ್ಪಿಗೆ ಕೇಂದ್ರಸರ್ಕಾರದವರು ಒಂದು ಕೆ.ಜಿ.ಗೆ ೪ ರೂಪಾಯಿ ಸೆಂಟ್ರಲ್ ಎಕ್ಸೈಜ್ ಡ್ಯೂಟಿಯನ್ನು ತೆಗೆದುಕೊಳ್ಳುತ್ತಾರೆ. ಇಂತಹ ಕನಿಕರವಾದ ಪರಿಸ್ಥಿತಿಯಲ್ಲಿ ಏನಾದರೂ ಪರಿಹಾರ ಒದಗಿಸಬೇಕೆಂದು ನಮ್ಮ ಭಾಗದ ಜನರು ಕೇಂದ್ರಸರ್ಕಾರದ ವ್ಯಾಪಾರಿ ಮಂತ್ರಿಗಳಾದ ಶ್ರೀ ಮೋಹನ್ ಧಾರಿಯ ಅವರೊಡನೆ ಸಂಪರ್ಕ ಹೊಂದಿ ವಿಚಾರ ಮಾಡುತ್ತಿದ್ದಾರೆ. ಆದುದರಿಂದ ಈ ವಿಚಾರದಲ್ಲಿ ಪ್ರಾಂತೀಕ ಸರ್ಕಾರದ ವ್ಯಾಪಾರಿ ಮಂತ್ರಿಗಳು ಮತ್ತು ವ್ಯವಸಾಯ ಮಂತ್ರಿಗಳು ನಮ್ಮ ಭಾಗದ ರೈತರಿಗೆ ಏನಾದರೂ ಒಂದು ಪರಿಹಾರವನ್ನು ಒದಗಿಸಬೇಕೆಂದು ನಾನು ಪ್ರಾರ್ಥಿಸುವೆ.

ನಮ್ಮ ಕಡೆ ಕಬ್ಬು ಬೆಳೆಗಾರರ ಸಮಸ್ಯೆ ಬಹಳ ದೊಡ್ಡ ಸಮಸ್ಯೆಯಾಗಿದೆ. ನಮ್ಮ ತಾಲ್ಲೂಕಿನಲ್ಲಿ ಮತ್ತು ಹುಕ್ಕೇರಿ ತಾಲ್ಲೂಕಿನಲ್ಲಿ ಸುಮಾರು ೩೦, ೪೦ ಸಾವಿರ ಎಕರೆಗಳಲ್ಲಿ ಕಬ್ಬನ್ನು ಬೆಳೆಯುತ್ತಾರೆ. ನಮ್ಮಲ್ಲಿ ಎರಡು ಸಕ್ಕರೆ ಕಾರ್ಖಾನೆಗಳಿವೆ. ಒಂದು ಚಿಕ್ಕೋಡಿಯಲ್ಲಿ ದೂದ್‌ಗಂಗಾ ಸಕ್ಕರೆ ಕಾರ್ಖಾನೆ ಮತ್ತು ಸಂಕೇಶ್ವರದಲ್ಲಿ ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆ ಇದೆ. ಈ ಎರಡು ಸಕ್ಕರೆ ಕಾರ್ಖಾನೆಗಳಲ್ಲಿ ಸುಮಾರು ೭೦, ೨೫ ಸಾವಿರ ಟನ್ ಕಬ್ಬನ್ನು ಅರೆಯುತಕ್ಕ ಸಾಮರ್ಥ್ಯವಿದೆ. ನಮ್ಮ ಪ್ರಾಂತೀಕ ಸರ್ಕಾರ ಶುಗರ್‌ಕೇನ್ ಬಂದಿಯನ್ನು ಮಾಡಿದೆ, ಬೇರೆ ಕಡೆ ಬಿಟ್ಟುಕೊಡುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಬೆಳೆಯುತಕ್ಕ ಹೆಚ್ಚು ಕಬ್ಬನ್ನು ಈಗಿನ ಪರಿಸ್ಥಿತಿಯಲ್ಲಿ ಬೇರೆ ಕಡೆ ರವಾನಿಸಲು ಸಾಧ್ಯವಿಲ್ಲ. ಹಿಂದೆ ಕೊಲ್ಹಾಪುರದಲ್ಲಿರತಕ್ಕ ಕೋಆಪರೇಟೀವ್ ಸಕ್ಕರೆ ಕಾರ್ಖಾನೆಗೆ ಕಬ್ಬು ಹೋಗುತ್ತಿತ್ತು ಈಗ ಪ್ರಾಂತೀಯ ಬಂದಿಯಿಂದ ಬಹಳ ತೊಂದರೆಯಾಗಿದೆ. ಆದುದರಿಂದ ಇದಕ್ಕೆ ಪರಿಹಾರ ಒದಗಿಸಲು ಆದರ ಮಟ್ಟಿಗೆ ಆಜ್ಞೆಯನ್ನು ಸಡಿಲಿಸಿ ಕಬ್ಬು ಬೆಳೆಗಾರರು ಕಬ್ಬನ್ನು ಬೇರೆ ಸಕ್ಕರೆ ಕಾರ್ಖಾನೆಗೆ ಒಯ್ಯಲು ಅನುಕೂಲ ಮಾಡಿಕೊಡಬೇಕು, ಅವರಿಗೆ ಸವಲತ್ತು ಕೊಡಬೇಕು ಎಂದು ನಾನು ಪ್ರಾರ್ಥಿಸುವೆ.

ರೈತನಿಗೆ ಉತ್ಪಾದನಾ ಸಲುವಾಗಿ ಬೇಕಾದ ಅಗತ್ಯ ವಸ್ತುಗಳಾದ ಕಥ್ಯಾಯೂರಿಯ ಮುಂತಾದ ವಸ್ತುಗಳ ಮೇಲೆ ಅಥವಾ ಬೆಳೆಯುವ ವಸ್ತುಗಳ ಮೇಲೆ ಮಾರಾಟ ತೆರಿಗೆ ಹಾಕಬಾರದೆಂದು ನಾನು ವಿನಂತಿಸುವೆ. ಏಕೆಂದರೆ, ನಮ್ಮ ನೆರೆ ರಾಜ್ಯದಲ್ಲಿ ಈ ತರಹದ ತೆರಿಗೆಗಳನ್ನು ಹಾಕಿಲ್ಲ. ನಮ್ಮ ಗಡಿ ಪ್ರದೇಶದಲ್ಲಿರತಕ್ಕಂಥ ಮಾರ್ಕೆಟ್‌ಗಳು ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿವೆ. ನಮ್ಮಲ್ಲಿ ಟ್ಯಾಕ್ಸ್ ಹಾಕಿದ್ದರಿಂದ ನಿಪ್ಪಾಣಿ, ಸಂಕೇಶ್ವರ ಮತ್ತು ಬೆಳಗಾವಿ ಮಾರ್ಕೆಟ್‌ಗಳಲ್ಲಿ ವ್ಯಾಪಾರವಾಗಬೇಕಾದಂಥ ಮೆಣಸಿನಕಾಯಿ ಮುಂತಾದ ದಿನಬಳಕೆ ವಸ್ತುಗಳು ಮಹಾರಾಷ್ಟ್ರದಲ್ಲಿರತಕ್ಕ ಹೊಸ ಮಾರ್ಕೆಟ್‌ಗಳ ಕಡೆ ಡೈವರ್ಟ್ ಆಗುತ್ತವೆ. ನಿಪ್ಪಾಣಿಗೆ ೩ ಫರ್ಲಾಂಗ್ ದೂರದಲ್ಲಿರುವ ಅರ್ಜುನನಗರ್ ಮಾರ್ಕೆಟ್‌ಗೆ ಇಲ್ಲಿಂದ ಮೆಣಸಿನಕಾಯಿ ಹೋಗಿ ಅಲ್ಲಿ ಮಾರಾಟವಾಗುತ್ತದೆ. ನಮ್ಮ ಪ್ರಾಂತ್ಯದಲ್ಲಿ ಸೇಲ್ಸ್ ಟ್ಯಾಕ್ಸ್ ಇರುವುದರಿಂದ ಕೆಲವು ವಸ್ತುಗಳನ್ನು ಮಹಾರಾಷ್ಟ್ರದಿಂದ ತರುತ್ತಿದ್ದಾರೆ. ಆದುದರಿಂದ ದಯಮಾಡಿ ಮಾನ್ಯ ಆರ್ಥಿಕ ಮಂತ್ರಿಗಳು ನಾನು ಹೇಳಿದ ವಿಷಯಗಳ ಕಡೆಗೆ ಸೂಕ್ಷ್ಮವಾಗಿ ಗಮನಕೊಟ್ಟು ಅದಕೆ ಪರಿಹಾರವನ್ನು ಒದಗಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಇನ್ನು ಬರಗಾಲ ಅಭಾವದ ಪರಿಸ್ಥಿತಿಯ ಸಲುವಾಗಿ ಒಬ್ಬ ತಜ್ಞರು ಮಾಡಿದಂಥ ಸಲಹೆಯನ್ನು ತಾವು ಅತ್ಯಾವಶ್ಯಕವಾಗಿ ಪರಿಗಣಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಏತಕ್ಕೆಂದರೆ ಹಿಂದೆ ಒಂದು ಸಾರಿ ಬರಗಾಲಕ್ಕೆ ಪೀಡಿತವಾದ ಪ್ರದೇಶ ಒಂದರಲ್ಲಿ ಮಳೆ ಬರದೇ ಇದ್ದುದರಿಂದ ಬೀಜ ಹಾಕುವ ಕೆಲಸ ಕೂಡ ನಿಂತು ಹೋಯಿತು. ಬರಗಾಲವು ಯಾವಾಗ ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ ಆದುದರಿಂದ ಅಂಥಾ ಸಮಯದಲ್ಲಿ ಇಂಥಾ ಯೋಜನೆಗಳನ್ನು ನಾವು ಅಲ್ಲಿ ಹಾಕಿಟ್ಟುಕೊಂಡಿದ್ದರೆ ಅದರಿಂದ ಬಹಳ ಪ್ರಯೋಜನಕ್ಕೆ ಬರುತ್ತದೆಂದು ಹೇಳಬಯಸುತ್ತೇನೆ. ಆಮೇಲೆ ರೈತರಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯಗಳು ಸರಿಯಾಗಿ ದೊರೆಯುತ್ತಿಲ್ಲ. ಮತ್ತೆ ಏನಾದರೂ ಒಂದು ಕಲ್ಪನೆ ಮಾಡಿಕೊಂಡು ತನಗೆ ಬೇಕಾದ ಜನರಿಗೆ ಸೌಲಭ್ಯವನ್ನು ಒದಗಿಸಿಕೊಡುತ್ತಾರೆ, ಆದುದರಿಂದ ಎಲ್ಲಾ ರೈತರಿಗೂ ಸಾಲದ ಸೌಲಭ್ಯ ಸಿಗುವಂತೆ ಸರಿಯಾದ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ.

೫-೩೦ ಪಿ.ಎಂ.

ಇನ್ನು ಉಚಿತ ಶಿಕ್ಷಣದ ಬಗ್ಗೆ ಹೇಳುವುದಾದರೆ, ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಜನರಲ್ ಹಾಸ್ಟಲ್ ಗಳನ್ನು ತೆಗೆಯುಬೇಕೆಂದು ಹೇಳಬಯಸುತ್ತೇನೆ. ಮತ್ತು ಹಳ್ಳಿಯಲ್ಲಿರುವಂಥಾ ವಿಲೇಜ್ ಅಕೌಂಟೆಂಟ್ ಮತ್ತು ಸೆಕ್ರಟರಿಗಳವರು ಬಹುತೇಕ ಅವರು ಕೆಲಸ ಮಾಡುತ್ತಿರುವಂಥಾ ಊರಿನಿಂದ ಬೇರೆ ಕಡೆ ವಾಸ ಮಾಡುತ್ತಿರುತ್ತಾರೆ., ಕೆಲಸಕೆ ಮಾತ್ರ ಆ ಊರಿಗೆ ಬಂದು ಓಡಾಡಿಕೊಂಡಿರುತ್ತಾರೆ ಆದುದರಿಂದ ಅದನ್ನು ತಪ್ಪಿಸಿ ಅವರು ಕಡ್ಡಾಯವಾಗಿ ಅದೇ ಊರುಗಳಲ್ಲಿ ವಾಸಿಸುವಂತೆ ಮಾಡಿದರೆ ಅದರಿಂದ ಜನ ಗಳಿಗೆ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ಪಾನನಿರೋಧದ ಬಗ್ಗೆ ಹೇಳುವುದಾದರೆ ಅದು ನಮ್ಮ ದೇಶದಲ್ಲಿ ಒಂದು ಗೊಂದಲಮಯ ವಾದ ವಾತಾವರಣವನ್ನು ಉಂಟು ಮಾಡಿದೆ. ಸರ್ಕಾರದ ದ್ವಿಮುಖ ನೀತಿಯಿಂದಾಗಿ ಒಂದು ಕಡೆ ಕುಡಿಯ ಬಾರದೆಂದು ಹೇಳುತ್ತಿದ್ದಾರೆ ಮತ್ತೊಂದು ಕಡೆ ಸಕ್ಕರೆ ಕಾರ್ಖಾನೆಗಳವರಿಗೆ ವಿವಿಧ ರೀತಿಯ ಸರಾಯಿ ಗಳನ್ನು ತಯಾರು ಮಾಡಲು ಪ್ರೋತ್ಸಾಹ ಕೊಡುತ್ತಿದ್ದಾರೆ. ಈ ರೀತಿಯಾಗಿ ವಿಸಂಗತವಾದ ದ್ವಿಮುಖ ನೀತಿಯಾಗಿ ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಸರ್ಕಾರ ದವರು ಯಾವುದೇ ನೀತಿಯನ್ನು ಅನುಸರಿಸಿದರೂ ಕೂಡ ಅದು ಸ್ವಚ್ಛವಾಗಿ ನಿರ್ಧಿಷ್ಟವಾದ ನೀತಿಯನ್ನೇ ಅವಲಂಬಿಸಿರಬೇಕೆಂದು ಪ್ರಾರ್ಥಿಸುತ್ತೇನೆ, ಇದು ನನ್ನ ಮೊದಲನೆಯ ಭಾಷಣವಾದುದರಿಂದ ನಾನು ಸಾಕಷ್ಟು ಅಭ್ಯಾಸ ಮಾಡಿಕೊಂಡು ಬಂದಿರಲಿಲ್ಲ, ಆದಾಗ್ಯೂ ನನಗೆ ತಿಳಿದ ಮಟ್ಟಿಗೆ ಕೆಲವೊಂದು ವಿಷಯ ಗಳನು ಹೇಳಿರುತ್ತೇನೆ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಸಭಾಧ್ಯಕ್ಷಣೆಯವರೇ, ಈ ವರ್ಷದ ಆಯವ್ಯಯವನ್ನು ನಮ್ಮ ಮಾನ್ಯ ಹಣಕಾಸಿನ ಮಂತ್ರಿಯವರು ಮಂಡಿಸಿರುವುದು ನನ್ನ ದೃಷ್ಟಿ ಯೊಳಗೆ ಈ ಆಯವ್ಯಯವನ್ನು ಸ್ವಾಗತಿಸಬೇಕೋ ಅಥವಾ ಭೂಗತಿಸಬೇಕೋ ಎನ್ನುವ ಸಂದಿಗ್ಧ ಪರಿಸ್ಥಿತಿಯಲ್ಲಿ ನಾನು ನಿಂತಿದ್ದೇನೆ. ಹಣಕಾಸಿನ ಸಚಿವರು ಮೊದಲು ಮಾಡತಕ್ಕ ಭಾಷಣ ಇಡೀ ಆಯವ್ಯಯದ ಕೈ ಕನ್ನಡಿಯಾಗಿರುತ್ತದೆ. ಸಾಧನೆಗಳೇನಿದೆ, ಏನು ಭೋಧನೆಗಳಿದೆ ಎನ್ನುವುದನ್ನು ನಾವು ಅವರ ಭಾಷಣದಿಂದ ಅರಿಯಬಹುದಾಗಿದೆ. ಇದರಲ್ಲಿ ಕೆಲವು ಸಾಧನೆಗಳನ್ನು ವ್ಯಕ್ತಪಡಿಸಿದ್ದಾರೆ. ಅದರಲ್ಲಿ ಅತ್ಯುನ್ನತ ಸಾಧನೆಗಳೆಂದು ಅವರು ಹೇಳಿಕೊಂಡಿರತಕ್ಕಂಥದರಲ್ಲಿ ೧೩ ಇವೆ. ಅದರಲ್ಲಿ ಮೊದ ಲನೆಯದಾಗಿ ಅಭಾವ ಪರಿಸ್ಥಿತಿಗೆ ಒಳಗಾಗಿದ್ದ ಪ್ರದೇಶಗಳಲ್ಲಿ ೧೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದು, ಎರಡನೆಯದಾಗಿ, ಚಂಡಮಾರುತ ಪರಿಹಾರ ನಿಧಿಗೆ ೯೦ ಲಕ್ಷ ರೂಪಾಯಿ ಸಂಗ್ರಹ ಮಾಡಿರುವುದು, ೩ನೇಯದಾಗಿ ಹರಿಜನ ಗಿರಿಜನರಿಗೆ ೨೬೩೦ ಪ್ರಿ ಪ್ರೈಮರಿ ಕೇಂದ್ರಗಳನ್ನು ಸ್ಥಾಪನೆ ಮಾಡಿರುವುದು, ೪ನೇಯದಾಗಿ ೫೩.೦ಕ್ಕೂ ಹೆಚ್ಚಿನ ಬುಕ್ ಬ್ಯಾಂಕ್‌ಗಳ ಸ್ಥಾಪನೆ, ೫ನೆಯುದಾಗಿ ಕಳೆದ ಮೂರು ವರ್ಷಗಳಲ್ಲಿ ೩,೭೫೫ ಶಾಲಾ ಕಟ್ಟಡಗಳನ್ನು ಕಟ್ಟಿಸಿರುವುದು ೬ನೆಯದಾಗಿ, ೩೯,೮೦೦ ನಿವೇಶನಗಳ ಹಂಚಿಕೆ ೭ನೆಯದಾಗಿ ಈವರೆಗೆ ೮೩,೭೦೧ ಮನೆಗಳ ನಿರ್ಮಾಣವಾಗಿರುವುದು ಮತ್ತು ೨೫,೭೦೦೦ ಗುಡಿಸಲುಗಳ ನಿರ್ಮಾಣ ಕಾರ್ಯ ಮಾಡಿರುವುದು. ೮ನೆಯದಾಗಿ ೧ ಲಕ್ಷದ ೯೧ ಸಾವಿರ ರೂಪಾಯಿಗಳ ಖರ್ಚಿನಲ್ಲಿ ೧೪,೪೬೩ ಕೊರೆಯುವ ಭಾವಿಗಳನಿರ್ಮಾಣ ಮಾಡಿರುವುದು ೯ನೇಯದಾಗಿ, ಅದರಲ್ಲಿ ಇದುವರೆಗೆ ೧೧,೬೬೭ ಕೊರೆ ಭಾವಿಗಳನ್ನು ತೋಡುವ ಕಾರ್ಯವು ಯಶಸ್ವಿಯಾಗಿರುವುದು. ೯ನೇಯದಾಗಿ ೧೯೭೨ ರಿಂದೀಚೆಗೆ ೩೫ ಕೋಟಿ ರೂಪಾಯಿ ವೆಚ್ಚದಲ್ಲಿ ೧,೭೦,೦೦೦ ಹೆಕ್ಟೇರು ಭೂಮಿಗೆ ನೀರಾವರಿಯಾದಗಿಸಲಾಗಿರುವುದು. ೧೦ನೆಯದಾಗಿ ಉದ್ಯೋಗಕ್ಕೆ ೪೦.೬೨ ಕೋಟಿ ರೂಪಾಯಿಗಳ ಸಹಾಯ ಧನ ಕೊಟ್ಟಿರುವುದು ೧೧ನೆಯದಾಗಿ ೧೦,೮೭,೬೩೭ ಎಕರೆ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ಗೇಣಿದಾರರಿಗೆ ಅನುಭೋಗದ ಹಕ್ಕನ್ನು ನೀಡಲಾಗಿರುವುದು. ೧೨ನೆಯದಾಗಿ, ೭,೨೯೦ ಕಿ. ಮೀ. ರಸ್ತೆ ನಿರ್ಮಾಣ ಕಾರ್ಯ ಮುಗಿದಿರುವುದು. ಈ ರೀತಿಯಾಗಿ ೧೨, ೧೩ ಮುಖ್ಯ ಸಾಧನೆಗಳನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಮಾನ್ಯ ಹಣಕಾಸಿನ ಸಚಿವರ ಭಾಷಣದ ಪ್ರತಿಯೊಂದು ಪುಟವನ್ನು ತಿರುವಿ ನೋಡಿದಾಗ, ಪ್ರತಿಯೊಂದು ಪುಟದಲ್ಲೂ ಅವರು ಕೊಟ್ಟಿರುವ ಭೋಧನೆ ಬಹಳ ಆಕರ್ಷಣೆಯ ವಾಗಿ ಕಾಣುತ್ತದೆ. ಅವರು ಮಾಡಿರುವ ಆವರ ಭಾಷಣವನ್ನು ನೋಡಿದಾಗ ಅದು ಆಯವ್ಯಯ ವನ್ನು ಪ್ರತಿಧ್ವನಿಸುವಂತಿರಬೇಕು, ಆದರೆ ಆಯವ್ಯಯದ ಭಾಷಣವನ್ನು ನೋಡಿದಾಗ ನನ್ನ ಮನಸ್ಸಿಗೆ

ಬಂದದ್ದು ಏನೆಂದರೆ. ಈ ಆಯುವ್ಯಯದ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ನಮ್ಮಲ್ಲಿ ಹಿಂದೂ ಸಂಸ್ಕೃತಿಯಲ್ಲಿ ''ಧನವನ್ನು ಲಕ್ಷ್ಮಿ'' ಎಂದು ಕರೆಯುತ್ತೇವೆ. ಆದರೆ ನಮ್ಮ ಶ್ರೀ ಎಸ್. ಎಂ. ಯಾಹ್ಯಾ ರವರು ಮಂಡಿಸಿರತಕ್ಕ ಈ ಲಕ್ಷ್ಮಿ ನಿರ್ಜೀವ, ನಿರಾಭರಣ ಸುಂದರಿ—''Lifeless, Beautiful image'' ಜೀವ ರಹಿತ ಮೂರ್ತಿ ಈ ಆಯುವ್ಯಯದ ವಿಷಯದಲ್ಲಿ ಹೇಳುವುದಾದರೆ ಅದನ್ನು ಹೇಗೆ ಮಂಡಿಸುತ್ತಾರೆ, ಹೇಗೆ ತಯಾರಾಗುತ್ತದೆ ಎನ್ನುವುದಕ್ಕೆ ಒಂದು ಮಾತನ್ನು ಹೇಳ ಬಯಸುತ್ತೇನೆ. ಆಯ ಮತ್ತು ವ್ಯಯ ಎಂದರೆ ದೇಶಕ್ಕೆ ಬರತಕ್ಕ ಉತ್ಪನ್ನ ಮತ್ತು ನಾವು ವ್ಯಯ ಮಾಡತಕ್ಕ ಸಾಮರ್ಥ್ಯ ಈ ಎರಡನ್ನೂ ಸಮನ್ವಯಗೊಳಿಸಿ ಮಾಡತಕ್ಕ ಕಾರ್ಯವಾಗಿದೆ. ಸಂಪತ್ತು ಎಂದರೆ ಯಾವುದು ? ಸಂಪತ್ತಿನ ಮೂಲ ಯಾವುದು ಎಂದರೆ ಅದು ಮಾನವನಿಂದ ಅಲ್ಲ, ಸ್ವಾಭಾವಿಕ ವಾಗಿಯೇ ಸೃಷ್ಟಿಯಾದಂಥ ಸಂಪತ್ತು ನಮಗೆ ಲಭ್ಯವಾಗಿದೆ ಅದನ್ನು ಮನುಷ್ಯ ಪಡೆದುಕೊಳ್ಳ ಬೇಕಾದರೆ ೫ ಮೂಲಗಳಿಂದ ಪಡೆಯಬಹುದಾಗಿದೆ... ಅದು ಯಾವುದೆಂದರೆ ಪೃಥ್ವಿ, ಅಪ್ಪು, ತೇಜಸ್ಸು, ವಾಯು ಮತ್ತು ಆಕಾಶ ಈ ೫ ಸಂಪನ್ಮೂಲಗಳಿಂದ ಸಂಪತ್ತುಗಳನ್ನು ನಾವು ಹೊರತೆಗೆಯ ಬೇಕಾಗಿದ್ದರೆ, ವ್ಯಯ ಮಾಡಬೇಕಾದರೆ ನಮ್ಮಲ್ಲಿ ನಾಲ್ಕು ಶಕ್ತಿಗಳಿವೆ. ಅದು ಮಾನವನ ದೇಹ ಶಕ್ತಿ, ಮಾನವನ ಬುದ್ಧಿ ಶಕ್ತಿ, ಮಾನವನ ಆತ್ಮ ಶಕ್ತಿ ಮತ್ತು ಮಾನವನ ಮಾನಸಿಕ ಶಕ್ತಿ ಈ ನಾಲ್ಕು ಶಕ್ತಿ ಗಳಿಂದ ಪಂಚಭೂತಗಳನ್ನು ಸಮನ್ವಯಗೊಳಿಸಿ ನಾವು ಸಂಪತ್ತನ್ನು ಉತ್ಪಾದನೆ ಮಾಡಿ ವ್ಯಯ ಮಾಡ ಬೇಕಾಗಿದೆ. ಈ ಆಯುವ್ಯಯವನ್ನು ಸೃಷ್ಟಿ ಮಾಡಿದಾಗ ಅದರ ಕಾರ್ಯವನ್ನು ಮಾಡುವಾಗ ಅದನ್ನು ಹೇಗೆ ಮಾಡಿದ್ದಾನೆ, ಮನುಷ್ಯನಲ್ಲಿರತಕ್ಕ ತೇಜಸ್ಸ್ ಶಕ್ತಿಯನ್ನು, ಪಂಚಭೂತ ಶಕ್ತಿಗಳನ್ನು ಹೇಗೆ ಸಮನ್ವಯಗೊಳಿಸಿದ್ದಾನೆ ಎನ್ನುವುದನ್ನು ನೋಡಿದಾಗ, ಈ ಆಯುವ್ಯಯದಲ್ಲಿ ಯಾವುದೇ ಒಂದು ಶಕ್ತಿಯನ್ನು ವ್ಯಯಗೊಳಿಸಲು ಗಮನವನ್ನು ಹರಿಸಿಲ್ಲ ಎಂಬುದು ಗೊತ್ತಾಗುತ್ತದೆ. ಹಿಂದೆ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡೇ ಆಗಿನ ಕೇಂದ್ರ ಸರ್ಕಾರದ ಹಣಕಾಸಿನ ಸಚಿವರಾಗಿದ್ದ ಶ್ರೀಮಾನ್ ಸುಬ್ರಮಣ್ಯಂರವರು ಒಂದು ಮಾತನ್ನು ಹೇಳಿದ್ದಾರೆ...ಅದು ಈ ರೀತಿಯಾಗಿದೆ.

> ''To put it succinctly what we must aim is not just the improvement in the yield per unit of land as a new crop or cropping up the pool progressively made what is called for us is something more comprehensive and fundamental ; a systematic scientific and integrated use of all our natural resources as as part of our process enabling every person who engages himself in productive social and useful occupation to earn an income that would meet at least his basic-minimum needs.''

ಹೀಗೆ ಎಲ್ಲಾ ಶಕ್ತಿಗಳನ್ನು ಸಮನ್ವಯಗೊಳಿಸಿ ಈ ಒಂದು ಭೂ ಶಕ್ತಿಯಲ್ಲಿರತಕ್ಕ ಸಂಪತ್ತೆನ್ನೆಲ್ಲಾ ತೆಗೆಯುವುದಕ್ಕೆ ಮಾಡಿದ್ದಾದರೂ ಏನು ? ಏನು ಕಾರ್ಯ ಮಾಡಿದ್ದೀರಿ ? ಏನೂ ಮಾಡಿಲ್ಲ, ನಿಮ್ಮ ಆಯುವ್ಯಯವನ್ನು ನನ್ನ ಒಂದು ಶಬ್ದದಲ್ಲಿ ಕರೆಯುವುದಾದರೆ, Black devise Budget ಎಂದರೆ ಕಾಳಾಯುಕ್ತಿ ನಾಮ ಸಂವತ್ಸರ ಬಜೆಟ್ ಎಂದು ಹೆಸರು ಅಷ್ಟೇ.

ಅದಕ್ಕೆ ವಿಪರೀತ ಅರ್ಥ ಕೊಡಬೇಕಾಗಿಲ್ಲ, ಕಾಳಾಯುಕ್ತಿ ಸಂವತ್ಸರದ ಆಯುವ್ಯಯ ಎಂದು ಅಷ್ಟೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇದುವರೆಗೆ ಏನು ಸಾಧನೆ ಮಾಡಿದ್ದಾರೆಂಬುವನ್ನು ಮಾನ್ಯ ಮಂತ್ರಿಗಳ ಭಾಷಣದಲ್ಲಿ ನೋಡಿದರೆ ಸಾಧನೆಗಿಂತ ಘೋಷಣೆಗಳೇ ಜಾಸ್ತಿಯಾಗಿವೆ. ನಮ್ಮ ಈ ವರ್ಷದ ಆಯುವ್ಯಯದ ಅಂದಾಜಿನ ಲೆಕ್ಕವನ್ನು ನಾನು ಸಭೆಯ ಗಮನಕ್ಕೆ ತರಬಯಸುತ್ತೇನೆ. ೧೯೭೨-೭೩ ರಿಂದ ೧೯೭೭-೭೮ರವರೆಗೆ ಏನು ಸಾಧನೆ ಮಾಡಿದ್ದಾರೆಂಬುದನ್ನು ಅವರ ಅಂಕಿ ಅಂಶಗಳ ಆಧಾರದ ಮೇಲೆ ಖಂಡನೆ ಮಾಡಬೇಕಾಗಿದೆ. ೧೯೭೨—೭೩ ಗರೀಬಿ ಹಠಾವೋ ಘೋಷಣೆ ಮಾಡಿ ದಂತಹ ಸಂವತ್ಸರ. ಆ ವರ್ಷ ಎಷ್ಟರಮಟ್ಟಿಗೆ ಗರೀಬಿ ಹಠಾವೋ ಆಗಿದೆ ಎಂದರೆ, ಅಧಿಕಾರಿಗಳ ಮತ್ತು ನೌಕರರ ಸಂಬಳ ೧೯೭೨—೭೩ರಲ್ಲಿ ೫೧೭೪ ಲಕ್ಷ ಇದ್ದುದು ೧೯೭೭—೭೮ರಲ್ಲಿ ೧೯೪೨೭ ಲಕ್ಷ ರೂಪಾಯಿ ಆಯಿತು. ಹೀಗೆ ಒಂದಕ್ಕೆ ಎರಡರಷ್ಟು ಆಯಿತು. ಅದಕ್ಕೆ ೭೨—೭೩ರಲ್ಲಿ ೪೧೩೫.೨೪ ಲಕ್ಷ ರೂಪಾಯಿ ಬಡ್ಡಿ ಕೊಡುತ್ತಿದ್ದರೆ ಈಗ ೬೭೭೩.೧೦ ಲಕ್ಷ ರೂಪಾಯಿ ಕೊಡಲಾಗುತ್ತಿದೆ. ಆದರೆ

೭೨—೭೩ರಲ್ಲಿ ಸರ್ಕಾರದಿಂದ ವ್ಯವಸಾಯಕ್ಕೆ ಖರ್ಚು ಮಾಡುತ್ತಿದ್ದ ಹಣ ೮೨೨.೩೮ ಲಕ್ಷ ರೂಪಾಯಿ ಮತ್ತು ೭೭–೭೮ರಲ್ಲಿ ೨೧೧೪ ಲಕ್ಷ ರೂಪಾಯಿಗಳು, ಮೈನರ್ ಇರಿಗೇಷನ್ನಿಗೆ ೭೨—೭೩ರಲ್ಲಿ ಖರ್ಚು ಮಾಡುತ್ತಿದ್ದುದು ೭೧೭.೯೨ ಲಕ್ಷ ರೂಪಾಯಿ ಆದರೆ ೭೭—೭೮ರಲ್ಲಿ ೯೦೩ ಲಕ್ಷ ರೂಪಾಯಿ. ನಮ್ಮ ಪ್ರಾಂತ್ಯದಲ್ಲಿ ನೂರು ಎಕರೆ ಭೂಮಿಯಲ್ಲಿ ಇನ್ನೂ ೧೧ ಎಕರೆಗೆ ನೀರನ್ನು ಒದಗಿಸಲಿಕ್ಕೆ ಆಗಿಲ್ಲ, ಆದರೆ ನೆರೆ ರಾಜ್ಯಗಳು ೩೫—೪೦ ಎಕರೆಗೆ ನೀರನ್ನು ಒದಗಿಸುತ್ತಿವೆ. ನಮ್ಮ ರಾಜ್ಯದಲ್ಲಿ ಮೈನರ್ ಇರಿಗೇಷನ್ನಿಗಾಗಿ ೬ ವರ್ಷದಲ್ಲಿ ಖರ್ಚು ಮಾಡಿದ ಹಣ ಕೇವಲ ೧೮೦ ಕೋಟಿ ರೂಪಾಯಿಗಳು. ೭೨—೭೩ರಲ್ಲಿ ಇರಿಗೇಷನ್ನಿಗಾಗಿ ೧೭೭೮.೩೬ ಲಕ್ಷ ರೂಪಾಯಿ ಖರ್ಚು ಮಾಡಿದ್ದರೆ ೭೭–೭೮ರಲ್ಲಿ ೩೧೨೮ ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ. ಆದರೆ ಆಡ್ಮಿನಿಸ್ಟ್ರೇಟೀವ್ ಸರ್ವಿಸಸ್ಸಿಗೆ ಖರ್ಚು ಮಾಡಿರುವ ಹಣವನ್ನು ಗಮನಸರ್ಿಡಬೇಕಾಗಿದೆ ; ಏಕೆಂದರೆ ಆ ಬಾಬಿಗೆ ೭೨—೭೩ರಲ್ಲಿ ೧೦೪೪ ೯೨ ಲಕ್ಷ ರೂಪಾಯಿ ಖರ್ಚು ಮಾಡಿದ್ದರೆ ೭೭—೭೮ರಲ್ಲಿ ೮೯೯೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದರ ಅರ್ಥ ಏನು ? ಹೀಗೆ ಹಣವನ್ನು ಯಾವ ಮಾರ್ಗದಲ್ಲಿ ಪ್ರವಹಿಸುತ್ತಿದ್ದಾರೆಂಬುದನ್ನು ಗಮನಿಸಬೇಕಾಗಿದೆ. ಉದ್ಯೋಗಗಳನ್ನು ಹೆಚ್ಚು ಮಾಡುತ್ತಿರುವುದರಿಂದ ಹಣ ಹೆಚ್ಚಿಗೆ ಬೇಕಾಗುತ್ತಿದೆ ಎಂದು ಹೇಳಬಹುದು. ಆದರೆ ಇದು ಹೊಸ ಉದ್ಯೋಗಕ್ಕೋಸ್ಕರ ಖರ್ಚು ಮಾಡುತ್ತಿರುವುದಲ್ಲ. ಕೇವಲ ಸಂಬಳವನ್ನು ಹೆಚ್ಚಿಸುವುದಕ್ಕೋಸ್ಕರ ಮಾಡುತ್ತಿರುವುದು. ಹೀಗಾಗಿ, ಒಂದಕ್ಕೆ ಎರಡರಷ್ಟಾಗುತ್ತಿದೆ. ಈ ರೀತಿ ಆಗುತ್ತಿರುವುದನ್ನು ಎಲ್ಲ ಇಲಾಖೆಗಳಲ್ಲೂ ಗಮನಿಸಬಹುದು. ಮಂಡ್ಯ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಅರಣ್ಯ ಸಂಪತ್ತು ದಾಮಾಷ ಪ್ರಮಾಣದಲ್ಲಿ ಇರಬೇಕಾದಷ್ಟು ಇಲ್ಲ ಎಂದು ಹೇಳಿದರೆ ಅದಕ್ಕೆ ದೊಡ್ಡ ಅರಣ್ಯ ಇಲಾಖೆಯನ್ನು ಪ್ರಾರಂಭ ಮಾಡುತ್ತೇವೆ, ೧೦೬ ಮಂದಿ ಅಧಿಕಾರಿಗಳನ್ನು ನೇಮಿಸುತ್ತೇವೆಂದರೆ, ಅದು ಏನು ಮರವೇ ? ೧೦ ವರ್ಷದ ನಂತರ ಕಡಿಯಬಹುದೇ ? ಇದು ನೀವು ಮಾಡತಕ್ಕ ಸಾಧನೆ. ಇಡೀ ಭಾರತದ ೩೦ ವರ್ಷದ ಇತಿಹಾಸದಲ್ಲಿ ಕಾಣುತ್ತಿರುವಂತೆ, ಯಾವುದೇ ಒಂದು ಯೋಜನೆಯನ್ನು ಪ್ರಾರಂಭ ಮಾಡಿದರೂ ಕೂಡ ಅದು ಪ್ರಾರಂಭವಾಗುವ ಮುನ್ನವೇ ಅಲ್ಲಿ ಮಾಡತಕ್ಕದ್ದು ಏನೆಂದರೆ ಅಧಿಕಾರಿಗಳಿಗೆ ಕ್ವಾರ್ಟರ್ಸ್ ಕಟ್ಟಿಕೊಡುವುದು, ಪಂಚತಾರೆ ಹೋಟೆಲ್‌ಗಳ ನಿರ್ಮಾಣ, ಮಕ್ಕಳ ಉದ್ಯಾನವನವನ್ನು ಮಾಡುವುದು ; ಹೀಗೆ ಇತ್ಯಾದಿಗಳನ್ನು ಮಾಡತಕ್ಕಂತಹ ಪರಿಸ್ಥಿತಿ ಉಂಟಾಗಿದೆ. ಭಿಲೈ ಉಕ್ಕಿನ ಕಾರ್ಖಾನೆಯನ್ನು ಪ್ರಾರಂಭಿಸಲು ವಿದೇಶೀಯರು ಆರ್ಥಿಕ ನೆರವನ್ನು ಒದಗಿಸಿದ್ದ ಕಾಲದಲ್ಲಿ ಅಲ್ಲಿನ ತಜ್ಞರು, ಭಾರತ ದೇಶದವರು ಇದೇ ರೀತಿ ಹಣವನ್ನು ವೆಚ್ಚ ಮಾಡಿದರೆ ಯಾವ ಯೋಜನೆಯನ್ನು ಪೂರ್ಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದೂ ಹಾಗೂ ನಿಮ್ಮಿಂದ ಅದನ್ನು ಕಾರ್ಯಗತ ಮಾಡುವುದಕ್ಕೆ ಶಕ್ಯವಿಲ್ಲ ಎಂಬ ಮಾತನ್ನು ಕೂಡ ಹೇಳಿದ್ದಾರೆ. ಈ ದೃಷ್ಟಿಯಿಂದ ನಾವು ನೋಡಿದಾಗ ಯಾವ ಕಾರ್ಯಕ್ಕೆ ಹೆಚ್ಚು ಹಣವನ್ನು ಒದಗಿಸಬೇಕಾಗಿತ್ತೋ ಅದಕ್ಕೆ ಗಮನ ಕೊಡುತ್ತಿಲ್ಲವೆಂಬುದು ಇದರಿಂದ ವ್ಯಕ್ತವಾಗುತ್ತದೆ. ಇವತ್ತು ಹಣ ಎಲ್ಲಿಂದ ಬರುತ್ತದೆ, ಹೇಗೆ ಖರ್ಚು ಮಾಡಬೇಕೆಂಬುದನ್ನು ವಿಚಾರ ಮಾಡಿ ಮಾಡಬೇಕು. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುವ ಜನ ೨ ಕೋಟಿ ೨೮ ಲಕ್ಷಕ್ಕಿಂತ ಹೆಚ್ಚು ಮಂದಿ ಇದ್ದಾರೆ ನಗರಗಳಲ್ಲಿ ವಾಸಿಸತಕ್ಕವರು ೭೮ ಲಕ್ಷದ ೨೮ ಸಾವಿರ ಮಂದಿ ಇದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ವ್ಯವಸಾಯವನ್ನು ಅವಲಂಬಿಸಿರುವವರು ೩೯ ಲಕ್ಷ ಚಿಲ್ಲರೆ ಇದ್ದಾರೆ, ವ್ಯವಸಾಯದ ಕಾರ್ಮಿಕರು ೨೫ ಲಕ್ಷ ಚಿಲ್ಲರೆ, ಇದ್ದಾರೆ ಕೋಳಿ ಸಾಕಣೆ ಮತ್ತಿತರ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಜೀವಿಸುವ ಜನ ೩,೭೮,೩೦೦ ಮಂದಿ ಇದ್ದಾರೆ. ಆದರೆ ಇವರುಗಳಿಗೆ ಎಷ್ಟು ಹಣವನ್ನು ವಿನಿಯೋಗ ಮಾಡಿದ್ದೀರೆಂಬುದು ಕೂಡ ಮುಖ್ಯವಾಗಿ ಗಮನಿಸಬೇಕಾದ ಅಂಶ. ನಮ್ಮ ದೇಶದಲ್ಲಿ, ಈಗ ಕೊಟ್ಟಿರತಕ್ಕ ವರದಿ ಪ್ರಕಾರ ೯೬೬.೬ ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪತ್ತಿಯಾಗುತ್ತಿದೆ. ಆದರೆ ಈಗತಾನೇ ನಾನು ಹೇಳಿದ ಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯವನ್ನು ಅವಲಂಬಿಸಿಕೊಂಡಿರತಕ್ಕ ಜನರು ೬೬.೭೧ ಪರ್ಸೆಂಟ್ ಇದ್ದಾರೆ ಮತ್ತು ಕಾರ್ಮಿಕರು ೩೩.೨೯ ಪರ್ಸೆಂಟ್ ಇದ್ದಾರೆ. ಈ ಸಂದರ್ಭದಲ್ಲಿ ನಮ್ಮಲ್ಲಿ ಉತ್ಪತ್ತಿಯಾಗತಕ್ಕ ವಿದ್ಯುಚ್ಛಕ್ತಿಯನ್ನು ಯಾವ ಕಡೆಗೆ ನಾವು ಹರಿಸುತ್ತಿದ್ದೇವೆ ಎಂಬುದನ್ನು ಗಮನಿಸಬೇಕು. ೧೯೭೩—೭೪ರಲ್ಲಿ ಡೊಮೆಸ್ಟಿಕ್ ಪರ್ಪಸ್ಸಿಗೆ ಸ್ವಲ್ಪ ಹೆಚ್ಚಾಗಿರಬಹುದು. ಡೊಮೆಸ್ಟಿಕ್ ಪರ್ಪಸ್ಸಿಗೆ ೧೬೪೨೮ ಕಿಲೋವ್ಯಾಟ್ಸ್, ಕಮರ್ಷಿಯಲ್ ಲೈನಿಗೆ ೮೫೯೪ ಕಿಲೋವ್ಯಾಟ್ಸ್, ಕೈಗಾರಿಕೋದ್ಯಮಕ್ಕೆ ಹೈ ಪವರ್ ಓಲ್ಟೇಜ್ ೨೯೭೩೧ ಕಿಲೋವ್ಯಾಟ್ಸ್ ಮತ್ತು ಲೋ ಪವರ್ ಓಲ್ಟೇಜ್ ೪೭೩೦೦೦ ಕಿಲೋವ್ಯಾಟ್ಸ್. ಸುಮಾರು ೮ ಲಕ್ಷ ಕಿಲೋವ್ಯಾಟ್ ವಿದ್ಯುಚ್ಛಕ್ತಿಯನ್ನು ನಾವು ಏತಕ್ಕೆ ಉಪಯೋಗ ಮಾಡುತ್ತಿದ್ದೇವೆಂದರೆ ೩೩.೨೯ ಪರ್ಸೆಂಟ್ ಮಂದಿ ಕಾರ್ಮಿಕರ ಹೊಟ್ಟೆ ತುಂಬಿಸುವುದಕ್ಕೋಸ್ಕರ ಮತ್ತು

ಜನಗಳಿಗೆ ಲಿಪ್ಸ್ಟಿಕ್, ಫೇಸ್ ಪೌಡರ್, ಸ್ಟ್ರೆಚಲಾನ್ ನೈಲಾನ್ ಮತ್ತಿತರ ಬಟ್ಟೆಗಳನ್ನು ತಯಾರಿಸುವ ಗಿರಣಿಗಳಿಗೆ ಒದಗಿಸುತ್ತಿದ್ದೇವೆ. ಆದರೆ ನಮಗೆ ಊಟಲು ಅನ್ನವನ್ನು ಒದಗಿಸತಕ್ಕಂತಹ ರೈತರಿಗೆ ಕೊಡತಕ್ಕದ್ದು ೬೧೯೭೪೬ ಕಿಲೋವ್ಯಾಟ್ಸ್. ೨೫ ಸಾವಿರ ಹಳ್ಳಿಗಳಿರತಕ್ಕ ಈ ನಮ್ಮ ದೇಶದಲ್ಲಿ ಈಗಲೂ ಕೂಡ ೧೭೮೫೦ ಗ್ರಾಮಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುತ್ತಿದೆ. ಇದು ನಾವು ಮಾಡುತ್ತಿಗತಕ್ಕ ಮಹತ್ತರವಾದ ಕೆಲಸ: ಇನ್ನು ಗ್ರಾಮಾಂತರ ಪ್ರದೇಶಗಳನ್ನು ಉದ್ಧಾರ ಮಾಡುತ್ತಿದ್ದೇವೆಂದು ಬಹಳಷ್ಟು ಬಗೆಬಗೆಯಾಗಿ ಹೇಳುತ್ತಿದ್ದಾರೆ. ಅದರ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಋಣ ಪರಿಹಾರ ಕಾಯಿದೆ ಎಂದು ಒಂದು ಕಾಯಿದೆಯನ್ನು ತಂದಿದ್ದೀರಿ. ಋಣ ಪರಿಹಾರ ಎಂಬ ಶಬ್ದದ ಅರ್ಥವೇನೆಂದರೆ ಮನುಷ್ಯನನ್ನು ಋಣ ನಿಂದ ಮುಕ್ತನನ್ನಾಗಿ ಮಾಡುವುದು ಎಂದು ; ಅದು ಯಾವುದೇ ಋಣವಾಗಿರಲಿ. ಆದರೆ ನೀವು ಮಾಡಿರುವುದು ಒಬ್ಬ ಬಡ ರೈತ ಇನ್ನೊಬ್ಬನಿಂದ ಹಣವನ್ನು ಪಡೆದಿದ್ದರೆ ಅದರಿಂದ ಅವನನ್ನು ಮುಕ್ತನನ್ನಾಗಿ ಮಾಡುವುದು. ಇದೇ ರೀತಿ ಅವನು ಸರ್ಕಾರದಿಂದಾಗಲೀ, ಬ್ಯಾಂಕಿನಿಂದಾಗಲೀ, ಅಥವಾ ಸೊಸೈಟಿಯಿಂದಾಗಲೀ ಸಾಲವನ್ನು ತೆಗೆದುಕೊಂಡಿದ್ದರೆ ಅವನನ್ನು ಏಕೆ ಆ ಋಣದಿಂದ ಮುಕ್ತನನ್ನಾಗಿ ಮಾಡಬಾರದು ಎಂದು ಕೇಳುತ್ತೇನೆ. ತಾನು ಇನ್ನೊಬ್ಬನಿಗೆ ಕೊಟ್ಟ ಋಣದಿಂದಾಗಲೀ, ಅಥವಾ ಇನ್ನೊಬ್ಬ ತನಗೆ ಕೊಟ್ಟ ಋಣದಿಂದಾಗಲೀ ಮುಕ್ತನನ್ನಾಗಿಸುತ್ತೀರೇ ವಿನಹ ಸರ್ಕಾರದಿಂದಾಗಲೀ ಅಥವಾ ಬ್ಯಾಂಕಿನಿಂದಾಗಲೀ ಕೊಟ್ಟಿದ್ದರಿಂದ ಮುಕ್ತನನ್ನಾಗಿಸಲು ತಯಾರಿಲ್ಲ. ಏಕೆ ಅದನ್ನು ಮಜಾ ಮಾಡಬಾರದು ? ಬಡಜನತೆಗೆ ಉಪಕಾರ ಮಾಡಬೇಕೆಂಬ ಮನಸ್ಸಿರುವವರು ಏಕೆ ಈ ರೀತಿ ಮಾಡಬಾರದು ಎಂದು ಕೇಳುತ್ತೇನೆ.

ಇವತ್ತು ಒಂದು ವಿಷಯವನ್ನು ತಮ್ಮ ಗಮನದಲ್ಲಿಡುವುದಕ್ಕೆ ಪ್ರಯತ್ನ ಮಾಡುತ್ತೇನೆ, ಏನೆಂದರೆ ಬಹುಶಃ ತಮ್ಮಲ್ಲಿರತಕ್ಕಂಥಾದದ್ದರಲ್ಲಿ ಬ್ಯಾಂಕಿನ ಮತ್ತು ಸೊಸೈಟಿಯ ಹಣವನ್ನು ತಾವೇ ತುಂಬಿ ಸರ್ಕಾರದವರು ಕೊಟ್ಟಿರತಕ್ಕಂಥ ಸಾಲವನ್ನು ರದ್ದು ಮಾಡಿದ್ದರೆ ತಮಗೆ ೧೦ ಕೋಟಿ ರೂಪಾಯಿಗಳು ಖರ್ಚಾಗುತ್ತಿತ್ತು ಅಷ್ಟೆ. ಬಡರೈತರ ಸಾಲಕ್ಕಾಗಿ ೧೦ ಕೋಟಿ ರೂಪಾಯಿಗಳನ್ನು ತಾವು ಖರ್ಚು ಮಾಡಿದ್ದರೆ ಅದೇನೂ ದೊಡ್ಡ ಹಣ ಆಗುತ್ತಾ ಇರಲಿಲ್ಲ. ತಮಗೆ ಇವತ್ತು ಒಂದು ಮಾತನ್ನು ಹೇಳುತ್ತೇನೆ, ಈ ವರ್ಷದ ಅವಧಿಯೊಳಗೆ ನಮ್ಮ ಸರ್ಕಾರ ಬಹಳ ಉಪಕಾರ ಬುದ್ಧಿಯಿಂದ ಸರ್ಕಾರಿ ನೌಕರರಿಗೆ ಹಾರ್ಡ್‌ಷಿಪ್ ಅಲೋಯೆನ್ಸ್ ಕೊಟ್ಟಿದ್ದಾರೆ. ತಾವು ಅದನ್ನು ಹಾರ್ಡ್‌ಷಿಪ್ ಅಲೋಯೆನ್ಸ್ ಎಂದು ಕರೆಯುತ್ತೀರಿ. ನಾನು ಅದನ್ನು ಹುಡ್‌ವಿಂಕ್ಸ್ ಅಲೋಯೆನ್ಸ್ ಎಂದು ಕರೆಯುತ್ತೇನೆ. ಈ ಒಂದು ಹುಡ್‌ವಿಂಕ್ಸ್ ಅಲೋಯೆನ್ಸ್ ಕೊಟ್ಟು ಸರ್ಕಾರಿ ನೌಕರರನ್ನು ಮರಳು ಮಾಡ ತ್ತಿದ್ದೀರಿ. ಅದಕ್ಕಾಗಿ ೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. For the administrative machinery or for the bureaucracy, you are spending Rs. 20 Crores. Are you not prepared to spend only Rs. 10 Crores for the poor people ? ಇದನ್ನು ತಾವು ಮಾಡಿದ್ದೀರಾ ? ಇಲ್ಲ, ಇದನ್ನು ಮಾಡುವುದಕ್ಕೆ ತಾವು ತಯಾರು ಇಲ್ಲ. ಗ್ರಾಮಾಂತರ ಜನಗಳಿಗೆ ಕುಡಿಯುವ ನೀರಿನ ಭಾವಿಗಳನ್ನು ತೋಡುವುದಕ್ಕೆ ೧.೪೦ ಕೋಟಿ ರೂಪಾಯಿಗಳನ್ನು ಮತ್ತು ಮಕ್ಕಳು ಹೆಚ್ಚಾಗದಂತೆ ಮಾಡಲು ನಿರೋಧ್ ತಯಾರಿಕೆಗೆ ೯.೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಇದು ಫ್ಯಾಮಿಲಿ ಪ್ಲಾನಿಂಗ್‌ಗೋಸ್ಕರ ಖರ್ಚು ಮಾಡತಕ್ಕಂಥಾದ್ದಾಗಿದೆ. ಗ್ರಾಮಾಂತರ ಜನತೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಅವರ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಏನೆಂದರೆ ನಾವು ಗ್ರಾಮಾಂತರ ಜನತೆಗೆ ಗೃಹನಿರ್ಮಾಣ ಕಾರ್ಯಕ್ಕಾಗಿ ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆಂದು ಹೇಳಿದ್ದಾರೆ. ನಾನು ಈ ನಗರಗಳಿಗಾಗಿ ಎಷ್ಟು ಹಣ ಖರ್ಚಾಗುತ್ತಿದೆ ಎಂದು ಕೇಳುತ್ತೇನೆ. ಈ ಬಗ್ಗೆ ಹೇಳಬೇಕಾದರೆ ಇದೊಂದಕ್ಕೆ ೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇವತ್ತಿನದಿವಸ ಬಹುತೇಕ ಜನ ಗ್ರಾಮಾಂತರಗಳಲ್ಲಿ ವಾಸ ಮಾಡುತ್ತಿದ್ದಾರೆ. ಅಂತಹ ಜನಗಳಿಗೆ ಇವತ್ತಿನದಿವಸ ಕಟ್ಟಿಕೊಡತಕ್ಕಂಥ ಮನೆಯ ಬೆಲೆ ಕೇವಲ ೨೫೦ ರೂಪಾಯಿಗಳಿಂದು ಹಿಡಿದು ೨೫೦೦ ರೂಪಾಯಿಗಳವರೆಗೆ ಮಾತ್ರ. ಹಾಗೆಯೇ ಬೆಂಗಳೂರು ನಗರದ ಕೋರಮಂಗಲ ಮತ್ತು ಸಿದ್ದಾಪುರ ಎಕ್ಸ್‌ಟೆನ್‌ಷನ್‌ನಲ್ಲಿ ಕಟ್ಟತಕ್ಕಂಥ ಮನೆಯ ಬೆಲೆ ೨೫ ಸಾವಿರ ರೂಪಾಯಿಗಳಿಂದ ೨½ ಲಕ್ಷ ರೂಪಾಯಿಗಳಾಗುತ್ತದೆ, ಇದು ಬಡಜನರಿಗಾಗಿ ಒದಗಿಸತಕ್ಕಂಥ ಮನೆಯೇ ? ಈ ೨½ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿದಂತ ಮನೆಗಳಲ್ಲಿ ಗ್ರಾಮದ ರೈತರು ಬಂದು ಇಲ್ಲಿ ವಾಸ

ಮಾಡುವುದಕ್ಕೆ ಅಪೇಕ್ಷೆ ಮಾಡಿದ್ದಾರೆಯೋ ? ಇಲ್ಲ ಇದನ್ನು ತಾವು ಗಮನಿಸಬೇಕಾದ್ದು ಅತಿ ಮುಖ್ಯ. ಈ ದೇಶದ ಬೆನ್ನು ಮೂಳೆಯಾಗಿರತಕ್ಕಂಥ ಗ್ರಾಮಾಂತರ ಜನರ ಅಭಿವೃದ್ಧಿಗಾಗಿ ವಿನಿಯೋಗಿಸುವಂಥ ಯಾವುದೇ ಮೊತ್ತದ ದಾಮಾಷ ಅಂಶ ಅತ್ಯಲ್ಪ ಎಂಬುದನ್ನೂ ಸಹ ತಾವು ಗಮನಿಸಬೇಕಾಗಿದೆ. ಇನ್ನೂ ನಾನು ಮೊದಲೇ ಹೇಳಿದಂತೆ ದೇಶದ ಸಂಪತ್ತಿನ ಮೂಲಾಧಾರ ಭೂಮಿ. ಈ ಭೂಮಿಯ ಬಗೆಗೆ ನಮ್ಮ ನಿಲುವು ಏನೆಂದರೆ ಈ ಭೂಮಿಯು ದೇಶದ ಒಂದು ದೊಡ್ಡ ಸಂಪತ್ತು. ಈ ಬಗ್ಗೆ ನಮ್ಮ ಸರ್ಕಾರದ ನಿಲುವು ಏನೆಂದರೆ ಭೂಮಿ, ಎನೆಂದರೆ ಉಳುವು ಭೂಮಿ ಅಷ್ಟೆ ಆಗಿದೆ. ಆದ್ದರಿಂದ ಈ ಭೂ ಸಂಪತ್ತಿನ ಬಗೆಗೆ ಯಾವುದೇ ನಮ್ಮ ಯೋಜನೆ ಇನ್ನೂ ಕಾರ್ಯಗತವಾಗಿಲ್ಲ. ನಮ್ಮ ಸರ್ಕಾರ ಅದರ ಬಗ್ಗೆ ಗಮನ ಹರಿಸಿಲ್ಲ. ಈ ಭೂಮಿಯಿಂದ ನಮಗೆ ಆದಾಯ ಇದೆ. ಈ ಭೂ ಕಂದಾಯದಿಂದ ಬರತಕ್ಕಂಥ ಆದಾಯ ೬೦೦ ಲಕ್ಷ ರೂಪಾಯಿಗಳಾಗಿದೆ. ಆದರೆ ಇದರ ವಸೂಲಾತಿಗಾಗಿ ಮಾಡುವ ಖರ್ಚು ೮೨೭ ಲಕ್ಷ ರೂಪಾಯಿಗಳಾಗಿದೆ. ಈ ಭೂಮಿಯ ಬಗ್ಗೆ ಇನ್ನೊಂದು ಪ್ರಾಮುಖ್ಯವಾದ ಅಂಶ ಏನು ಹೇಳಿದ್ದಾರೆ ಎಂದರೆ ಹಳ್ಳಿಗಾಡುಗಳಲ್ಲಿ ಈ ಭೂಸುಧಾರಣಾ ಕಾಯಿದೆಯನ್ನು ಜಾರಿಗೆ ತಂದಿದ್ದೇವೆ, ಸುಮಾರು ೪,೩೭,೫೫೫ ಹೆಕ್ಟೇರುಗಳಷ್ಟು ಭೂಮಿಯನ್ನು ಹಂಚಿದ್ದೇವೆಂದು ಅವರ ವಾರ್ಷಿಕ ವರದಿಯಲ್ಲಿ ಅಂಕಿಅಂಶ ಕೊಟ್ಟಿದ್ದಾರೆ. ಮತ್ತು ನಮಗೆ ೪೯,೬೦೯ ಹೆಕ್ಟೇರುಗಳಷ್ಟು ಹೆಚ್ಚುವರಿ ಭೂಮಿ ಸಿಕ್ಕಿದೆಯೆಂದು ಹೇಳಿದ್ದಾರೆ. ಈ ಒಂದು ಕೆಲಸ ಮಾಡುವುದಕ್ಕಾಗಿ ಖರ್ಚು ಮಾಡಿರುವ ಹಣ ಎಷ್ಟು ಗೊತ್ತೇ ? ಇದಕ್ಕಾಗಿ ೨ ಕೋಟಿ ೩೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಈ ರೀತಿ ನಾವು ಭೂ ಸುಧಾರಣೆಯನ್ನು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ನಾನು ಹೇಳುತ್ತೇನೆ ನಮ್ಮ ದೇಶದಲ್ಲಿ ಇನ್ನೂ ಸಂಪೂರ್ಣವಾಗಿ ಭೂ ಸುಧಾರಣೆ ಆಗಿಲ್ಲ. ನಮ್ಮ ದೇಶದಲ್ಲಿ ಇರತಕ್ಕಂಥದ್ದು ಭೂ ಸುಧಾರಣಾ ಶಾಸನವಲ್ಲ. ಅದು ಭೂಮಿ ವಿತರಣಾ ಶಾಸನವಾಗಿದೆ. ಈ ಮಾತನ್ನು ನಾನು ಹೇಳುವಾಗ ತಾವು ಈ ಭೂ ಸುಧಾರಣೆಗೂ, ಭೂ ವಿತರಣೆಗೂ ಇರತಕ್ಕಂಥ ವ್ಯತ್ಯಾಸವನ್ನು ಗಮನಿಸಬೇಕಾಗಿದೆ. ನಾವು ಭೂ ಸುಧಾರಣಾ ಶಾಸನವನ್ನು ಮಾಡುತ್ತಾ ಬಂದಿದ್ದೇವೆ. ಈಗ ಮತ್ತೆ ಅದಕ್ಕೆ ತಿದ್ದುಪಡಿ ಮಾಡುತ್ತೇವೆ. ಈ ಬಗ್ಗೆ ನಾನು ಹೇಳುವುದಾದರೆ ನಮ್ಮ ದೇಶದಲ್ಲಿ ಯಾರಾದರೂ ಭೂ ಶಾಸನ ಪರಿಣತರು ಇದ್ದರೆ ಅವರಿಂದ ಈ ನಮ್ಮ ಶಾಸನಸಭೆಯಲ್ಲಿ ಉತ್ಪನ್ನವಾಗತಕ್ಕಂಥ ಭೂಮಿಗೆ ಸಂಬಂಧಪಟ್ಟ ಶಾಸನಗಳಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡುವ ರೀತಿಯಲ್ಲಿ ಅವುಗಳಿಗೆ ಚಿಕಿತ್ಸೆ ಆಗಬೇಕಾಗಿದೆ. ಈ ಮಾತನ್ನು ನಾನು ಈವತ್ತು ಹೇಳತಕ್ಕಂಥದಲ್ಲ. ಈ ಭೂ ಸುಧಾರಣೆಯ ಬಗೆಗೆ ನಮ್ಮ ರಾಜ್ಯದೊಳಗೆ ಈ ವಿಧಾನಸೌಧದ ನಿರ್ಮಾಣ ಆಗುವುದಕ್ಕಿಂತ ಮುಂಚಿತವಾಗಿ ಈ ಭೂ ಸುಧಾರಣಾ ಕಾನೂನನ್ನು ರಚನೆ ಮಾಡುವುದಕ್ಕೋಸ್ಕರ ಅಂದಿನ ಕಂದಾಯ ಮಂತ್ರಿಯಾಗಿದ್ದ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಈ ರಾಜ್ಯದೊಳಗೆ ನಡೆದಂತ ಕಾಲದಲ್ಲಿ ಮತ್ತು ಹಳೆಯ ವಿಧಾನಸಭೆಯಲ್ಲಿ ಈ ಮಾತನ್ನು ಹೇಳಿದ್ದೇನೆ. ಭೂ ಸುಧಾರಣೆ ಬಗೆಗೆ ಶಾಸನ ಮಾಡುವ ಅಗತ್ಯ ಇಲ್ಲ, ಭೂಮಿ ಇಲ್ಲದವರಿಗೆ ಭೂಮಿಯನ್ನು ಕೊಡುವುದಕ್ಕೆ ಶಾಸನ ಇದ್ದೇ ಇದೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಹಿಂದೆ ಶ್ರೀ ಕೆಂಗಲ್ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಲಾಲ್‌ಭಾಗಿನ ಗಾಜಿನ ಮನೆಯಲ್ಲಿ ನಡೆದಂತ ಸಮಾರಂಭದಲ್ಲಿ ನಾನು ಒಬ್ಬ ವಕೀಲನಾಗಿ ಇದೇ ಮಾತನ್ನು ಹೇಳಿದ್ದೇನೆ ಇಂದೂ ಸಹ ಅದೇ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ, ಅದಕ್ಕೆ ಆಧಾರ ಇದೆ. ನಮ್ಮಲ್ಲಿ ಭೂಮಿ ಇಲ್ಲದವರಿಗೆ ಭೂಮಿಯನ್ನು ಕೊಡಬೇಕು. ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ ವ್ಯಾಪ್ತಿಯೊಳಗೆ ಎಲ್ಲೆಲ್ಲಿ ಹೆಚ್ಚುವರಿ ಜಮೀನು ಇದೆಯೋ ಅದನ್ನು ವಶಪಡಿಸಿಕೊಂಡು, ಅದಕ್ಕೆ ಒಂದು ಸೂಕ್ತವಾದ ಬೆಲೆಯನ್ನು ಕೊಟ್ಟು ಕೊಂಡು ಯಾವ ರೈತನಿಗೆ ಉಳುವುದಕ್ಕೆ ಭೂಮಿಯಿಲ್ಲವೋ ಅವನಿಗೆ ಭೂಮಿ ಹಂಚಿಕೆ ಮಾಡಬಹುದಾಗಿತ್ತು. ಆದರೆ ಇದನ್ನು ಮಾಡುವ ಪ್ರಯತ್ನ ಮಾಡಿಲ್ಲ. ಇದಕ್ಕೆ ಬದಲಾಗಿ ಹೊಸ ಹೊಸ ಶಾಸನಗಳನ್ನು ಮಾಡಿಕೊಂಡು ಹೆಚ್ಚು ಹಣವನ್ನು ವೆಚ್ಚ ಮಾಡುತ್ತಾ ಬರುತ್ತಿದ್ದಾರೆ. ಇನ್ನೊಂದು ಪ್ರಾಮುಖವಾದ ಅಂಶವೇನೆಂದರೆ ಈ ಶಾಸನಸಭೆಗೆ ೪೫೫೦ ಪುಟಗಳ ಸಮಗ್ರ ಬಜೆಟ್ ಗ್ರಂಥವನ್ನು ಒದಗಿಸಿದ್ದಾರೆ. ೬೨೫ ಕೋಟಿ ರೂಪಾಯಿಗಳನ್ನು ೩೬೫ ದಿನಗಳಲ್ಲಿ ಅನೇಕ ರೀತಿಯಲ್ಲಿ ಖರ್ಚು ಮಾಡುತ್ತಿದ್ದಾರೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನಮ್ಮ ಸರ್ಕಾರದವರು ಉಳುವವರಿಗೆ ಭೂಮಿ ಎನ್ನತಕ್ಕಂಥ ತತ್ವವನ್ನು ಅಳವಡಿಸಿಕೊಂಡಿದ್ದಾರೆ. ಅದು ಉಳುವವನಿಗೇ ಭೂಮಿ ಎಂದು ಇರಬೇಕಾಗಿತ್ತು ನನ್ನ ಪ್ರಕಾರ ಯಾವನಿಗೆ ಭೂಮಿಯನ್ನು ಉಳುವುದಕ್ಕೆ ಅಪೇಕ್ಷೆ ಇದೆ ಅಂತಹವನಿಗೆ ಭೂಮಿಯನ್ನು ಕೊಡಬೇಕು. ಆದರೆ ಉಳುವವರಿಗೆ ಭೂಮಿಯನ್ನು ಕೊಡಬೇಕು ಎಂದು ಹೇಳುವಾಗ ಯಾರಯಾರ ಜೇಬಿನಲ್ಲಿ ಹಣ

ಇದೆ ಅದನ್ನು ಹೊಡೆಯಿರಿ ಎಂದು ಹೇಳಿದಂತಾಯಿತು. It is a regular recognised robbery. ಈಗ ತಮ್ಮ ಗೊಂದು ಮಾತನ್ನು ಹೇಳಬೇಕೆಂದರೆ ನಮ್ಮ ದೇಶದಲ್ಲಿ ಭೂಮಿಗೇನೂ ಕೊರತೆ ಇಲ್ಲ. ಅದೆಲ್ಲಾ ಭೂ ಸುಧಾರಣಾ ಕಾಯಿದೆಯ ಅಡಿಯಲ್ಲಿ ಬರುತ್ತವೆ. ೧೯೭೬ನೇ ಇಸವಿಯ ತಮ್ಮ ವರದಿಯ ಪ್ರಕಾರ ೩,೧೭,೪೦೫ ಎಕರೆಗಳಷ್ಟು ಭೂಮಿ ಜನಗಳಿಗೆ ಹಂಚುವುದಕ್ಕಾಗಿ ಸರ್ಕಾರದವರ ವಶದಲ್ಲಿತ್ತು, ಅದರಲ್ಲಿ ಎಷ್ಟು ಎಕರೆ ಭೂಮಿಯನ್ನು ಹಂಚಿಕೆ ಮಾಡಿದ್ದೀರಿ ? ಹರಿಜನರಿಗೆ ಮತ್ತು ಗಿರಿಜನರಿಗೆ ೨೬,೧೧೬ ಎಕರೆ ಭೂಮಿ ಕೊಟ್ಟಿದ್ದೀರಿ. ರಾಜಕೀಯ ಸಂತ್ರಸ್ತರಿಗೆ ೩೧೬ ಎಕರೆ ಭೂಮಿ ಕೊಟ್ಟಿದ್ದೀರಿ. ನಿವೃತ್ತ ಸೈನಿಕರಿಗೆ ೨೪೨೬ ಎಕರೆಯಷ್ಟು ಭೂಮಿಯನ್ನು ಕೊಟ್ಟಿದ್ದೀರಿ ಮತ್ತು ಇತರರಿಗೆ ೨೩,೩೫೯ ಎಕರೆಗಳಷ್ಟು ಭೂಮಿಯನ್ನು ಕೊಟ್ಟಿದ್ದೀರಿ. ಸರ್ಕಾರದ ವಶದಲ್ಲಿ ೩ ಲಕ್ಷ ಎಕರೆಗಳಷ್ಟು ಭೂಮಿ ಇದ್ದರೂ ತಾವು ಹಂಚಿದ ತಕ್ಕಂಥಾದ್ದು ಕೇವಲ ೬೬ ಸಾವಿರ ಚಿಲ್ಲರೆ ಎಕರೆ ಮಾತ್ರ. ನಮಗೆ ಭೂಮಿಗೆ ಕೊರತೆ ಇದೆಯೋ ಇಲ್ಲವೋ ಎಂಬುದನ್ನು ತಾವು ಗಮನಿಸಬೇಕು. ಈ ಬಗ್ಗೆ ನಾನು ಹೇಳಬೇಕಾದರೆ ಕರ್ನಾಟಕದಲ್ಲಿ ಭೂಮಿಗೆ ಕೊರತೆ ಇಲ್ಲ. ನಮ್ಮ ಕರ್ನಾಟಕ ದೇಶದಲ್ಲಿ ಎಷ್ಟು ಭೂಮಿ ಇದೆ ಎಂದರೆ ೧ ಕೋಟಿ ೯೧ ಲಕ್ಷ ಹೆಕ್ಟೇರ್‌ಗಳಷ್ಟು ಭೂಮಿ ಇದೆ. ಇದರಲ್ಲಿ ನಾವು ೧ ಕೋಟಿ ೩೫ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಮಾತ್ರ ಬೆಳೆಯನ್ನು ಮಾಡುತ್ತಿದ್ದೇವೆ. ಇವತ್ತು ನಮ್ಮ ಉಪಯುಕ್ತತೆಗೆ ಸಿಕ್ಕತಕ್ಕಂಥಾದ್ದು ಇನ್ನೂ ಕೂಡ ೫೯ ಲಕ್ಷ ಹೆಕ್ಟೇರ್‌ಗಳಷ್ಟು ಭೂಮಿ ನಮ್ಮ ಕರ್ನಾಟಕದಲ್ಲಿದೆ. ಇಷ್ಟಾದರೂ ೧೩,೫೯,೫೯೭ ಎಕರೆಗಳಷ್ಟು ಭೂಮಿಯನ್ನು ಮಾತ್ರ ನೀರಾವರಿಯನ್ನಾಗಿ ನಾವು ಮಾಡಿದ್ದೇವೆ. ಭೂ ಸುಧಾರಣೆ ಎನ್ನುವದರ ನಿಜವಾದ ಅರ್ಥ ಎಂದರೆ ಯಾವ ಭೂಮಿಗೆ ಹೆಚ್ಚು ಉತ್ಪನ್ನ ಮಾಡುವ ಶಕ್ತಿ ಇಲ್ಲ, ಯಾವ ಭೂಮಿಗೆ ನೀರು ಇಲ್ಲ, ಆ ಭೂಮಿಗೆ ನೀರು ಕೊಟ್ಟು ಬೆಳೆಯನ್ನು ಬೆಳೆಯುವಂತೆ ಮಾಡತಕ್ಕಂಥ ಸುಧಾರಣೆ ಆಗಬೇಕೇ ವಿನಹ ಒಬ್ಬರ ಜಮೀನನ್ನು ಕಿತ್ತು ಇನ್ನೊಬ್ಬರಿಗೆ ಕೊಡತಕ್ಕಂಥ ಸುಧಾರಣೆ ಆಗಬಾರದು, ಅದು ಭೂಸುಧಾರಣೆ ಅಲ್ಲ. ತಾವು ಮಾಡುತ್ತಿರುವುದು ಕೇವಲ ಭೂ ವಿತರಣೆ ಮಾತ್ರ, ಆ ದೃಷ್ಟಿಯಿಂದ ಈ ಕರ್ನಾಟಕಕ್ಕೆ ಮಾತ್ರವಲ್ಲ, ಇಡೀ ಭಾರತಕ್ಕೆ ಈ ವಿಷಯದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಏನೆಂದರೆ ಇಡೀ ಭಾರತದಲ್ಲಿ ಭೂಮಿಗೇನೂ ಕೊರತೆಯಿಲ್ಲ. ೧೬೧ ಮಿಲಿಯನ್ ಹೆಕ್ಟೇರ್‌ಗಳಷ್ಟು ಭೂಮಿ ಭಾರತದಲ್ಲಿದೆ. ಇದರಲ್ಲಿ ೪೦ ಮಿಲಿಯನ್ ಹೆಕ್ಟೇರ್‌ನಷ್ಟು ಭೂಮಿಯಲ್ಲಿ ಮಾತ್ರ ಉಳುಮೆ ಮಾಡಿ ಅನ್ನವನ್ನು ಉತ್ಪತ್ತಿ ಮಾಡುತ್ತಿದ್ದಾರೆ. ತಮ್ಮ ೩೦ ವರ್ಷದ ಸಾಧನೆಯೊಳಗೆ ಎಷ್ಟು ಹೆಚ್ಚುವರಿ ಭೂಮಿ ಬಂದಿದೆ ಎಂದರೆ, ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳಿಗೂ ಪತ್ರ ಬರೆದು ಉತ್ತರ ತರಿಸಿಕೊಂಡು ಕೇಂದ್ರ ಮಂತ್ರಿಗಳಾದ ಶ್ರೀ ಬರ್ನಾಲರವರು ಈ ಭೂ ಸುಧಾರಣೆಯಿಂದ ೪೨.೫ ಲಕ್ಷ ಎಕರೆಗಳಷ್ಟು ಹೆಚ್ಚುವರಿ ಭೂಮಿ ಬಂದಿದೆ ಎಂದು ಹೇಳಿದ್ದಾರೆ ಇಂತಹ ಸುಧಾರಣೆ ಮಾಡುವುದಕೋಸ್ಕರ ಎಲ್ಲಾ ರೈತರ ತಲೆ ಹೊಡೆಯಬೇಕಾಗಿದೆ ನಮ್ಮಲ್ಲಿ ಭೂಮಿಗೆ ಯಾವುದೇ ವಿಧವಾದ ಕೊರತೆ ಇಲ್ಲ, ಆದರೆ ನಾವು ಅದನ್ನು ಹೇಗೆ ಉಪಯೋಗ ಮಾಡಿಕೊಳ್ಳಬೇಕೋ ಹಾಗೆ ಉಪಯೋಗ ಮಾಡಿಕೊಳ್ಳದೇ ಇರುವುದರಿಂದ ಇವತ್ತು ನಾವು ಇಷ್ಟು ಸಂಕಷ್ಟಕ್ಕೆ ಸಿಕ್ಕಿದ್ದೇವೆ. ಭೂ ಸುಧಾರಣೆ ಕಾನೂನು ಹೊಸದೇನೂ ಅಲ್ಲ. ತಾವು ಇದನ್ನು ಅತ್ಯಂತ ಅಭಿಮಾನದಿಂದ ಹೇಳಿಕೊಳ್ಳುತ್ತಿದ್ದೀರಿ. ಭೂ ನ್ಯಾಯ ಮಂಡಲಿಗಳ ಬಗ್ಗೆಯೂ ಕೂಡ ತಾವು ಹೊಸದಾಗಿ ಮಾಡಿದ್ದೇವೆಂದು ಹೇಳುತ್ತಿದ್ದೀರಿ, ನಮ್ಮ ಜನರಿಂದಲೇ ಕೂಡಿದ ಭೂ ನ್ಯಾಯ ಮಂಡಲಿಗಳಿಂದ ತೀರ್ಮಾನ ಮಾಡುವ ವ್ಯವಸ್ಥೆಯನ್ನು ತಂದಿದ್ದೇವೆಂದು ಬಹಳ ಹೆಮ್ಮೆಯಿಂದ ಹೇಳುತ್ತಿದ್ದೀರಿ, ಸರ್ಕಾರದ ಗಮನಕ್ಕೆ ಒಂದು ವಿಚಾರ ತರುತ್ತೇನೆ. ಬ್ರಿಟೀಷ್ ಸರ್ಕಾರವೇ ಇದನ್ನು ಪ್ರಯೋಗ ಮಾಡಿತ್ತು. ನ್ಯಾಯ ಮಂಡಲಿಗಳಲ್ಲಿರುವ ಮೊಕ್ಕದ್ದಮೆಗಳನ್ನು ಆಯಾಯಾ ದೇಶದ ಜನರೇ ತೀರ್ಮಾನ ಮಾಡುವಂತೆ ಒಂದು ವ್ಯವಸ್ಥೆಯನ್ನು ಮಾಡಿದ್ದರು. ಜ್ಯೂರಿ ಟ್ರಯಲ್ಸ್ ಅಸೆಸ್ಸಾರ್ ಟ್ರಯಲ್ಸ್ ಎಂದು. ಅದು ವಿಫಲವಾಗಿದೆ. ಇದರಿಂದ ಭ್ರಷ್ಟಾಚಾರ ಪಕ್ಷಪಾತ ನಡೆದು ಅನ್ಯಾಯವಾಗುತ್ತಿತ್ತು. ಹಿಂದೆ ಕಾಂಗ್ರೆಸ್ ಪಕ್ಷದ ಅಧಿವೇಶನದಲ್ಲಿ ಈ ಬಗ್ಗೆ ನಿರ್ಣಯ ಆಗಿದೆ ದಯವಿಟ್ಟು ಓದಿ ನೋಡಿ. ಕಾಂಗ್ರೆಸ್ ಸಂಸ್ಥೆ ಇವನ್ನು ರದ್ದುಗೊಳಿಸಬೇಕೆಂದು ಹೇಳಿತ್ತು. ಇದಕ್ಕಿಂತ ಒಂದು ಹೆಜ್ಜೆ ಮುಂದೆ ಹೋದರೆ ೧೯೫೪ರಲ್ಲಿ ಮದ್ರಾಸ್ ಸರ್ಕಾರ ಮೊಟ್ಟಮೊದಲನೆಯದಾಗಿ ೧೦೦ ರೂಪಾಯಿಗಳವರೆಗೆ ಇರತಕ್ಕ ಲೇವಾದೇವಿ ಬಗ್ಗೆ ತೀರ್ಮಾನ ಮಾಡತಕ್ಕಂಥ ಹಾಗೂ ಸಣ್ಣ ಪುಟ್ಟ ಕ್ರಿಮಿನಲ್ ಮೊಕ್ಕದ್ದಮೆಗಳನ್ನು ತೀರ್ಮಾನ ಮಾಡತಕ್ಕಂಥ ಬಗ್ಗೆ ಆಯಾ ಗ್ರಾಮದ ಅಧಿಕಾರಿಗೆ ಮತ್ತು ಖಾಸಗಿ ಜನರೇ ತೀರ್ಮಾನ ಮಾಡುವಂತ ಒಂದು ವ್ಯವಸ್ಥೆಯನ್ನು

ಜಾರಿಗೆ ತಂದಿತ್ತು. ಅದು ಅಸಮರ್ಪಕವೆಂದು ಗೊತ್ತಾದ ಮೇಲೆ ಅದನ್ನು ಕೈಬಿಡಲಾಯ್ತು. ಇವತ್ತು ಇದನ್ನೆಲ್ಲಾ ಒಳಗೊಂಡಂತೆ ಶಾಸನಗಳಿಗೆ ಅಳವಡಿಸಲಾಗಿದೆ. ಇದನ್ನು ನಾವು ಮಾಡಿರುವ ಹೆಮ್ಮೆಯ ಕೆಲಸ ಎಂದು ಹೇಳಿಕೊಳ್ಳುತ್ತಿದ್ದೀರಿ.

6-00 P.M.

ಹರಿಜನರ ಮತ್ತು ಗಿರಿಜನರ ಉದ್ಧಾರದ ಮಾತಿನ ಬಗ್ಗೆ ಶ್ರೀಮಾನ್ ಆರ್ಮುಗಂರವರು ಹೇಳುತ್ತಾರೆಂದು ತಿಳಿದುಕೊಂಡಿದ್ದೆ, ಅವರು ಹೇಳಲಿಲ್ಲ ನಮ್ಮ ಕರ್ನಾಟಕದಲ್ಲಿ ೪೦ ಲಕ್ಷ ಹರಿಜನ ಗಿರಿಜನರಿದ್ದಾರೆ. ೫ ಜನರಿಗೊಂದರಂತೆ ಲೆಕ್ಕಹಾಕಿದರೂ ೮ ಲಕ್ಷ ಕುಟುಂಬಗಳು ಇದ್ದಹಾಗೆ ಆಯಿತು. ಪ್ರತಿ ವರ್ಷವು ಕರ್ನಾಟಕ ರಾಜ್ಯದಲ್ಲಿ ಹರಿಜನ ಮತ್ತು ಗಿರಿಜನ ಉದ್ಧಾರಕ್ಕಾಗಿ ನಮ್ಮ ಅಂದಾಜಿನಲ್ಲಿ ೮ ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಕಳೆದ ಮೂವತ್ತು ವರ್ಷಗಳಿಂದ ಈ ಜನತೆಯ ಉದ್ಧಾರಕ್ಕಾಗಿ ೨೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆದರೆ ಇದರಿಂದ ೪೦ ಲಕ್ಷ ಹರಿಜನರ ಉದ್ಧಾರ ತಾವು ಮಾಡಿಲ್ಲ. ತಾವು ಮಾಡಿರುವುದು ಕಳೆದ ಮೂವತ್ತು ವರ್ಷಗಳಲ್ಲಿ ಎಂಟೂವರೆ ಜನ ಮಂತ್ರಿಗಳನ್ನು ಹಾಗೂ ಒಂದೂವರೆ ಜನ ಸಭಾಪತಿಗಳನ್ನು ಉದ್ಧಾರ ಮಾಡಿದ್ದೀರಿ. ಇವತ್ತು ಆ ಬಡ ಜನಕ್ಕೆ ನೀವು ಒಳ್ಳೆಯ ಕೆಲಸ ಮಾಡುವುದಕ್ಕೆ ತಯಾರಿಲ್ಲ. ಇವತ್ತು ವಿಧಾನಸೌಧದಲ್ಲಿರತಕ್ಕ ಒಬ್ಬ ಜವಾನ ಸತ್ತರೆ ಅವನ ಹೆಂಡತಿಗೆ ಮಾಸಾಸನ ಕೊಡುತ್ತೀರಿ. ಆದೇ ನಗರವನ್ನು ಚೊಕ್ಕಟವಾಗಿಡತಕ್ಕ ಕಸ ಗುಡಿಸತಕ್ಕ ಪೌರಕಾರ್ಮಿಕ ಸತ್ತರೆ ಅವನ ಹೆಂಡತಿಗೆ ಮಾಸಾಸನ ಕೊಡುತ್ತಿಲ್ಲ, ಈ ತಾರತಮ್ಯ ಏತಕ್ಕೆ ? ಇವತ್ತು ದಾಮಾಷಾ ಪ್ರಕಾರ ೧೮ ಪರ್ಸೆಂಟ್ ಏನು ಜಾಸ್ತಿ ಮಾಡಿದ್ದೇವೆಂದು ಹೇಳಿದ್ದೀರಿ, ಅದನ್ನು ಹಿಂದಿನಿಂದಲೂ ಮಾಡಿಕೊಂಡು ಬಂದಿದ್ದಾರೆ. ಹರಿಜನರ ಉದ್ಧಾರದ ಬಗ್ಗೆ ಕೆಲವು ಸಲಹೆಗಳನ್ನು ಇಲ್ಲಿ ಇಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ಬಡವರ ಉದ್ಧಾರಕ್ಕಾಗಿ ಮಾಡತಕ್ಕ ಕಾರ್ಯದ ಬಗ್ಗೆ ನಿಜವಾಗಿಯೂ ನಿಮಗೆ ಕಳಕಳಿ ಇದ್ದರೆ, ಮಾಡುವ ಮಾರ್ಗ ಬೇರೆ ಇದೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರ ಕೂಡ ಕೆಲವು ನೀತಿ ನಿಯಮಗಳನ್ನು ಅನುಸರಿಸುತ್ತದೆ ನಮ್ಮಲ್ಲಿರತಕ್ಕ ೪೦ ಲಕ್ಷ ಹರಿಜನರ ಪೈಕಿ ಕೆಲವು ಜನರಿಗೆ ಜಮೀನು ಇಲ್ಲ. ಸರ್ಕಾರವೇ ಸ್ವಂತ ಹಣ ಹಾಕಿ ಯಾರು ವ್ಯವಸಾಯದ ಕಸಬನ್ನು ಅವಲಂಬಿಸಿರುತ್ತಾರೆ. ಅಂತಹವರಿಗೆ ಎರಡು ಎಕರೆ ಗದ್ದೆ ಅಥವಾ ಎರಡು ಎಕರೆ ತೋಟವನ್ನು ಕೊಂಡುಕೊಡುವಂತೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿಲ್ಲವೆ ? ಸರ್ಕಾರ ಏತಕ್ಕೆ ಇಂಥ ಆಲೋಚನೆ ಮಾಡಿಲ್ಲ. ಪಾನನಿರೋಧದ ಬಗ್ಗೆ ಬಹಳ ಮಾತನಾಡುತ್ತೇವೆ. ಆದರೆ ಒಂದು ಮಾತು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕುಡಿಯುವುದಕ್ಕೆ ಹರಿಜನರು ಬೇಕು, ದುಡ್ಡು ಕೊಡೋದಕ್ಕೆ ಹರಿಜನರು ಬೇಕು, ದುಡಿಯುವುದಕ್ಕೆ ಹರಿಜನರು ಬೇಕು, ಆದರೆ ನೂರಾರು ಕೋಟಿ ರೂಪಾಯಿ ಆದಾಯ ಬರತಕ್ಕ ಈ ಬಾಬನ್ನು ವ್ಯಾಪಾರ ಮಾಡುವುದಕ್ಕೆ ಏತಕ್ಕೆ ಹರಿಜನರಿಗೆ ಕೊಡುವುದಿಲ್ಲ ಇವತ್ತು ಕೇಂದ್ರ ಸರ್ಕಾರ ಈ ಬಗ್ಗೆ ಆಲೋಚನೆ ಮಾಡಿದೆ. ಇಂಥಹ ಯಾವುದೇ ರೀತಿಯ ಲೈಸೆನ್ಸ್ ಮಾಡುವಾಗ ಒಂದು ಡಜನ್ ಲೈಸೆನ್ಸ್‌ಗಳಲ್ಲಿ ಒಂದನ್ನು ಹರಿಜನರಿಗೆ ಕೊಡಬೇಕಾಗುತ್ತದೆ. ಸಿಮೆಂಟ್ ಏಜೆನ್ಸಿ ಕೊಟ್ಟರೆ ಹರಿಜನರಿಗೆ ಕೊಡಿ. ಇವತ್ತು ಕೇಂದ್ರದಲ್ಲಿ ಇಂಪೋರ್ಟ್ ಎಕ್ಸ್‌ಪೋರ್ಟ್ ಬಗ್ಗೆ ಕೊಟ್ಟಿದ್ದಾರೆ. ಲಾಭ ಸಂಪಾದನೆ ಮಾಡುವಂತ ವ್ಯವಹಾರವನ್ನು ಅವರಿಗೆ ಕೊಡಿ,

ಶ್ರೀ ಕೆ. ಭಾಸ್ಕರ ನಾಯುಡು. —ಫಾರೀನ್ ಲಿಕ್ಕರ್ಸ್‌ಗೆ ಸಂಬಂಧಪಟ್ಟಂತೆ ಲೈಸೆನ್ಸ್ ಕೊಡುತ್ತಾ ಇರುವುದು ಕೇಂದ್ರ ಸರ್ಕಾರಕ್ಕೆ ಸೇರಿದ್ದು. ಅದರಲ್ಲಿ ಹತ್ತನೇ ಒಂದು ಭಾಗ ಹರಿಜನರಿಗೆ ಕೊಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ. —ಈ ಸರ್ಕಾರದ ಧೋರಣೆ ಬಸವರಾಜ ಬ್ರೀವರಿ ಅವರಿಗೆ ಲೈಸೆನ್ಸ್ ಕೊಡುವುದು.

ಶ್ರೀ ಹೆಚ್. ಗಂಗಾಧರನ್. ಹರಿಜನರಿಗೆ ದಾಮಾಷಾ ಕೊಡುವ ಪದ್ಧತಿಯು ೧೯೨೦ನೇ ಇಸವಿಯಿಂದಲೂ ನಡೆದುಕೊಂಡು ಬಂದಿದೆ. ಆದರೆ ಇದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ೩೦ ವರ್ಷದಿಂದ ಕೇರಳ ರಾಜ್ಯ ಇದನ್ನು ಅನುಸರಿಸಿಕೊಂಡು ಬಂದಿದೆ. ಈಗ ನಮ್ಮಲ್ಲಿ ಏನಾಗಿದೆ ಎಂದರೆ ೩೦ ವರ್ಷಗಳಿಂದ ೨೫೦ ಕೋಟಿ ರೂಪಾಯಿ ಹಣ ಖರ್ಚು ಮಾಡಿ ಎಂಟೂವರೆ ಜನ ಮಂತ್ರಿಗಳನ್ನು ಒಂದೂವರೆ ಜನ ಸಭಾಪತಿಗಳನ್ನು ಮಾಡಿರುವುದು ಮುಖ್ಯವಲ್ಲ. ಹರಿಜನ ಗಿರಿಜನರಿಗೆ ಎಲ್ಲಾ ಸೌಲಭ್ಯಗಳು ದೊರಕುವಂತೆ ಆಗಬೇಕು ಈಗ ತಾವುಬಿಹಾರ್ ಚರಿತ್ರೆ ಹೇಳುತ್ತಿದ್ದೀರಿ,ನಿಮ್ಮ ಹಣೆಬರಹ ನನ್ನ ಹತ್ತಿರ ಇದೆ ಅದು ಈಗ

ಜೇಡ ಬೇರೆಸಮುದಾಯದಲ್ಲಿ ಹೇಳುತ್ತೇನೆ. ಇಷ್ಟೊತ್ತು ಕೇರಳರಾಜ್ಯ ಅನುಸರಿಸಿಕೊಂಡು ಬರತಕ್ಕ ಬಗೆಗೆ ಯಾವ ಸಲಹೆ ಇದೆ, ಪದ್ಧತಿ ಏನು ಇದೆ, ಅದು ಗಮನಾರ್ಹವಾದುದು. ಈಗ ನಮ್ಮ ಆದಾಯ ವೆಚ್ಚದಲ್ಲಿ ಎಲ್ಲಾ ಕುಟುಂಬಗಳನ್ನು ಆರ್ಥಿಕವಾಗಿ ಒಂದು ಸಮತೋಲನಕ್ಕೆ ತರುವುದಕ್ಕೆ ವ್ಯವಸ್ಥೆ ಮಾಡಿದ ಮೇಲೆ.........

"1. Such families belonging to these communities who are above a particular ceiling of income should not get the benefit of reservation.

2. After every ten years there should be a review of the extent to which particular communities have benefited from reservation so that those who have caught up with the average may be struck off from the list of backward communities."

ಈ ಒಂದು ಪದ್ಧತಿಯನ್ನು ಕೇರಳ ಸರ್ಕಾರ ಚರ್ಚಿಸುತ್ತಿದೆ. ಈ ವಿಷಯವನ್ನು ಕೂಡ ಗಮನಿಸಬೇಕು ಎಂದು ನಮ್ಮ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ನನ್ನ ಭಾಷಣವನ್ನು ಮುಗಿಸುತ್ತಾ ಇರುವ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ನಮ್ಮ ಈ ವರ್ಷದ ಆಯವ್ಯಯ ಬಡ್ಜೆಟ್.........

The budget is politically-oriented ; it is not based on patriotic out look.

ರಾಜಕೀಯವನ್ನು ಅವಲಂಬಿಸಿರುವ ಈ ಆಯವ್ಯಯ ದೇಶಪ್ರೇಮದ. ದೇಶಅಭ್ಯುದಯದ ಹಿತ ಚಿಂತನೆಯನ್ನು ಅವಲಂಬಿಸಿರುವ ಆಯವ್ಯಯವಾಗಿಲ್ಲವೆಂದು ಹೇಳಿ ನನಗೆ ಭಾಷಣ ಮಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೂ, ನನ್ನ ಮಾತನ್ನು ಕೇಳಿದ ಮಾನ್ಯಸದಸ್ಯರಿಗೂ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER.—House now stands adjourned to meet again tomorrow at 9-00 A.M.

The House adjourned at Fifteen minutes past six of the Clock, to meet again at Nine of the Clock on Saturday the 17th June 1978.

WD 9098